ಶ್ರೀ ಜಗದೀಶ್ ಶೆಟ್ಟರ್:– Ok, Ok.

ಶ್ರೀ ವಾಟಾಳ್ ನಾಗರಾಜ್:– ಇನ್ನು ತುಮಕೂರು ಬಗ್ಗೆ ನೀವು ಮಾಡಿ. ನಾವು ಮಾಧುಸ್ವಾಮಿಯವರ ಪರವಾಗಿದ್ದೇವೆ.

ಅಧ್ಯಕ್ಷರು:– ಮಾನ್ಯ ಸಚಿವರು ನಿಮ್ಮೆಲ್ಲರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾರೆ ಬಿಡಿ.

[ಗೊಂದಲ]

ಮಾನ್ಯ ಯಡಿಯೂರಪ್ಪನವರು ಇಂದು ಮಧ್ಯಾಹ್ನ ಒಂದೂವರೆ ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟ ಏರ್ಪಾಡು ಮಾಡಿದ್ದಾರೆ. ತಾವೆಲ್ಲರೂ ಅಲ್ಲಿಗೆ ದಯಮಾಡಿಸಬೇಕೆಂದು ಅವರು ವಿನಂತಿ ಮಾಡಿದ್ದಾರೆ.

ಈ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ಮಧ್ಯಾಹ್ನ 1.55ಗಂಟೆಗೆ ಮುಂದೂಡಲಾಯಿತು. ಸದನವು ಪುನ: ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.]

(ಸದನವು ಬೋಜನ ವಿರಾಮದ ನಂತರ ಪುನ: 3 ಗಂಟೆ 12 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

3. ಹೇಳಿಕೆ:

ವಿಷಯ: ರೈತರ ಸಾಲ ಮನ್ನಾ ಮಾಡುವ ಬಗ್ಗೆ.

ಶ್ರೀ.ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ರಾಜ್ಯದ ಕೃಷಿಯು 2006–07ರ ಸಾಲಿನಲ್ಲಿ ಬರ ಮತ್ತು ಪ್ರವಾಹಕ್ಕೆ ತುತ್ತಾಗಿ ರೈತರು ತೀವ್ರ ತೊಂದರೆಗೊಳಗಾಗಿದ್ದಾರೆ. ಸರ್ಕಾರವು ರೈತರ ಸಂಕಷ್ಟಕ್ಕೆ ಸ್ಪಂದಿಸಿ ಅವರು ಸಹಕಾರ ಸಂಸ್ಥೆಗಳಿಂದ ಪಡೆದಿರುವ ಬೆಳೆ ಸಾಲವನ್ನು ಮನ್ನಾ ಮಾಡಲು ನಿರ್ಧರಿಸಿ ಈಗಾಗಲೇ 2007–08ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಕಟಿಸಲಾಗಿದೆ.

1–4–2006 ರಿಂದ 31–12–2006ರ ತನಕ 25 ಸಾವಿರ ರೂಪಾಯಿಗಳವರೆಗೆ ಪಡೆಯಲಾದ ಬೆಳೆಸಾಲವನ್ನು ಬಡ್ಡಿ ಸಹಿತ ಸಂಪೂರ್ಣ ಮನ್ನಾ ಮಾಡಲು ತೀರ್ಮಾನಿಸಲಾಗಿತ್ತು.

25 ಸಾವಿರ ರೂ.ಗಳಿಗಿಂತ ಮೇಲ್ಪಟ್ಟು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪಡೆದಿರುವ ರೈತರು ದಿನಾಂಕ 31–3–2007ರ ಒಳಗೆ ಪಾವತಿ ಮಾಡಿದರೆ ಆ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು. ಇದೇ ರೀತಿ ಅಲ್ಪಾವದಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪಡೆದು ಸುಸ್ತಿದಾರರಾಗಿರುವ ರೈತರು ಆ ಸಾಲಗಳ ಅಸಲನ್ನೂ ಕೂಡ 31–3–2007ರ ಒಳಗೆ

ಪಾವತಿಸಿದರೆ ಅವರಿಗೂ ಕೂಡ ಬಡ್ಡಿ ಮನ್ನಾ ಸೌಲಭ್ಯವನ್ನು ವಿಸ್ತರಿಸಲು ನಿರ್ಧರಿಸಲಾಗಿತ್ತು.

ಇದರಿಂದ ಸರ್ಕಾರಕ್ಕೆ ಸುಮಾರು 1,500 ಕೋಟಿ ರೂ.ಗಳ ಹೊರೆಯಾಗಲಿದ್ದು ಬೆಳೆವಿಮೆ ಹಾಗೂ ಇತರ ಮೂಲಗಳಿಂದ ಹಣ ಬಂದಾಗ್ಯೂ ಸುಮಾರು 1300 ಕೋಟಿ ರೂ.ಗಳ ಹೊರೆಯನ್ನು ಸರ್ಕಾರ ಭರಿಸಬೇಕಾಗುತ್ತದೆ. ಸರ್ಕಾರದ ಈ ರಿಯಾಯಿತಿ ಕ್ರಮವನ್ನು ರೈತರು. ರೈತ ಸಂಘಟನೆಗಳು, ರೈತಪರ ಸಂಸ್ಥೆಗಳು, ಪ್ರಜ್ಞಾವಂತ ಜನತೆ ಮತ್ತು ಕೃಷಿ ಅಭಿವೃದ್ಧಿ ಬಗ್ಗೆ ಆಸಕ್ತಿಯುಳ್ಳ ಪ್ರತಿಯೊಬ್ಬರೂ ಮೆಚ್ಚಿಕೊಂಡು ಸ್ವಾಗತಿಸಿದ್ದಾರೆ.

ಮುಂಗಡ ಪತ್ರದ ಮಂಡನೆಯ ನಂತರ ಹಲವು ಸ್ಥರಗಳಲ್ಲಿ ಈ ಬಗ್ಗೆ ಆಳವಾದ ಚರ್ಚೆಗಳು ಜರುಗಿರುವುದನ್ನು ಮಾಧ್ಯಮಗಳು ಬಿಂಬಿಸಿವೆ. ಇದನ್ನು ನಾನು ಗಮನಿಸಿದ್ದೇನೆ. ಸಾಲ ಮನ್ನಾ ಸೌಲಭ್ಯ ಸಂಬಂಧ ಕೆಲವರು 25 ಸಾವಿರ ರೂ.ಗಳ ಮಿತಿಯನ್ನು ವಿಸ್ತರಿಸುವ ಬಗ್ಗೆ ಪ್ರತಿಪಾದಿಸಿದ್ದಾರೆ. ರೈತರು ಎದುರುಸುತ್ತಿರುವ ಸಂಕಷ್ಟಗಳನ್ನು ನಾನು ಬಲ್ಲೆ. ರೈತನ ಮಗನಾಗಿ ಮತ್ತು ರೈತಪರ ಹೋರಾಟಗಾರನಾಗಿ ಸದಭಿಪ್ರಾಯಗಳಿಗೆ ಸಂವೇದನಾಶೀಲತೆಯಿಂದ ಪ್ರತಿಕ್ರಿಯಿಸುವ ಔಚಿತ್ಯವನ್ನು ಅರ್ಥಮಾಡಿ ಕೊಂಡಿದ್ದೇನೆ. ನಾಡಿನ ಅನ್ನದಾತ ರೈತರಿಗೆ ಎಷ್ಟು ನೆರವು ನೀಡಿದರೂ ಕಡಿಮೆಯೇ ಎಂಬುದು ನನ್ನ ಭಾವನೆ. ಅದರೂ ರಾಜ್ಯ ಸರ್ಕಾರದ ಹಣಕಾಸಿನ ಮಿತಿಯೊಳಗೆ ನೆರವು ಕಲ್ಪಿಸುವುದು ವಿತ್ತೀಯ ಶಿಸ್ತಿನ ದೃಷ್ಟಿಯಿಂದ ಅನಿವಾರ್ಯವಾಗುತ್ತದೆ.

ಪ್ರಸ್ತುತ ರಾಜ್ಯದ ರೈತರು ಎದುರಿಸುತ್ತಿರುವ ಬರ ಮತ್ತಿತರ ಸಂಕಷ್ಟಗಳನ್ನು ಪರಿಗಣಿಸಿ 1–2–2006 ರಿಂದಲೇ ಅನ್ವಯವಾಗುವಂತೆ ಸಹಕಾರಿ ಸಂಸ್ಥೆಗಳಲ್ಲಿ 50 ಸಾವಿರ ರೂ.ಗಳ ವರೆಗೆ ಬೆಳೆ ಸಾಲ ಪಡೆದಿರುವ ಎಲ್ಲಾ ರೈತರಿಗೂ 25 ಸಾವಿರ ರೂ.ಗಳ ಮಿತಿಗೊಳಪಟ್ಟು ಸಾಲ ಮನ್ನಾ ಸೌಲಭ್ಯವನ್ನು ವಿಸ್ತರಿಸಲು ನಿರ್ಧರಿಸಿದ್ದೇನೆ. ಈ ಸೌಲಭ್ಯ ನೇಕಾರರಿಗೂ ಹಾಗೂ ಮೀನುಗಾರರಿಗೂ ಕೂಡ ದೊರೆಯಲಿದೆ.

50 ಸಾವಿರ ರೂ.ಗಳ ವರೆಗೆ ಸಾಲ ಪಡೆದಿರುವ ರೈತರು 31–3–2007ರ ಒಳಗೆ 25 ಸಾವಿರ ರೂ.ಗಳ ಅಸಲನ್ನು ಬಡ್ಡಿ ರಹಿತವಾಗಿ ಪಾವತಿಸಿದರೆ ಉಳಿದ 25 ಸಾವಿರ ರೂ.ಗಳ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಲಾಗುವುದು.

ಸರ್ಕಾರದ ಈ ಕ್ರಮದಿಂದಾಗಿ 25 ಸಾವಿರ ರೂ.ಗಳ ವರೆಗೆ ಸಾಲ ಪಡೆದಿರುವ 5.95,962 ಮಂದಿ ರೈತರಿಗೆ ಸಾಲ ಮತ್ತು ಬಡ್ಡಿ ಸಹಿತ ಪೂರ್ಣ ಮನ್ನಾ ಸೌಲಭ್ಯ ದೊರೆಯಲಿದೆ. 25 ರಿಂದ 50 ಸಾವಿರ ರೂ.ಗಳ ವರೆಗೆ ಸಾಲ ಪಡೆದಿರುವ 1,18.076 ಮಂದಿ ರೈತರಿಗೂ ಇದೇ ಸೌಲಭ್ಯ ದೊರೆಯುತ್ತದೆ. 50 ಸಾವಿರ ರೂ. ಮೇಲ್ಪಟ್ಟು ಸಾಲ ಪಡೆದಿರುವ 1,16,012 ರೈತರಿಗೆ ಮತ್ತು 4.9 ಲಕ್ಷ ಮಂದಿ ಸುಸ್ತಿದಾರ ರೈತರಿಗೆ ಬಡ್ಡಿ ಮನ್ನಾ ಸೌಲಭ್ಯ ದೊರೆಯಲಿದೆ. ಅಂದರೆ

ಸಾಲಮನ್ನಾ ಮತ್ತು ಬಡ್ಡಿಮನ್ನಾ ಸೇರಿ ಒಟ್ಟು 13,63,850 ಮಂದಿ ರೈತರಿಗೆ ಅನುಕೂಲವಾಗಲಿದೆ.

ಸರ್ಕಾರ ತೆಗೆದುಕೊಂಡಿರುವ ಈ ದಿಟ್ಟ ನಿಲುವಿನಿಂದ ಸುಮಾರು 1950 ಕೋಟಿ ರೂ.ಗಳ ಹೊರೆಯಾಗಲಿದೆ. ಇದನ್ನು ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿ ಮತ್ತು ಸಂಪನ್ಮೂಲ ಸಂಗ್ರಹಣೆಯನ್ನು ಸುಧಾರಿಸಿ ಭರಿಸಿಕೊಳ್ಳಲಾಗುವುದು.

ಒಟ್ಟಿನಲ್ಲಿ ನಾಡಿನ ಅನ್ನದಾತ ರೈತನಿಗೆ ಕೊಟ್ಟ ಭರವಸೆಯನ್ನು ನೆರವೇರಿಸಲು ಸರ್ಕಾರ ಬದ್ಧವಾಗಿ ನುಡಿದಂತೆ ನಡೆದುಕೊಂಡಿದೆ ಎಂದು ಗೌರವಾನ್ವಿತ ಸದನದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾಡುವುದು ಮಾಡಿದ್ದೀರಿ, 50,000 ಮಿತಿ ಏಕೆ ಹಾಕುತ್ತಿದ್ದೀರಿ, ಒಂದು ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿರುವವರಿಗೂ 25,000 ರೂಪಾಯಿ consession ಕೊಟ್ಟು ಬಿಡಿ. 25,000 ಇದ್ದುದು 50,000 ರೂಪಾಯಿಗೆ ತೆಗೆದುಕೊಂಡು ಹೋಗಿದ್ದೀರಿ. ಎಷ್ಟೇ ಇರಲಿ 25,000 ರೂಪಾಯಿ ತಾನೆ, ತಾವು ಮನ್ನ ಮಾಡುವುದು. ಎಲ್ಲ ರೈತರಿಗೂ 25,000 ರೂಪಾಯಿ ಕೊಡುವಂತಹ ತೀರ್ಮಾನ ತೆಗೆದುಕೊಳ್ಳಿ ದಯವಿಟ್ಟು.

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಎಲ್ಲ ರೈತರಿಗೂ 25,000 ರೂಪಾಯಿ ಕೊಟ್ಟುಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಬಡ ರೈತರೆಲ್ಲಾ ಹಾಳಾಗಿರುವುದು ದೊಡ್ಡ ರೈತರಿಂದಲೇ, 25,000 ರೂಪಾಯಿಯ ಮಿತಿ ಅವರಿಗೂ ಹೋಗಲಿ. ಒಂದು ಲಕ್ಷ ಸಾಲ ಇರುವವರಿಗೂ 25,000 ರೂಪಾಯಿ ಮನ್ನ ಮಾಡಲಿ. ಏನಾಗುತ್ತದೆ? ಮಾನ್ಯ ಹಣಕಾಸಿನ ಸಚಿವರು ದೊಡ್ಡ ಮನಸ್ಸು ಮಾಡಬೇಕು. ಸಹಕಾರ ಸಂಘದವರು ಒಂದು ಲಕ್ಷ ರೂಪಾಯಿಗಿಂತ ಜಾಸ್ತಿ ಯಾರಿಗೂ ಸಾಲ ಕೊಡುವುದಿಲ್ಲ. 25,000 ಅವರಿಗೂ ಮನ್ನ ಮಾಡಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಎಲ್ಲ ರೈತರಿಗೂ 25,000 ರೂಪಾಯಿ ಮನ್ನ ಮಾಡಿದ್ದೀರಿ. ಮಾನ್ಯ ಯಡಿಯೂರಪ್ಪನವರೇ ನಿಮಗೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಜೆ.ಸಿ ಮಾಧುಸ್ವಾಮಿ: ಮಾಡುವುದು ಒಳ್ಳೆಯ ಕೆಲಸ ಮಾಡಿದ್ದೀರಿ. ಇನ್ನು ಸ್ವಲ್ಪದರಲ್ಲಿ 50,000 ರೂಪಾಯಿಗಳವರೆಗೆ ತಂದಿದ್ದೀರಿ. ಒಂದು ಲಕ್ಷ ರೂಪಾಯಿಯವರಿಗೂ ಕೊಡಿ. ರೈತ ಒಂದು ಲಕ್ಷ ರೂಪಾಯಿ ಹಣ ಹಾಕಿ ಮನೆ ಹಾಳು ಮಾಡಿಕೊಂಡಿರುತ್ತಾನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 31.3.07 ಎಂದರೆ ಇನ್ನು 10 ದಿವಸ ಮಾತ್ರ ಇದೆ. ದಯವಿಟ್ಟು ತಾವು ಆಲೋಚನೆ ಮಾಡಬೇಕು. 31.3.07 ಎಂದರೆ ಇನ್ನು 10 ದಿವಸಗಳು ಮಾತ್ರ ಉಳಿದಿವೆ. ಅದು ಆಗುವುದಿಲ್ಲ. ದಯವಿಟ್ಟು ಮೇ 31ರವರೆಗೆ

ಕಾಲಾವಕಾಶ ಕೊಡಿ. ರೈತರ ಹತ್ತಿರ ಹಣ ಇಲ್ಲ. ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. 31ರವರೆಗೆ ಸಮಯ ಬೇಡ ಮೇ 31ರವರೆಗೆ ವಿಸ್ತರಿಸಿ ಒಂದು ಲಕ್ಷ ರೂಪಾಯಿವರೆಗೂ ಎಲ್ಲ ರೈತರಿಗೂ 25,000 ರೂಪಾಯಿ ಮನ್ನ ಮಾಡಿ.

ಶ್ರೀ ಭೋಸರಾಜ್:- ಮಾನ್ಯಅಧ್ಯಕ್ಷರೆ, ಸಾಲಪಡೆಯತಕ್ಕಂಥಾದ್ದು ಮತ್ತು ಸಾಲವನ್ನು ತೀರಸತಕ್ಕಂಥದ್ದು ಸಾಮಾನ್ಯವಾಗಿ ಏಪ್ರಿಲ್ ಮೇ ನಂತರ ಮಳೆ ಬಂದು ನೀರು ಬಂದ ನಂತರವೇ, ಆದ್ದರಿಂದ ಸಾಲ ತೀರಿಸಲು ಜೂನ್‌ವರೆಗೂ ಅವಕಾಶ ಕೊಟ್ಟರೆ ಮಾತ್ರ ರೈತರಿಗೆ ಅನುಕೂಲವಾಗುವುದು. ಅದನ್ನು ಬಿಟ್ಟು ಮಾರ್ಚ್ 31ರೊಳಗೆ ಎಂದರೆ ಯಾವ ಭಾಗದಲ್ಲೂ ಕೂಡ ಹಾರ್ವೆಸ್ಟ್ ಈ ಸಮಯದಲ್ಲಿ ಆಗುವುದಿಲ್ಲ. ಆದುದರಿಂದ ಈ ಅವಧಿಯನ್ನು ಇನ್ನೂ ಮೂರು ತಿಂಗಳುಗಳವರೆಗೂ ವಿಸ್ತರಿಸಿ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಸಿದ್ದು ಸವದಿ:- ಎಲ್ಲ ರೈತರಿಗೂ 25 ಸಾವಿರ ರೂಪಾಯಿ ಮನ್ನಾ ಮಾಡಬೇಕು. ಯಾರು ಯಾರು ಸಹಕಾರಿ ಸಾಲವನ್ನು ಪಡೆದಿದ್ದಾರೆ ಅವರೆಲ್ಲರಿಗೂ 25 ಸಾವಿರ ಮನ್ನಾ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ರೈತರ ಸಂಕಷ್ಟ ಗೊತ್ತಿರುವಂಥ ಹಣಕಾಸಿನ ಸಚಿವನಾದ ಈ ಯಡಿಯೂರಪ್ಪ ಕಳೆದ ಮೂವತ್ತು ವರ್ಷದಿಂದ ಈ ರೈತ ಸಮೂಹ ನೆಮ್ಮದಿಯಿಂದ, ಗೌರವದಿಂದ ಬದುಕಬೇಕು ಎನ್ನುವುದಕ್ಕೆ ಹೋರಾಟ ಮಾಡಿಕೊಂಡು ಬಂದವನು. ಈ ನಾಡಿನ ಜನರ ಆಶೀರ್ವಾದದಿಂದ ಈ ಸ್ಥಾನದಲ್ಲಿ ನಿಂತಾಗ ಈ ದೇಶದಲ್ಲಿಯೇ ಮೊದಲ ಬಾರಿಗೆ 4% ಬಡ್ಡಿಗೆ ರೈತರಿಗೆ ಸಾಲ ಕೊಡುವಂಥ ಒಂದು ಐತಿಹಾಸಿಕ ನಿರ್ಧಾರವನ್ನು ಕಳೆದ ವರ್ಷದ ಆಯವ್ಯಯದಲ್ಲಿ ನಾವು ತೆಗೆದುಕೊಂಡೆವು. ಈಗ ನಾವು ಚರ್ಚೆ ಮಾಡುವಂಥ ಕಾಲದಲ್ಲಿ ನಾವು 01.04.86 ರಿಂದ ಯಾರು ಸಾಲವನ್ನು ಪಡೆದಿದ್ದಾರೆ ಅವರಿಗೆ 25 ಸಾವಿರದವರೆಗೂ ಮನ್ನಾ ಮಾಡುತ್ತೇವೆ. ಉಳಿದ ಹಣವನ್ನು ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ, ಎಲ್ಲಾ ಸಾಲಕ್ಕೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಆಯವ್ಯಯದಲ್ಲಿ ನಾವು ಹೇಳಿದ್ದೆವು. ಕೆಲವರು ಹೇಳಿದರು, ಧಾರವಾಡ ಮತ್ತು ಆ ಭಾಗದಲ್ಲಿ ಫೆಬ್ರವರಿಯಲ್ಲಿಯೇ ನಾವು ಬುಕ್ ಅಡ್ಜೆಸ್ಟ್‌ಮೆಂಟ್ ಅಥವಾ ಬೇರೆ ರೀತಿ ಸಾಲ ತೆಗೆದುಕೊಂಡು ಕೊಟ್ಟು ವ್ಯವಹಾರವನ್ನು ಮುಗಿಸಿರುತ್ತೇನೆ, ಆದುದರಿಂದ ನಾವು ಫೆಬ್ರವರಿಯಲ್ಲಿ ತೆಗೆದುಕೊಂಡಿರುತ್ತೇವೆ, ನಮಗೆ ಅನುಕೂಲವಾಗುವುದಿಲ್ಲವೆಂದು ಹೇಳಿದ್ದರಿಂದ ಆ ದಿನಾಂಕವನ್ನು 01.04.2006 ರಿಂದ ಎನ್ನುವ ಬದಲಿಗೆ ಇವೊತ್ತು ನಾನು ಇದರ ಬಗ್ಗೆ ಪುನರ್‌ಪರಿಶೀಲನೆಯನ್ನು ಮಾಡಿ 01.02.2006 ಎಂದು ಮಾಡಿದ್ದೇನೆ. ಇನ್ನು ಎರಡನೆಯದಾಗಿ 25 ಸಾವಿರದವರೆಗೂ ಸಾಲ ಪಡೆದಂಥವರು, 25 ರಿಂದ 50

ಸಾವಿರದವರೆಗೂ ಸಾಲ ಪಡೆದಂಥವರಿಗೂ 25 ಸಾವಿರದವರೆಗೂ ನಾವು ಅನುಕೂಲ ಮಾಡಿಕೊಟ್ಟಿರುವುದರಿಂದ ಇವೊತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಈ ರಾಜ್ಯದ ರೈತ ಸಮುದಾಯದವರಿಗೆ ಅನುಕೂಲವಾಗಿದೆ. ನಾನು ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, 50 ಸಾವಿರಕ್ಕಿಂತ ಮೇಲ್ಪಟ್ಟು 1,16,012 ಜನ ರೈತರು ಇದ್ದಾರೆ. ಅವರಿಗೂ ಸಹ ನಾವು ಬಡ್ಡಿ ಮನ್ನಾ ಮಾಡಿದ್ದೇವೆ. ಅಂದರೆ ಯಾರು ಎರಡು ಲಕ್ಷ ತೆಗೆದುಕೊಂಡಿದ್ದಾರೆ, ಮೂರು ಲಕ್ಷ ತೆಗೆದುಕೊಂಡಿದ್ದಾರೆ, ಸ್ವಲ್ಪ ಹೆಚ್ಚು ಕಡಿಮೆ ಬಡ್ಡಿ ಮನ್ನಾ ಯೋಜನೆಯಲ್ಲಿಯೇ ಅವನಿಗೆ 15 ರಿಂದ 20 ಸಾವಿರದವರೆಗೂ ಸವಲತ್ತು ಸಿಗುತ್ತದೆ. ನಾನು ಹಣಕಾಸಿನ ನಿರ್ವಹಣೆಯನ್ನೂ ಕೂಡ ಮಾಡಬೇಕಾಗುತ್ತದೆ. ಬರುವಂಥ ದಿವಸಗಳಲ್ಲಿ ಅನೇಕ ಬೇಡಿಕೆಗಳಿಗೆ ನಾನು ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ಅದಕ್ಕಾಗಿ ನಾನು ಗೌರವಾನ್ವಿತ ಸದಸ್ಯರಲ್ಲಿ ಹೇಳುತ್ತಿದ್ದೇನೆ, ಆಯವ್ಯಯದ ಮೇಲೆ ಚರ್ಚೆ ಆಗುವುದಕ್ಕಿಂತ ಮುಂಚೆಯೇ ಇವೊತ್ತು ಅನೇಕ ರೈತ ಸಂಘದ ಮುಖಂಡರು ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಿದ್ದನ್ನು ನಾನು ಮನವರಿಕೆ ಮಾಡಿಕೊಂಡ ಮೇಲೆ ಆ ಬಗ್ಗೆ ನಾನು ಮತ್ತು ಮುಖ್ಯಮಂತ್ರಿಗಳು ಚಿಂತನೆಯನ್ನು ಮಾಡಿ ಸುಧೀರ್ಘವಾದ ಚರ್ಚೆಯನ್ನು ಮಾಡಿ, ಮತ್ತೆ ಆಯವ್ಯಯದ ಮೇಲೆ ನಿಮಗೆ ಚರ್ಚೆ ಮಾಡುವುದಕ್ಕೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇವೊತ್ತು ಈ ಅವಧಿಯಲ್ಲಿ 50 ಸಾವಿರದವರೆಗೂ ಪಡೆದಿರುವಂಥ ರೈತರಿಗೆ 25 ಸಾವಿರ ಮನ್ನಾ ಮಾಡುವಂಥಾದ್ದು ಮತ್ತು ಈ ಸಾಲ ಪಡೆದಂಥ ಅವಧಿಯನ್ನು ಇವೊತ್ತು 01.04.2006 ಎನ್ನುವುದನ್ನು 01.02.2006 ಎಂದು ನಾನು ಬದಲಾಯಿಸಿದ್ದೇನೆ. ಇದರಿಂದ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ಅವೊತ್ತಿನಿಂದ ಇವೊತ್ತಿನವರೆಗೂ ರೈತರ ಸಾಲ ಮನ್ನಾ ಬಗ್ಗೆ ಚರ್ಚೆಯಾದಂಥ ಕಾಲದಲ್ಲಿ ಸೀಮಿತವಾದಂಥ ಒಂದು ಇತಿಮಿತಿಯೊಳಗೆ ಸಹಕಾರಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ. ರೈತರು ಸಿದ್ಧರಾಗಿದ್ದಾರೆ. ಯಾರು 50 ಸಾವಿರಕ್ಕಿಂತ ಜಾಸ್ತಿ ತೆಗೆದುಕೊಂಡಿದ್ದಾರೆ, ನಾನು ಅತ್ಯಂತ ವಿನಯದಿಂದ ವಿನಂತಿ ಮಾಡುತ್ತೇನೆ, ನಾನು ಬಡವರು, ಶ್ರೀಮಂತರು ಎಂದು ಭೇದಭಾವ ಮಾಡುವುದಕ್ಕೆ ಇಷ್ಟಪಡುವುದಿಲ್ಲವಾದರೂ ಸಹ ನಮ್ಮ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು, ಇವೊತ್ತು ಈ ಎಲ್ಲಾ ಕಾರ್ಯಕ್ರಮಗಳನ್ನು ನಾನು ಮಾಡುವುದಕ್ಕೆ ಸ್ವಲ್ಪ ಹೆಚ್ಚು ಕಡಿಮೆ 1950 ಕೋಟಿಯಾಗುತ್ತದೆ. ನಾನು ನನ್ನ ಎಲ್ಲ ಸ್ನೇಹಿತರಿಗೆ ಪಕ್ಷಬೇದ ಮರೆತು ವಿನಂತಿ ಮಾಡುತ್ತೇನೆ, ದಯಮಾಡಿ ತಾವು ಸಹಕಾರವನ್ನು ಕೊಟ್ಟರೆ ರೈತರು ತಕ್ಷಣ ಹಣವನ್ನು ತುಂಬಿದರೆ ನಾನು ಅಯವ್ಯಯದಲ್ಲಿ ಇಷ್ಟೇ ಅಲ್ಲದೆ 500 ಕೋಟಿ ರೂಪಾಯಿಗಳನ್ನು ತಕ್ಷಣ ಪೂರಕ ಅಂದಾಜಿನಲ್ಲಿ ಸಹಕಾರಿ ಸಂಘಕ್ಕೆ ತಕ್ಷಣ ಹಣವನ್ನು ಕಟ್ಟುವುದಕ್ಕೆ ನಾನು ವ್ಯವಸ್ಥೆ ಮಾಡಿದ್ದೇನೆ. ಮುಂದೆ ಬರುವಂಥ ದಿವಸಗಳಲ್ಲಿ ಸಹಕಾರಿ ಸಂಘಗಳು ಸರಿಯಾದ ರೀತಿಯಲ್ಲಿ ನಡೆಯಬೇಕಾಗುತ್ತದೆ. ಆದರೆ ಮಾಧುಸ್ವಾಮಿಯವರು ಹಾಗೂ ಇತರ ಸದಸ್ಯರುಗಳ ಕಳಕಳಿ ನನಗೆ

ಅರ್ಥವಾಗುತ್ತದೆ. ನಾವು ಬಿ.ಜೆ.ಪಿ., ಜೆ.ಡಿ.ಎಸ್. ಎಂದೇನೂ ಅಲ್ಲ. ನಾನು ಮತ್ತು ಮುಖ್ಯಮಂತ್ರಿಗಳು ಕುಳಿತುಕೊಂಡು ಎಲ್ಲರ ಚಿಂತನೆಯನ್ನು ಅರ್ಥ ಮಾಡಿಕೊಂಡು, ನಾವೇನು ಈ ವ್ಯವಸ್ಥೆಯನ್ನು ಮಾಡಿದ್ದೇವೆ ಇದರಲ್ಲಿ ಏನೂ ಬದಲಾವಣೆಯನ್ನು ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ. ಹಣಕಾಸಿನ ಪರಿಮಿತಿಯೊಳಗೆ ಇದನ್ನು ನಾನು ಮಾಡಿದ್ದೇನೆ. ದಯಮಾಡಿ ತಾವೆಲ್ಲರೂ ಸಹಕರಿಸಿ, ಮತ್ತೆ ಇದರ ಅವಧಿ ವಿಸ್ತರಣೆ ಆಗುತ್ತದೆ ಎನ್ನುವುದಾಗಲಿ, ಮತ್ತೆ ಯಾವುದೇ ಕಾರಣಕ್ಕೆ ಇದರಲ್ಲಿ ಏನಾದರೂ ಬದಲಾವಣೆಯಾಗುತ್ತದೆ ಎನ್ನುವುದು ಸಾಧ್ಯವೇ ಇಲ್ಲ. ನಾನು ರಾಜ್ಯದ ರೈತ ಸಮುದಾಯಕ್ಕೆ ವಿನಂತಿ ಮಾಡುತ್ತೇನೆ. ಸಾಲ ಪಡೆದಂಥ ರೈತರ ಯಾರದೇ ಕಿವಿಮಾತಿಗೆ ಅವಕಾಶವನ್ನು ಮಾಡಿಕೊಡದೇ ಈ 31.03.2007 ರೊಳಗಾಗಿ ಸಾಲವನ್ನು ಕಟ್ಟುವುದರ ಮೂಲಕ ಸಾಲ ಮನ್ನಾ ಯೋಜನೆಯ ಉಪಯೋಗ ಮಾಡಿಕೊಳ್ಳಬೇಕೆಂದು ಈ ಸದನದ ಮೂಲಕ ರೈತರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಯಡಿಯೂರಪ್ಪನವರೆ, ಈಗಾಗಲೇ ತಾವು 25 ಸಾವಿರವನ್ನು 50 ಸಾವಿರದವರೆಗೆ ವಿಸ್ತರಿಸಿರುವುದರ ಬಗ್ಗೆ ಎಲ್ಲರೂ ಸ್ವಾಗತ ಮಾಡಿದ್ದಾರೆ. ನಮ್ಮದೂ ಕೂಡ ಅದರ ಬಗ್ಗೆ ಎರಡನೆಯ ಅಭಿಪ್ರಾಯ ಇಲ್ಲ. ಆದರೆ ಇದರಲ್ಲಿ ನೀವು ಕೊಟ್ಟಂಥ ಸಮಯ ಎಷ್ಟು ಎಂದರೆ ಕೇವಲ ಮಾರ್ಚ್ ಎಂಡ್‌ವರೆಗೆ ಮಾತ್ರ. ಅಂದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ವಾರ ಸಮಯ ಕೂಡ ಇಲ್ಲ. ಈಗಾಗಲೇ 130 ತಾಲ್ಲೂಕುಗಳಲ್ಲಿ ಬರಗಾಲವಿದೆಯೆಂದು ಘೋಷಣೆಯನ್ನು ಮಾಡಲಾಗಿದೆ. ನ್ಯಾಚುರಲಿ ಯಾವ ರೈತರು ಎಂಟಿತ್ತು ದಿವಸಗಳಲ್ಲಿ ಈ ಬಡ್ಡಿ ಸಹಿತ 25 ಸಾವಿರ ತುಂಬುವುದಕ್ಕಾಗುತ್ತದೆ? ಅಥವಾ ಉಳಿದಂಥ ರೈತರಿಗೆ ನೀವು ನಿಗದಿ ಮಾಡಿದಂಥ ಸಮಯದೊಳಗೆ ಸಾಲವನ್ನು ತುಂಬುವುದಕ್ಕೇ ಸಾಧ್ಯತೆ ಇದೆಯೇ ಎಂಬುದನ್ನು ತಾವೇ ಯೋಚನೆ ಮಾಡಿ. ತಾವು ಮಾಡಿದಂಥದ್ದು ಅಥವಾ ತಮ್ಮ ಉದ್ದೇಶ ತಮ್ಮ ಇಂಟೆನ್‌ಶನ್ ಚೆನ್ನಾಗಿರಬಹುದು. ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಮಯ ಬೇಕಲ್ಲ. ಇವೊತ್ತು ಮತ್ತೆ ಸಾಲ ಕೊಡುವುದಕ್ಕೆ ಅಥವಾ ನೀವು ಮಾಡಿದಂಥ ಎಂಟು ಹತ್ತು ದಿವಸಗಳಲ್ಲಿಯೇ ಇಡೀ ರಾಜ್ಯದಲ್ಲಿ ಸಾಧ್ಯವಿದೆಯೆ? ಇವೊತ್ತೇನು 130 ತಾಲ್ಲೂಕುಗಳಲ್ಲಿ ಬರಗಾಲ ಬಂದು ಅವರುಗಳು ಬಹಳ ತೊಂದರೆಯಲ್ಲಿ ಇದ್ದಾರೆ ಎನ್ನತಕ್ಕಂಥ ಭಾವನೆ ನಿಮಗೂ ಕೂಡ ಮನವರಿಕೆ ಇರುವಾಗ ನೀವು ಈ ದಿನಾಂಕವನ್ನು ಏಕೆ ಸೀಮಿತಗೊಳಿಸುತ್ತೀರಿ? ಇದು ಒಂದು ಪ್ರಶ್ನೆ. ಇನ್ನು ಈಗಾಗಲೇ ಎಲ್ಲ ಸದಸ್ಯರು ಹೇಳಿದಂತೆ ಇದಕ್ಕೆ ಲಿಮಿಟ್ ಏಕೆ? ಈಗಾಗಲೇ ತಮ್ಮ 70 ಲಕ್ಷ ರೈತರಲ್ಲಿ ಅನೇಕ ರೈತರು ಕೋ-ಅಪರೇಟಿವ್ ಒಂದು ಬಿಟ್ಟರೆ ಉಳಿದವರೆಲ್ಲರೂ ಕೂಡ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡವರೂ ಇದ್ದಾರೆ ಮತ್ತು ಸಾಹುಕಾರರ ಹತ್ತಿರ ಸಾಲ ಮಾಡಿದವರೂ ಇದ್ದಾರೆ. ಅವರಿಗಂತೂ ಏನೂ

ಸಿಗುವುದಿಲ್ಲ, ಆ ಮಾತು ಬೇರೆ. ಆದರೆ ಕನಿಷ್ಟ ಪಕ್ಷ ನೀವು ಕೋ-ಅಪರೇಟಿವ್‌ನಿಂದ ಸಾಲ ತೆಗೆದುಕೊಂಡವರಿಗೆ ಮನ್ನಾ ಮಾಡುತ್ತಿದ್ದೀರಿ. ಇದರಿಂದ ರೈತ ಸಮುದಾಯದಲ್ಲಿ ಒಂದು ಭಾಗದವರಿಗೆ ಇವೊತ್ತು ಅನುಕೂಲವಾಗುತ್ತಿದೆ. ಉಳಿದವರಿಗೆ ಅನಾನುಕೂಲವಾಗುತ್ತಿದೆ. ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ನೀವೂ ಕೂಡ ಅದಕ್ಕೆ ಪರಿಹಾರವನ್ನು ಕಂಡಿಹಿಡಿದಿಲ್ಲ. ಆದರೆ ನಾನು ಕೇಳತಕ್ಕಂಥದ್ದು ಇಷ್ಟೆ, ನೀವು 50 ಸಾವಿರ ಸಾಲ ತೆಗೆದುಕೊಂಡಿರುವವರಿಗೆ ಕೊಟ್ಟಂಥ ರಿಯಾಯಿತಿಯನ್ನು ಎಲ್ಲರಿಗೂ ಕೊಡಬೇಕು. ಅವರು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಎರಡು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಮೂರು ಲಕ್ಷ ರೂಪಾಯಿ ತೆಗೆದುಕೊಂಡಿರಲಿ, ಯಾವುದೇ ಲಿಮಿಟ್ ಇಲ್ಲದೇ ಅವರಿಗೂ ಕೂಡ 25 ಸಾವಿರ ರೂಪಾಯಿಯನ್ನು ಮನ್ನಾ ಮಾಡತಕ್ಕಂಥಾದ್ದು ಆಗಲಿ. ಇದಲ್ಲದೇ ನೀವೇನು ಟೈಂ ನಿಗದಿ ಮಾಡಿದ್ದೀರಿ ಅದನ್ನು ಕಡೇಪಕ್ಷ ಜೂನ್ ಫಸ್ಟ್‌ವರೆಗೆ ನೀವು ವಿಸ್ತರಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ನಿಮಗೆ ಗೊತ್ತಿರುವಂತೆ ಬ್ಯಾಂಕ್‌ನ ಸಮಯ ಕೂಡ ಅದೇ ಇದೆ. ಬ್ಯಾಂಕ್‌ನವರು ಕೂಡ ಫಸ್ಟ್ ಜೂನ್‌ನಿಂದಲೆ ಅನೇಕ, ಈ ಕ್ರಾಪ್ ಲೋನ್ ಬಗ್ಗೆ ಮತ್ತಿತರವುಗಳ ಬಗ್ಗೆ ಲೆಕ್ಕ ಪತ್ರಗಳನ್ನು ಕೊಡತಕ್ಕಂಥದ್ದು ಮಾಡುತ್ತಾರೆ. ದಯವಿಟ್ಟು ಈ ಕೆಲಸವನ್ನು ನೀವು ಮಾಡಿ, ನಾನೇನು ತಿಳಿದುಕೊಂಡಿದ್ದೇನೆ ಎಂದರೆ, ಬಜೆಟ್ ಮೇಲೆ ಎಲ್ಲರ ವಿಚಾರಧಾರೆಗಳನ್ನು ನೀವು ಕೇಳಿಕೊಂಡು ಕೊನೆಗೆ ನೀವು ಏನಾದರೂ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು ಎನ್ನುವ ರೀತಿ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೆ. ಅದೇನೇ ಇರಲಿ ಮುಖ್ಯಮಂತ್ರಿ ಮತ್ತು ನಿಮ್ಮ ಪೈಪೋಟಿಯಲ್ಲಿ ಇವೊತ್ತು ಮೊದಲೇ ಹೇಳಬೇಕು ಎಂದು ಹೇಳಿರಬೇಕು. ಸಂತೋಷ. ನಾವು ಸ್ವಾಗತ ಮಾಡುತ್ತೇವೆ. ಅದಕ್ಕೆ ನಮ್ಮ ಬಿನ್ನಾಭಿಪ್ರಾಯವಿಲ್ಲ. ಆದರೆ ಈ ಮನವಿಯನ್ನು ನೀವು ಪರಿಗಣಿಸಬೇಕು. ಯಡಿಯೂರಪ್ಪನವರೆ, ನೀವು ಮಾತನಾಡುವಾಗ ನಾನೇನೂ ಇನ್ನು ಯಾರ ಮಾತು ಕೇಳುವುದಿಲ್ಲ, ಇದು ಕೊನೆ ಎಂದು ಹೇಳಿದಿರಿ. ಆದರೆ ಕೊನೆ ಎಂದೂ ಆಗುವುದಿಲ್ಲ. ರೈತರ ಬಗ್ಗೆ ಚಿಂತನೆ ಮಾಡತಕ್ಕಂಥ ಮನುಷ್ಯನಿಗೆ ಕೊನೆ ಎಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಸಮಸ್ಯೆಗಳಿವೆ. ಸಾವಿರಾರು ಕೋಟಿ ಕೊಟ್ಟರೂ ಕೂಡ ರೈತರ ಸಮಸ್ಯೆ ಇವೊತ್ತು ಬಗೆಹರಿಯುವುದಿಲ್ಲ. ನೀವು ಇವೊತ್ತು ಕೊಡತಕ್ಕಂಥಾದ್ದು ಕೇವಲ ಎಂಟು ಹತ್ತು ಲಕ್ಷ ಜನರಿಗೆ ಮಾತ್ರ ಅನುಕೂಲವಾಗಬಹುದು. ಆದರೆ ಉಳಿದ ಇನ್ನೂ 60 ರಿಂದ 70 ಸಾವಿರ ಪಟ್ಟದಾರರು ಹಾಗೆಯೇ ಉಳಿಯುತ್ತಾರೆ. ಆ ಮಾತು ಬೇರೆ. ಅದಕ್ಕಾಗಿ ಎಲ್ಲರ ಅಭಿಪ್ರಾಯವೂ ಇದೆ. ಇದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಡಿಸ್ಟ್ರೆಸ್‌ನಲ್ಲಿ ಭಾರಿ ಕಷ್ಟಕ್ಕೆ ಒಳಗಾಗುವವರು ದೊಡ್ಡ ರೈತರೆ. ಅವರು ಭಾರಿ ಸಾಲ ತೆಗೆದುಕೊಂಡು, ಭಾರಿ ಬಂಡವಾಳ ಹಾಕಿ, ಭಾರಿ ನಷ್ಟ ಮಾಡಿಕೊಳ್ಳುವವರು, ಜಾಸ್ತಿ ಜಮೀನು

ಇಟ್ಟುಕೊಂಡು ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳ ಸಾಲ ಮಾಡಿರುವ ಜನರುಗಳೇ ಭಾರಿ ತೊಂದರೆಗೆ ಒಳಗಾಗುವುದು. ನೀವು ವಾಸ್ತವವಾಗಿ ಯೋಚನೆಯನ್ನು ಮಾಡಬೇಕು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೆ, ಬರಗಾಲ ಎಲ್ಲರಿಗೂ ಬಂದಿದೆ. 50 ಸಾವಿರದವರೆಗೆ ಲಿಮಿಟ್ ಏಕೆ ಮಾಡುತ್ತೀರಿ? ನೀವೇನೂ ಲಾಂಗ್ ಟರ್ಮ್ ಲೋನ್‌ಗಳಿಗೆ ರಿಬೇಟ್ ಕೊಡುತ್ತಿಲ್ಲ, ನಮ್ಮ ಪಿ.ಎಲ್.ಡಿ. ಬ್ಯಾಂಕ್‌ನಿಂದ ಮಾಡಿರುವ ಸಾಲಕ್ಕೆ ರಿಬೇಟ್ ಕೊಡುತ್ತಿಲ್ಲ. ತಾವು ಕೊಡುತ್ತಿರುವುದು ಕೇವಲ ವಿ.ಎಸ್.ಎಸ್.ಎನ್.ಎಲ್.ನಲ್ಲಿ ತೆಗೆದುಕೊಂಡಿರುವ ಸಾಲಕ್ಕೆ ಮಾತ್ರ. ಅವನು ಇದರಲ್ಲಿ ಎಷ್ಟು ತೆಗೆದುಕೊಳ್ಳಬಹುದು? maximum 1 ರಿಂದ 3 ಲಕ್ಷ 5 ಲಕ್ಷ ತೆಗೆದುಕೊಂಡಿರಬಹುದು. ಯಾರು ಜಾಸ್ತಿ ಸಾಲ ತೆಗೆದುಕೊಂಡಿದ್ದಾನೆ ಅವನು ಇವೊತ್ತು ಜಾಸ್ತಿ ತೊಂದರೆಗೆ ಒಳಗಾಗುತ್ತಿದ್ದಾನೆ.

ಯಾರು ಜಾಸ್ತಿ ಸಾಲ ತೆಗೆದುಕೊಂಡಿದ್ದಾನೆ, ಅವನು ಇವತ್ತು ಜಾಸ್ತಿ ತೊಂದರೆಗೆ ಒಳಗಾಗುತ್ತಾನೆ. ಅವನಿಗೆ ಏನಾದರೂ ಕನಿಕರ ತೋರಿಸಬೇಕಲ್ಲ. ನಾವು ಸಾಲ ಎಲ್ಲಾ ಮನ್ನಾ ಮಾಡಿ ಎಂದು ಕೇಳುವುದಿಲ್ಲ. ಸಹಕಾರಿ ಸಂಘದಲ್ಲಿ ಸಾಲ ತೆಗೆದುಕೊಂಡಿರುವ ಎಲ್ಲರಿಗೂ 25 ಸಾವಿರ ರೂಪಾಯಿ ಮನ್ನಾ ಮಾಡುತ್ತೇವೆ ಎಂದು ತಾವು ನಿರ್ಧಾರಕ್ಕೆ ಬರಬೇಕು. ಹಣವನ್ನು ಒಂದು ವಾರದೊಳಗೆ ಕಟ್ಟುವುದಕ್ಕೆ ಆಗುವುದಿಲ್ಲ. ಅದಕ್ಕೆ ಅವಧಿಯನ್ನು May endವರೆಗಾದರೂ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು. ಏಕೆಂದರೆ ಆದಾದನಂತರ June ತಿಂಗಳಿನಿಂದ ಅವರಿಗೆ ಹೊಸ ಸಾಲವನ್ನು ಕೊಡಬೇಕು. ಅದುದರಿಂದ ಅಲ್ಲಿಯವರೆಗೂ ಅವಕಾಶ ಕೊಡಬೇಕು.

ಡಾ.ಕೆ.ಅನ್ನದಾನಿ: May end ಅಲ್ಲ, ಕನಿಷ್ಟ ಆರು ತಿಂಗಳಾದರೂ ಅವಕಾಶ ಮಾಡಿಕೊಡಬೇಕು. ವಾಟಾಳ್ ನಾಗರಾಜ್‌ರವರೆ May endಗೆ ಯಾರಿಗೆ ಕಟ್ಟುವುದಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ಇದು ರೈತರಲ್ಲಿ ತಾರತಮ್ಯ. ಇದರಲ್ಲಿ ಒಬ್ಬರಿಗೆ ಅನುಕೂಲ, ಇನ್ನೊಬ್ಬರಿಗೆ ಅನಾನುಕೂಲ ಮಾಡುವಂತಹ ರೀತಿಯಲ್ಲಿ ಆಗಬಾರದು. ಇದನ್ನು ಪ್ರಾಮಾಣಿಕವಾಗಿ ಎಲ್ಲರೂ ಒಪ್ಪುವಂತಹ ರೀತಿಯಲ್ಲಿ ಮಾಡಬೇಕಾಗಿರುವುದು ಅವರ ಕರ್ತವ್ಯ. ಎರಡನೆಯದಾಗಿ, ಒಂದು ವಾರ ಏನು ರೈತರಿಗೆ ಅವಕಾಶ ಕೊಟ್ಟಿದ್ದಾರೆ, ಅದಕ್ಕೆ ಮೇ ತಿಂಗಳ ಕೊನೆಯವರೆಗೆ ಅವಕಾಶ ಕೊಡಬೇಕು ಎಂದು ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿದ್ದಾರೆ, ಅದಕ್ಕೆ ನಾನು ಕೂಡ ಬೆಂಬಲವನ್ನು ಕೊಡುತ್ತಿದ್ದೇನೆ. ಇನ್ನೊಂದು ವಿಚಾರ ಏನೆಂದರೆ ನಮಗೆ ಯಾರಿಗೂ ಕೂಡ ಈ ರೀತಿ ಹೇಳಿಕೆ ಕೊಡುತ್ತಾರೆಂದು ಗೊತ್ತಿರಲಿಲ್ಲ. ಬಹಳ ಗೌಪ್ಯವಾಗಿ ತಕ್ಷಣ ಈ ಹೇಳಿಕೆ ಕೊಟ್ಟಿರುವುದು ನೋಡಿದರೆ ಮಾನ್ಯ ಯಡಿಯೂರಪ್ಪನವರು ಏಕೆ ತೀರ್ಮಾನ ಇಷ್ಟು ಗೌಪ್ಯವಾಗಿ ಇಟ್ಟಿದ್ದರು ಎಂದು

ಅನಿಸುತ್ತದೆ. ಸಾಮಾನ್ಯವಾಗಿ ಆಯವ್ಯಯ ಮಂಡನೆ ಅದ ಮೇಲೆ, ಆಯವ್ಯಯದ ಮೇಲೆ ಸಮಗ್ರವಾಗಿ ಚರ್ಚೆಯಾಗಬೇಕು. ಚರ್ಚೆಯಾದ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವು ಈ ರೀತಿ ಮಾಡಿದ್ದೇವೆ ಎಂದು ಹೇಳಿದಾಗ, ನಾವು, ರೈತರಿಗೆ ಕೊಟ್ಟಿರುವುದು ಸರಿಯಲ್ಲ, ಇನ್ನೂ ಜಾಸ್ತಿ ಕೊಡಬೇಕು, ಬೇರೆ ರೈತರಿಗೂ ಕೊಡಬೇಕೆಂದು ನಮ್ಮ ಒತ್ತಾಯವಾದ ಮೇಲೆ ನಿಮ್ಮ ಒತ್ತಾಯವನ್ನು ಮನ್ನಿಸಿ ನಾನು ಮಾಡುತ್ತೇನೆ ಎಂದು ಹೇಳಬೇಕು. ಆದರೆ ನೀವು ತಕ್ಷಣ ಈ ಒಂದು ತೀರ್ಮಾನಕ್ಕೆ ಬರಬೇಕಾದರೆ ನೀವು ಮಾಡಿರುವುದು ಸಂತೋಷವೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಿಕ್ಸರ್ ಹೊಡೆಯಬೇಕು ಎಂದು Chief Ministerಗಿಂತ ಮೊದಲೇ ಒಂದು announce ಮಾಡಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಒಟ್ಟಾಗಿ ತೆಗೆದುಕೊಂಡ ತೀರ್ಮಾನವಿದು. ಈ ತೀರ್ಮಾನ ಯಡಿಯೂರಪ್ಪನದು ಅಲ್ಲ. ಇದು ಸಮ್ಮಿಶ್ರ ಸರ್ಕಾರದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಅವರಿಗೆ ಮಧ್ಯಾಹ್ನದಲಿ time ಸಿಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಆ ತೀರ್ಮಾನ ಇದ್ದರೆ, ಆ ತೀರ್ಮಾನಕ್ಕೆ ನಿಮ್ಮ ಎಡದಲ್ಲಿ ಅವರು ಕುಳಿತಿಲ್ಲ. ಇದು ರೈತರ ಪ್ರಶ್ನೆ, ಬಹಳ ಗಂಭೀರವಾಗಿದೆ. ನಾವೆಲ್ಲರೂ ಗಮನ ಕೊಡುತ್ತೇವೆ. ಇದರಲ್ಲಿ ವಿರೋಧ ಇಲ್ಲ. ಇದನ್ನು ಪೂರ್ಣವಾಗಿ ಅಭಿನಂದಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದರ ಬಗ್ಗೆ ಧೈರ್ಯವಾಗಿ ತೀರ್ಮಾನವನ್ನು ತೆಗೆದುಕೊಂಡು ಹೋಗಿ, ನಾವು ಜೊತೆಯಲ್ಲಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಆದರೆ ನೀವು ಈ ಒಂದು ಹೇಳಿಕೆ ಮಂಡಿಸಿದಿರಲ್ಲ, ಇದು ಅಷ್ಟು ಸುಲಭವಾಗಿ ಚಿಂತನೆ ಮಾಡುವುದಲ್ಲ. ಇದರ ಹಿಂದೆ ಬಹಳ ಗಾಢವಾದಂತಹ ವಿಚಾರವಿದೆ. ಸಂತೋಷ, ರೈತರ ಪರ ನೀವು, ಮುಂದೆ ಹೋಗಿದ್ದೀರಿ, ನಮಗೆ ಸಂತೋಷ. ಆದರೆ ನೀವು ದೊಡ್ಡ ರೈತರು ಸಣ್ಣ ರೈತರು ಎಂದು ಭೇದಭಾವನೆ ಮಾಡುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಹಕಾರಿ ಸಾಲ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಪಡೆದಿರುವವರ ಸಂಖ್ಯೆ ಬಹಳ ಕಡಿಮೆ. ದಯವಿಟ್ಟು ಅವರ ಬಗ್ಗೆ ಸ್ವಲ್ಪ ಕರುಣೆ ತೋರಿ. ನೀವು ಮಾಡುವುದು 25 ಸಾವಿರ ಅಷ್ಟೇ. ಒಂದು ಲಕ್ಷ , ಎರಡು ಲಕ್ಷ, ಐದು ಲಕ್ಷ ಇದ್ದರೂ ಕೂಡ ಅಷ್ಟೇ. ಹಾಗಾಗಿ ಅವರಿಗೂ ವಿಸ್ತರಣೆ ಮಾಡಬೇಕು. ಏಕೆಂದರೆ PLD Bankನಲ್ಲಿ ಸಾಲ ಮಾಡಿರುವವರಿಗೆ ಏನೂ ಪ್ರಯೋಜನವಾಗುತ್ತಿಲ್ಲ. ಬೇರೆ Bank ನಿಂದ ಕೂಡ ಏನೂ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಇದನ್ನು ಒಂದು ಲಕ್ಷ ರೂಪಾಯಿಗೆ ಮಾಡಬೇಕೆಂದು ನನ್ನ ಒತ್ತಾಯ. ಮುಖ್ಯವಾಗಿ ತಾವು ಈ ತಿಂಗಳು 31 ಕ್ಕೆ last date ಏನು ಮಾಡಿದ್ದೀರಿ, ಇದು

ಪ್ರಾಯೋಗಿಕವಲ್ಲ. ದಯವಿಟ್ಟು ಆಲೋಚನೆ ಮಾಡಿ. ಇವತ್ತು 22ನೇ ತಾರೀಖಿನಲ್ಲಿದ್ದೇವೆ. ನಾಳೆ 23ನೇ ತಾರೀಖು, ಮಧ್ಯೆ ರಜೆ ಬರುತ್ತದೆ. 31ನೇ ತಾರೀಖು ಎಂದರೆ 5 ರಿಂದ 6 ದಿವಸ ಕೂಡ ಉಳಿಯುವುದಿಲ್ಲ. ಇಷ್ಟು ಬೇಗ ಹಣ ಕಟ್ಟುವುದಕ್ಕೆ ರೈತರ ಹತ್ತಿರ ಹಣ ಇದೆಯಾ? ಇದು ರೈತರ ಹತ್ತಿರ ಹಣ ಇರುವಂತಹ ಸಂದರ್ಭವೆ? ಅವರು ಎಲ್ಲಿಂದ ತಂದು ಕಟ್ಟುವುದು? ನೀವೇ ಬರಗಾಲ declare ಮಾಡಿದ್ದೀರಿ. ಆದರೆ ಒಂದಂತೂ ಸತ್ಯ. ನೀವು ಏನು ಇದನ್ನು ಮಾಡಿದ್ದೀರಿ, ಇದನ್ನು ಸ್ವಾಗತ ಮಾಡುತ್ತೇವೆ. ಆದರೆ ನಮಗೆ ಎಲ್ಲೋ ಒಂದು ಕಡೆ ನಿಮ್ಮಲ್ಲಿ ಗೊಂದಲ ಕಾಣುತ್ತಿದೆ. ಏಕೆಂದರೆ ನಾಳೆ Legislature Party Meeting ಸೇರುವವರು ಇದ್ದೀರಿ. ಅಲ್ಲಿ ಚರ್ಚೆ ಮಾಡುವುದಕ್ಕೆ ಮೊದಲೇ ಇಲ್ಲಿ announce ಮಾಡುತ್ತಿದ್ದೀರಿ ಎಂದರೆ ಏನೋ ಒಂದು ರೀತಿ ವಾಸನೆ ನಮಗೆ ಬರುತ್ತಿದೆ. ಯಾವುದೋ ಒಂದು ಬಟ್ಟವಾದ ಗುಮಾನಿ ಬರುತ್ತಿದೆ. ನಾಳೆ Legislature Party Meetingನಲ್ಲಿ ಚರ್ಚೆಯಾಗುತ್ತಿರಲಿಲ್ಲವಾ? ಇವತ್ತು announce ಏಕೆ ಮಾಡಬೇಕಾಗಿತ್ತು? ನಾಳೆ ಮಾಡಿದ್ದರೆ ಏನಾಗುತ್ತಿತ್ತು? ಇದೆಲ್ಲಾ ನಮಗೆ ಗೊತ್ತಾಗುತ್ತದೆ, ಇರಲಿ. ಏನೇ ಇರಲಿ ನಿಮಗೆ ಹೆಸರು ಬರಲಿ.

ಶ್ರೀ ಆರಗ ಜ್ಞಾನೇಂದ್ರ: ಅವರಿಬ್ಬರೂ joint ಆಗಿ ಚರ್ಚೆ ಮಾಡಿಕೊಂಡಿದ್ದಾರೆ. ಇಷ್ಟು ಒಳ್ಳೆಯ ಕೆಲಸ ಮಾಡಿದಾಗಲೂ ತಾವು ರಾಜಕೀಯ ವಾಸನೆ ಕಾಣುವುದು ತಪ್ಪಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ನಾವು ಸ್ವಾಗತ ಮಾಡಿದ್ದೇವೆ. ಎಲ್ಲರಿಗೂ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರಿಗೆ ಒಳ್ಳೆಯದಾಗಲಿ, ನಿಮಗೂ ಒಳ್ಳೆಯ ಹೆಸರು ಬರಲಿ, ನಮ್ಮದೇನೂ ತಕರಾರು ಇಲ್ಲ. ನಾವು ಇರುವ ವಿಚಾರವನ್ನು ಹೇಳುತ್ತಿದ್ದೇವೆ, ದಯವಿಟ್ಟು ಈ ಎರಡು ಅಂಶಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಿಸಬೇಕು. ಒಂದು ಲಕ್ಷ ರೂಪಾಯಿವರೆಗೂ 25 ಸಾವಿರ ರೂಪಾಯಿ ಮನ್ನಾ ಮಾಡಬೇಕು ಮತ್ತು ಅದಕ್ಕೆ ಮೇ 31ರವರೆಗೂ ಸಮಯ ಕೊಡಿ. ನಿಮಗೆ ಗೊತ್ತಿಲ್ಲವೇ, ರೈತರ ಹತ್ತಿರ ದುಡ್ಡಿಲ್ಲ.

ಶ್ರೀ ಕೆ.ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೂರು ವಿಷಯಗಳು.

ಅಧ್ಯಕ್ಷರು: ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ. ಅವರು ಮಾತನಾಡಿದ್ದು ಆದಮೇಲೆ ಮಾತನಾಡಿ.

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮೊನ್ನೆ Budget ಮಂಡನೆ ಮಾಡಿದ್ದಾರೆ Budget ಬಗ್ಗೆ ಇನ್ನೂ ಕೂಡ ಚರ್ಚೆ ಪ್ರಾರಂಭವಾಗಿಲ್ಲ, ಅದರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕಾಗಿದೆ. ಸಾಕಷ್ಟು

ವಿಚಾರಗಳು ಕೂಡ ಪ್ರಸ್ತಾಪವಾಗಬೇಕಾಗಿದೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡತಕ್ಕಂಥ ಪೂರ್ವದಲ್ಲಿ ಸಾಲ ಮನ್ನಾ ಮಾಡುವಂಥಾದ್ದು, ಸಾರಾಯಿ ರದ್ದತಿ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ರಾಷ್ಟ್ರಪತಿಯವರು ಬಂದಿದ್ದರು. ಆಗ ನಾನು ಹೋಗಿದ್ದೆ. ಅವರು ಬಹಿರಂಗವಾಗಿ "ಸಾರಾಯಿ ರದ್ದತಿ ಮಾಡುತ್ತಿದ್ದೇನೆ, ತಮಗೆ ಒಪ್ಪಿಗೆ ಇದೆಯೇ" ಎಂದು ಕೇಳಿಕೊಂಡರು. ಈಗ ಕೊನೆಗೆ ರೈತರಿಗೆ 25 ಸಾವಿರ ರೂಪಾಯಯವರೆಗೆ ಸಾಲ ಮನ್ನಾ ಮಾಡಿದ್ದೀರಿ. ಇವತ್ತು 31ನೇ ತಾರೀಖಿನ ದಿವಸ ಪಾವತಿ ಮಾಡಬೇಕೆಂದು ಇದೆ. ನಾನು ಈಗ ಬಂದೆ, ನಾನು ನೋಡಿದ್ದು ಏನೆಂದರೆ 50 ಸಾವಿರ ರೂಪಾಯಿಯವರೆಗೆ ಎಂದು ಹೇಳಿದಿರಿ. ಈಗಾಗಲೇ ಮಾನ್ಯ ಖರ್ಗೆಯವರು ಹಾಗೂ ಶ್ರೀರಾಮರೆಡ್ಡಿಯವರು ಕೂಡ ಮಾತನಾಡಿದ್ದಾರೆ. ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿಯಾದಾಗ ಶ್ರೀಮಾನ್ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದರು. ಇದಕ್ಕೆ ಸಮ್ಮಿಶ್ರ ಸರ್ಕಾರದಲ್ಲಿ Common Minimum Programme ನಲ್ಲಿ ಆರು ಪರ್ಸೆಂಟ್‌ನಲ್ಲಿ ಬಡ್ಡಿ ಕೊಡುವಂತಹ ವಿಚಾರದಲ್ಲಿ ಬಹಳ ದೀರ್ಘವಾಗಿ ಚರ್ಚೆಯಾಗಿ, ಅದಕ್ಕೆ ಒಮ್ಮತದ ಅಭಿಪ್ರಾಯ ಬಂದಮೇಲೆ ನಾವು ಬಜೆಟ್ ಮಂಡನೆ ಮಾಡಿದಮೇಲೆ, ನಮ್ಮ ಎರಡು ಪಕ್ಷಗಳಲ್ಲಿ ನಮ್ಮಲ್ಲಿ ಯಾವತ್ತಿಗೂ ಕೂಡ ಅಪಸ್ವರ ಬರಲಿಲ್ಲ. ಆದರೆ ಇವತ್ತು ಬಜೆಟ್ ಮಂಡನೆ ಮಾಡಿದಮೇಲೆ ಬೇರೆ ಕಡೆ ಅಪಸ್ವರ ಬರುತ್ತಿದೆ. ಇದನ್ನು ಈಗ ಪ್ರಸ್ತಾಪ ಮಾಡುತ್ತಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲಿ 128 ತಾಲ್ಲೂಕುಗಳಲ್ಲಿ ಬರ ಇದೆ. ಕುಡಿಯುವ ನೀರಿನ ತೊಂದರೆ ಇದೆ. ಬರದ ಬಗ್ಗೆ ಕೆಲಸವಾಗುತ್ತಿಲ್ಲ, ಅದು ತಮಗು ಕೂಡ ಗೊತ್ತಿರಬಹುದು. ಇಂತಹ ಸಂದರ್ಭದಲಿ ಘೋಷಣೆಗಳ ಮುಖಾಂತರ ಇಷ್ಟು ಮನ್ನಾ ಮಾಡಿದ್ದೇವೆ ಎಂದು ಹೇಳಿದರೆ, ರೈತರು ಯಾವರೀತಿಯಾಗಿ ಪಾವತಿ ಮಾಡುತ್ತಾರೆ? ಅವರ ಹತ್ತಿರ ಇರುವಂತಹ ಆಭರಣಗಳನ್ನು ಮತ್ತು ತಮ್ಮ ಕೈಯಲ್ಲಿ ಇರುವಂತಹ ವಸ್ತುಗಳನ್ನು ಮಾರಾಟ ಮಾಡಿ ಕೊಡಬೇಕಾಗುತ್ತದೆ. ಆದುದರಿಂದ ಈಗ ತಾವೇನು 50 ಸಾವಿರ ಎಂದು ಮಾಡಿದ್ದೀರಿ ಅದನ್ನು ಒಂದು ಲಕ್ಷ ರೂಪಾಯಿಯವರೆಗೆ ಎಂದು ಮಾಡಿ.., ಕೇವಲ ನಿಮ್ಮ ಹೇಳಿಕೆ ಈ ರೈತನಿಗೆ, ಬಡವನಿಗೆ ಏನೋ ಒಂದು ಮಾಡಿದ್ದಾರೆ ಎನ್ನುವುದು ಬಂದಿದೆ. ಅದನ್ನು ನಾವು ಒಪ್ಪುತ್ತೇವೆ. ಅದರಲ್ಲಿ ಬಹಳ ದೊಡ್ಡ psychological ಆಗಿ ಏನು ಆಗಿದೆ, you have created an atmosphere. ಆದರೆ ಒಂದು ದಿನ ಬರುತ್ತದೆ, ಎಷ್ಟು ರೈತರ ಬಗ್ಗೆ ಕಾಳಜಿ ಇದೆ? ಸಾರಾಯಿ ರದ್ದತಿಯಿಂದ ಆಗುವಂತಹ ಪರಿಣಾಮ ಏನು? A day will come. ಇವತ್ತು ರಾಜ್ಯದ ಜನತೆ ಕೂಡ ಪ್ರತಿಭಟನೆ ಮಾಡುತ್ತಾರೆ. ಇದು ತಿಳಿದಿರಬಹುದು. ನಾನು ಬಹಳ ದೊಡ್ಡ ಕೆಲಸ ಮಾಡಿದ್ದೇನೆ, ಇದಕ್ಕೆ ಪ್ರಚಾರ ಸಿಗುತ್ತದೆ ಎನ್ನವುದಲ್ಲ. ಆದುದರಿಂದ ಇದನ್ನು ಕೂಡ ಸರಿಯಾದ ರೀತಿಯಿಂದ ನೋಡಿ. ಇವತ್ತು

ಯಾರ್‍ಯಾರು ಏನೇನು ಸಲಹೆ ಸೂಚನೆಗಳನ್ನು ಕೊಡುತ್ತೇವೆ, ಅದರ ಪ್ರಕಾರ ಒಮ್ಮತದ ಅಭಿಪ್ರಾಯ ಬರಬೇಕು. ಇದು ಇವತ್ತು ಹುಡುಗಾಟ ಅಲ್ಲ. ರೈತರಿಗೆ ಇಷ್ಟು ಬೇಗ ಹೇಗೆ ಸಾಧ್ಯವಾಗುತ್ತದೆ? ಈಗಾಗಲೆ ನಮ್ಮ ಸದಸ್ಯರುಗಳಾದ ಶ್ರೀ ಮಾಧುಸ್ವಾಮಿ ಹಾಗೂ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಏಕೆಂದರೆ ಆ ಜನರ ಬಗ್ಗೆ ಅವರಿಗೆ ಕಳಕಳಿ ಇದೆ. ಇನ್ನು ಬೇರೆ ವಿಚಾರಗಳು ಕೂಡ ಇದ್ದರೂ, ಇದು ರೈತರಿಗೆ ಸಾಧ್ಯವಾಗಲಾರದಂತಹ ಕೆಲಸ. ನಾವು ಮಾಡುವುದು ಮಾಡಿದ್ದೇವೆಂದು ಹೇಳುವುದಲ್ಲ. ನೀವು ಕೂಡ ರೈತರು ಎಂದು ಹೇಳಿದ್ದೀರಿ. ರೈತರ ವಿಚಾರದಲ್ಲಿ ಸಾಕಷ್ಟು ಬಾರಿ ಎದ್ದು ನಿಂತಿದ್ದೀರಿ, ಪ್ರತಿಭಟನೆ ಮಾಡಿದ್ದೀರಿ. ಕೊನೆಯದಾಗಿ ಮಾಡಿದ್ದೇನೆ ಎನ್ನುವಂತಹ ಮಾತನ್ನು ಕೂಡ ಹೇಳುತ್ತಿದ್ದೀರಿ. ಆದರೆ ಇದನ್ನು ಸರಿಯಾದ ರೀತಿಯಲ್ಲಿ ರೈತರಿಗೆ ಲಾಭವಾಗುವಂತಹ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ. ಸುಮ್ಮನೆ ಹೆಸರಿಗೆ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಆಗಬಾರದು. ಮಾನ್ಯ ಯಡಿಯೂರಪ್ಪನವರೇ ಚಿಂತನೆ ಮಾಡಿ. ನೀವು ಚಿಂತನೆ ಮಾಡಿಲ್ಲ. ದಿವಂಗತ ದೇವರಾಜು ಅರಸು ಅವರ ಕಾಲದಲ್ಲಿ ಮಾನ್ಯ ಎಂ.ವೈ. ಘೋರ್ಪಡೆಯವರು ಹಣಕಾಸು ಸಚಿವರಾಗಿದ್ದರು. ನಿಮ್ಮ ರೀತಿಯಲ್ಲಿ cheap popularityಗೋಸ್ಕರ ಸಿದ್ದರಾಮಯ್ಯನವರು ಕೂಡ ಆಶ್ವಾಸನೆ ಕೊಡಬಹುದಾಗಿತ್ತು. ಅವರು ಹಾಗೆ ಕೊಡಲಿಲ್ಲ ಏಕೆಂದರೆ ಇವತ್ತು ಬಜೆಟ್ ಬರುವಂತಹ ದಿವಸದಲ್ಲಿ ಕರ್ನಾಟಕ ರಾಜ್ಯದಲ್ಲಿ Financial crisis ಅಗತಕ್ಕಂಥ ರೀತಿಯಲ್ಲಿ ಬಜೆಟ್ ಮಂಡನೆ ಮಾಡಿದ್ದೀರಿ. ಅದು ಏನೇ ಇರಲಿ ರೈತರಿಗೆ ನಿಜವಾದ ಲಾಭವಾಗುವಂತಹ ರೀತಿಯಲ್ಲಿ solid ಆಗಿ ನಮ್ಮ ಎದುರುಗಡೆ ಇಲ್ಲ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ(ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಚರ್ಚೆಯಾದ ನಂತರ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಇವರ ಮೂರು ಅಂಶಗಳು ಯಾವುದೆಂದರೆ, ಮೊದಲನೆಯದಾಗಿ ಯಾರು ಖಾರೀಫ್‌ನಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ, ಅಂಥವರು ಈ ಮಾರ್ಚ್ 31ನೇ ತಾರೀಖಿನೊಳಗೆ ಹಣವನ್ನು ಕಟ್ಟಬೇಕೆಂಬುದು ಇದೆ. ಇದರಲ್ಲಿ ನಾನು ಏನು ಸಲಹೆಯನ್ನು ಮಾಡುತ್ತೇನೆಂದರೆ, 2006--07ನೇ ಸಾಲಿನಲ್ಲಿ ತೆಗೆದುಕೊಂಡಿರುವಂತಹ ಬೆಳೆ ಸಾಲವೆಂದು ನಮೂದು ಆಗಬೇಕು. ನೀವು ಈಗ ಅದನ್ನು ಫೆಬ್ರವರಿಯಿಂದ ಮಾಡಿದರೆ, ಅದು ಬರೀ ಖರೀಫ್ ಸಾಲಕ್ಕೆ ಮಾತ್ರ ಬರುತ್ತದೆ. ಅದು ರಬಿ ಸಾಲಕ್ಕೆ ಬರುವುದಿಲ್ಲ. ರಬಿ ಬೆಳೆಗೆ ನವೆಂಬರ್, ಡಿಸೆಂಬರ್, ಜನವರಿ ತಿಂಗಳಲ್ಲಿ ಸಾಲವನ್ನು ತೆಗೆದುಕೊಂಡಿರುತ್ತಾರೆ. ನೀವು ರೈತರನ್ನೆ ಎರಡು ಭಾಗ ಮಾಡಿದ ಹಾಗೆ ಆಗುತ್ತದೆ, ಹಾಗಾಗಿ ಈ ಬೆಳೆ ಸಾಲವೆಂದರೆ, ಅಲ್ಪಾವಧಿ ಸಾಲಗಳನ್ನು ಮನ್ನಾ ಮಾಡುವಂಥಾದ್ದು. ಇದು ಸರ್ಕಾರ ಸಹಕಾರ ಸಂಘಗಳಿಗೆ ತುಂಬಿ ಕೊಡುವಂಥಾದ್ದು, ಮನ್ನಾ ಮಾಡುವಂಥಾ ಪದವನ್ನು

ಉಪಯೋಗ ಮಾಡುವಂಥಾದ್ದಕ್ಕೆ ನನ್ನ ವಿರೋಧವಿರುವುದು. ಏಕೆಂದರೆ ಸಹಕಾರ ಸಂಘಗಳಲ್ಲಿ ಇರುವಂಥದು depositors ಹಣ ಇದೆ. ಆ ಹಣದಲ್ಲಿ ಸಾಲವನ್ನು ಕೊಟ್ಟಿರುವಂಥಾದ್ದು. ನೀವು ಅವರು ಕೊಟ್ಟಿರುವಂಥ ಸಾಲಕ್ಕೆ ಸರ್ಕಾರ ಹಣವನ್ನು ತುಂಬಿಕೊಡುವಂಥಾದ್ದು ಆಗಬೇಕೆ ಹೊರತು, ನೀವು ಮನ್ನಾ ಮಾಡಿದ್ದೇವೆಂದರೆ, ಇದು ಭೂ ಕಂದಾಯವೇ? ಮನ್ನಾ ಮಾಡಿದ್ದೇವೆಂದು ನೀವು ಘೋಷಣೆ ಮಾಡುವುದಕ್ಕೆ, ಇದು ಸರಿಯಾದಂಥ ಪದ ಬಳಕೆಯಲ್ಲ. ಇದನ್ನು ತಾವು ಸರಿಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇದು ಮೊದಲಿನಿಂದಲೂ ಮಾನ್ಯ ಸಿದ್ಧರಾಮಯ್ಯನವರು ಇದ್ದಾಗಿನಿಂದಲೂ ಇದ್ದೇ ಇದೆ. ಈಗ ನಾನು ಮುಖ್ಯವಾಗಿ ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಇದು 2006-07ನೇ ಸಾಲಿನಲ್ಲಿ ತೆಗೆದುಕೊಂಡಿರುವಂಥ ಬೆಳೆ ಸಾಲಕ್ಕೆ ಅನ್ವಯವಾಗುವ ರೀತಿಯಲ್ಲಿ ಒಂದು ಸರ್ಕಾರಿ ಆದೇಶ ಬರಬೇಕಾಗುತ್ತದೆ. ಈ 25,000 ರೂಪಾಯಿಗಳನ್ನು ಮೊದಲು ಗೊತ್ತು ಮಾಡಿರುವಂಥಾದ್ದು ದಿ:1.4.2006ರಂದು decision ತೆಗೆದುಕೊಂಡಿದೆಯೆಂದು ಮಾಡಿರತಕ್ಕಂಥಾದ್ದು. ಈ ರೀತಿಯಾಗಿ cut off date ಇರುವಂಥಾದ್ದು ಸರಿಯಾದಂಥಾದ್ದು ಆಗುವುದಿಲ್ಲ. ಏಕೆಂದರೆ ಒಂದೊಂದು ಭಾಗದಲ್ಲಿ ಒಂದೊಂದು ಸಾರಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಮಾನ್ಸೂನ್ ಯಾವಾಗ ಬರುತ್ತದೆ? ಉತ್ತರ ಕರ್ನಾಟಕ ಭಾಗದಲ್ಲಿ ಬೇರೆ ಸಮಯದಲ್ಲಿ ತೆಗೆದುಕೊಳ್ಳುತ್ತಾರೆ, ಹಾಗೆ ಅಂದಾಕ್ಷಣಕ್ಕೆ ನೀವು ಈ ರೀತಿ ದಿನಾಂಕವನ್ನು ಇಡುವುದರಿಂದ ರೈತರಲ್ಲಿ ಒಂದು ರೀತಿಯಲ್ಲಿ ಗೊಂದಲವುಂಟಾಗುತ್ತದೆಂಬುದು ಒಂದಂಶ. ಎರಡನೆಯ ಅಂಶ ಮುಖ್ಯವಾದುದೆಂದರೆ, 25,000 ರೂಪಾಯಿಗಳವರೆಗೂ ನೀವು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದೀರಿ, ಸಂತೋಷ. ಆದರೆ 25,000 ರೂಪಾಯಿಗಳಿಗಿಂತ ಹೆಚ್ಚಿಗೆ ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೆ. ಅವರಿಗೂ ಕೂಡ 25,000ರೂಪಾಯಿಗಳವರೆಗೂ ಮನ್ನಾ ಮಾಡಿ, ಬಾಕಿ ಇರುವ ಹಣವನ್ನು ಬಡ್ಡಿಯನ್ನು ಬಿಡುತ್ತೇವೆಂದರೆ, ಬಹಳ ಸಂತೋಷ, ಬಡ್ಡಿ ಬಿಟ್ಟರೂ ಅಸಲನ್ನು ತೆಗೆದುಕೊಂಡರು ಎನ್ನುವಂಥಾದ್ದು ಆಗುತ್ತದೆ. ತಾವು ಮಾರ್ಚ್ 31ನೇ ತಾರೀಖನ್ನು ಏನು date ನಿಗದಿ ಮಾಡುತ್ತೇವೆಂದು ಹೇಳುತ್ತೀರಿ. ಅದು ವ್ಯವಹಾರಿಕವಾಗಿ banking accounts close ಆಗುವುದರಿಂದ ಕನಿಷ್ಟ ಶೇ.50, 60ರಷ್ಟಾದರೂ recovery ಮಾಡಬೇಕಾಗುತ್ತದೆ, ತಾವು 31ನೇ ತಾರೀಖಿನವರೆಗೂ ದಿನಾಂಕವನ್ನು ನಿಗದಿ ಮಾಡಿ. ಆಗಲೂ ಬರಲಿಲ್ಲವೆಂದರೆ ಬೇಕಾದರೆ extension ಮಾಡಿದರೆ ಆಗುತ್ತದೆ. ಆ ರೀತಿ ಮಾಡದಿದ್ದರೆ ಸಹಕಾರಿ ಸಂಸ್ಥೆಗಳ ಆರೋಗ್ಯವನ್ನು ಹಾಳು ಮಾಡುತ್ತೀರಿ. 31ನೇ ತಾರೀಖಿನೊಳಗೆ ವಸೂಲಾತಿಯಾಗಲಿಲ್ಲವೆಂದರೆ, ಯಾವ ಯಾವುದು ಹಣ ವಸೂಲಾತಿ ಬರಲಿಲ್ಲವೆಂದರೆ NPA ಎಂದು provision ಮಾಡಬೇಕಾಗುತ್ತದೆ. ಅವೆಲ್ಲಾ balance sheetನಲ್ಲಿ negative ಆದರೆ ನಾಳೆ

ದಿವಸ ಯಾರೂ ಸಾಲವನ್ನು ಕೊಡುವುದಿಲ್ಲ. ನೀವು ನಬಾರ್ಡ್‌ನಿಂದ ಏನಾದರೂ refinance ತೆಗೆದುಕೊಳ್ಳಬೇಕಾದರೆ ನಮ್ಮ net ಮತ್ತು balance sheet ಅನ್ನು ನೋಡಿಯೇ ಕೊಡುವಂಥಾದ್ದು, ಇಲ್ಲವೆಂದರೆ ನೀವು ಸರ್ಕಾರಿ guarantee ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಸರ್ಕಾರಿ guaranteeಗೆ ಬರುತ್ತಿದ್ದಾಗಲೇ ನೀವು ಶೇ.1ರಂತೆ guaranteeಗೆ commission ಹಾಕುತ್ತಿರಿ. ಇದೆಲ್ಲವನ್ನು ಮತ್ತೆ ರೈತನ ಮೇಲೆ ಹಾಕಬೇಕಾಗುತ್ತದೆ. ಆದುದರಿಂದ ಅವುಗಳ ಆರೋಗ್ಯವನ್ನು ನೀವು ನೋಡಿಕೊಳ್ಳಬೇಕು. ರೈತರಿಗೂ ಸಹ ಸಹಾಯವಾಗುವಂತಹ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಬೇಕಾದಂಥಾದ್ದು ಸರ್ಕಾರದ ಚಿಂತನೆಯಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ತುರಾತುರಿಯಲ್ಲಿ 50,000ರೂಪಾಯಿಗಳಿಗೆ ಏರಿಸುವಂಥಾದ್ದು, ಅದರಿಂದ ಏನೇನು ಪರಿಣಾಮವಾಗುತ್ತದೆಂಬ ಬಗ್ಗೆ ಸರಿಯಾದ ರೀತಿಯಲ್ಲಿ ಚರ್ಚೆ ಮಾಡಿ, ನಂತರ ಘೋಷಣೆ ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತೆಂದು ನನ್ನ ಭಾವನೆ. ಆದುದರಿಂದ ನಾನು ಈಗ ಸರ್ಕಾರಕ್ಕೆ ಸಲಹೆ ಮಾಡುವಂಥಾದ್ದು 2006–07ನೇ ಸಾಲಿನಲ್ಲಿ ಯಾರ್‍ಯಾರು ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರೆಲ್ಲರಿಗೂ ಕೂಡ 25,000 ರೂಪಾಯಿಗಳವರೆಗೂ ಮಿತಿಗೊಳಿಸಿ, ಮತ್ತೆ ಅವರು ಹೆಚ್ಚಿಗೆ ಹಣವನ್ನು ತೆಗೆದುಕೊಂಡಿದ್ದರೂ ಕೂಡ ಅವರಿಗೆ 25,000 ರೂಪಾಯಿಗಳವರೆಗೂ ಮನ್ನಾ ಮಾಡುವಂಥಾದ್ದನ್ನು ಮಾಡಬೇಕಾಗುತ್ತದೆ. ಈಗ ಸಮಯ ಮಾರ್ಚ್ 31ರವರೆಗೂ ಏನು ನಿಗದಿ ಮಾಡಿದ್ದೀರಿ, ಅದನ್ನು ಹಾಗೇ ಇಟ್ಟಿರಿ, ಅಮೇಲೆ ಬೇಕಾದರೆ ಅದನ್ನು ಮುಂದುವರೆಸುವುದಕ್ಕೆ ಅವಕಾಶವಿರುತ್ತದೆ. 31ನೇ ತಾರೀಖಿನೊಳಗೆ ಬ್ಯಾಂಕ್‌ಗಳಿಗೆ ಹಣ ಬರಲಿಲ್ಲವೆಂದರೆ, ಬಹಳ ಅನಾನುಕೂಲವಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. KCC Bank Section 11ನಲ್ಲಿ ಬಂತು, ಅಲ್ಲಿ section 11ಲ್ಲಿ ಏಕೆ ಬಂತೆಂದರೆ, recovery ಆಗಲಿಲ್ಲವೆಂದು ಬಂತು. ಇಲ್ಲಿ recovery ಅಗಲಿಲ್ಲವೆಂದು ಹೇಳಿದ ಮೇಲೆ, ಅಲ್ಲಿ ಯಾರೂ finance ಮಾಡಲಿಲ್ಲ. ಅಲ್ಲಿ deposit ಇಟ್ಟಿದ್ದಾಂತಹ retire teachers, ಅವರು ಇವರು ಮಗಳ ಮದುವೆಗೆಂದು ಹಣವನ್ನು ಇಟ್ಟಿದ್ದರು, ಅವರೆಲ್ಲಾ ಧಾರವಾಡದಲ್ಲಿ suicide ಮಾಡಿಕೊಂಡರು. ಆ ರೀತಿ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಬ್ಯಾಂಕ್‌ಗಳಲ್ಲಿ deposit ಇಟ್ಟಿರುವವರು suicide ಮಾಡಿಕೊಳ್ಳುವಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಈಗ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನವರು ಎಲ್ಲಾ ಶಾಸಕರಿಗೂ

ಒಂದು ಪತ್ರವನ್ನು ಬರೆದಿದ್ದಾರೆ. ಈ ಒಂದು ವ್ಯವಸ್ಥೆಯನ್ನು ಇದಕ್ಕೂ ವಿಸ್ತರಣೆ ಮಾಡಬೇಕೆಂದು ಕೇಳಿದ್ದಾರೆ. ಕಳೆದ ಬಾರಿ ಅವರು ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಆ ಹಣವನ್ನು ಇನ್ನೂ ಸಂಪೂರ್ಣವಾಗಿ ಕೊಟ್ಟಿಲ್ಲ, ಅದು ಇನ್ನು ಬಾಕಿ ಇದೆ. ಇದರಲ್ಲಿ ನಮಗೆ ಅವಕಾಶವನ್ನೇ ಕೊಟ್ಟಿಲ್ಲ, ತಮ್ಮಲ್ಲಿ ಇದ್ದಂಥ ಸಾಲ ಮನ್ನಾ, ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಇದನ್ನು ಸೇರಿಸಿಕೊಳ್ಳಬೇಕು. ಇನ್ನು ತಾವು ಎರಡು ಕಡೆಗಳಲ್ಲಿ restriction ಅನ್ನು ಹಾಕಿದ್ದೀರಿ. ಮೊದಲನೆಯದು ದಿ:1.2.2006 ಎಂದು ಹೇಳುತ್ತೀರಿ, ಹಿಂದಿನವರಿಗೆ ಇಲ್ಲ. ಇದರ ಬಗ್ಗೆ ಮಾನ್ಯ ಕೆ.ಎನ್.ರಾಜಣ್ಣನವರು explain ಮಾಡಿದರು. ಒಂದೇ ಸಾರಿ ಎಲ್ಲರೂ ಸಾಲವನ್ನು ಪಡೆಯುವುದಿಲ್ಲ. ಅವರು ಹಂತ ಹಂತವಾಗಿ, ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ ಸಾಲವನ್ನು ಪಡೆಯುವಂಥಾದ್ದು, ಆದುದರಿಂದ ನೀವು ಆ date ಅನ್ನು ತೆಗೆಯಬೇಕು. ಇಲ್ಲಿ ದಿ:1.2.2006ರ ನಂತರದ ಸಾಲ, ಪುನ: ಇರುವಂಥಾದ್ದು ಮಾರ್ಚ್ 31, ಇದಕ್ಕೆ ನಿಮ್ಮ ಆದೇಶ ಬರುವುದಕ್ಕೆ ಒಂದು ತಿಂಗಳು ಆಗುತ್ತದೆ. ಕಳೆದ ಬಾರಿ ನಿಮ್ಮ ಬಡ್ಡಿ ಮನ್ನಾ ಕಾರ್ಯಕ್ರಮದಲ್ಲಿ ಏನಾಯಿತೆಂದರೆ, ನಾಲ್ಕು ಬಾರಿ extend ಮಾಡುವ ಪರಿಸ್ಥಿತಿ ಬಂತು. ಒಂದು ಸಾರಿ ಮಾರ್ಚ್ ತಿಂಗಳೆಂದು ಹೇಳಿದಿರಿ, ಜೂನ್ ಎಂದು ಹೇಳಿದಿರಿ, ನಂತರ ಡಿಸೆಂಬರ್ end ಎಂದು ಹೇಳಿದಿರಿ, ಸುಮಾರು ಸಾರಿ extend ಮಾಡುವ ಪರಿಸ್ಥಿತಿ ಬಂತು. ಆದುದರಿಂದ ಒಂದೇ ಸಾರಿ ಜೂನ್ endವರೆಗೆ extend ಮಾಡಿ, ಅಲ್ಲೀವರೆಗೆ ಏನಾದರೂ ವ್ಯವಸ್ಥೆಯನ್ನು ಮಾಡಬಹುದು, ಇಲ್ಲದಿದ್ದರೆ ಏನಾಗುತ್ತದೆಂದರೆ ಶೇ.4ರಂತೆ ಪಡೆದ ಸಾಲವನ್ನು ಕಟ್ಟಲಿಕ್ಕೆ ಪುನ: ಹೆಚ್ಚು ಬಡ್ಡಿಯಲ್ಲಿ ಹಣವನ್ನು ತಂದು ಕಟ್ಟುವಂಥ ಪರಿಸ್ಥಿತಿಯಲ್ಲಿ ಯಾರೂ ಅದನ್ನು ತಂದು ಕಟ್ಟುವುದಿಲ್ಲ. ಅದಕ್ಕಿಂತ ಇಲ್ಲಿ ಇನ್ನೊಂದು ಕೆಲಸವನ್ನು ಮಾಡಬಹುದು. ತುರ್ತಾಗಿ ಬ್ಯಾಂಕ್‌ಗಳಿಗೆ ಹಣವನ್ನು deposit ಮಾಡಿ 1ನೇ ತಾರೀಖಿಗೆ ಕೊಟ್ಟುಬಿಡಿ. ಅಮೇಲೆ ಅವರು ವ್ಯವಸ್ಥೆಯನ್ನು ಮಾಡಿಕೊಳ್ಳಲಿ, ನಿಮ್ಮ ಸಾಲ ಮನ್ನಾ ಕಾರ್ಯಕ್ರಮವನ್ನು ಅಥವಾ ಬಡ್ಡಿ ಮನ್ನಾ ಕಾರ್ಯಕ್ರಮವನ್ನು ಮಾಡಬಹುದು, ಇಲ್ಲವೆಂದರೆ ಪ್ರೈಮರಿ ಸಹಕಾರ ಸಂಘಗಳು ಸಮಸ್ಯೆಗೆ ಈಡಾಗುವಂಥಾದ್ದು, ಮತ್ತೆ deposit ಅನ್ನು ವಾಪಸ್ಸು ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗಬಾರದು. ಇದು ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತಾ, ಮತ್ತೊಂದು ವಿಚಾರವೇನೆಂದರೆ, ನೀವು ಬೆಳೆ ವಿಮೆಯನ್ನು adjust ಮಾಡುತ್ತೇವೆಂದು ಹೇಳುತ್ತೀರಿ. ಬರಗಾಲದ ಸಂದರ್ಭದಲ್ಲಿ, ಕಷ್ಟಕಾಲದಲ್ಲಿ ಬೆಳೆ ವಿಮೆಯನ್ನು ಕೊಡುವಂಥಾದ್ದು, ಅದನ್ನು ನೀವು ಸಾಲಕ್ಕೆ adjust ಮಾಡುತ್ತೇವೆಂದು ಹೇಳಿದರೆ ಹೇಗೆ? ಅದನ್ನು ಮಾಡಬಾರದು. ಬೆಳೆ ವಿಮೆ ಮಾಡುವಂಥಾದ್ದು ಬೆಳೆ ಬೆಳೆಯದೇ ಇರುವಾಗ ಸಿಗುವಂಥಾದ್ದು, ಬೆಳೆ ಇಲ್ಲದೇ ಇರುವಾಗ ಅದಕ್ಕೆ

ಬಂದಂತಹ ದುಡ್ಡನ್ನು ತೆಗೆದುಕೊಂಡರೆ, ಅವನು ಊಟ ಮಾಡುವುದು ಏನು? ಇದು ಈ ರೀತಿಯಾಗಬಾರದು. ಆದುದರಿಂದ ಈ ಬೆಳೆವಿಮೆಯನ್ನು adjust ಮಾಡುವಂಥಾದ್ದು ಆಗಬಾರದು. ಈ ಎರಡು ದಿನಾಂಕವನ್ನು ನಿಗದಿ ಮಾಡಿರುವಂಥಾದ್ದು ಏನು ಇದೆ, ಅದನ್ನು ಸಹ ತೆಗೆಯಬೇಕು. ಮೊದಲನೆಯದು ದಿ:1.2.2006 ಇದನ್ನು ತೆಗೆಯಬೇಕು, ಇದನ್ನು extend ಮಾಡಬೇಕೆಂದು ಹೇಳುತ್ತಾ, ಮತ್ತೆ ಮಧ್ಯೆ suo moto statement ಏನೋ ಮಾಡಿದ್ದೀರೆಂದು ಕಾಣುತ್ತದೆ. ಮೊನ್ನೆ ದಿವಸ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಸುದ್ದಿಮಾಧ್ಯಮದಲ್ಲಿ ಕೊಟ್ಟಿರುವಂತಹ ಹೇಳಿಕೆಯನ್ನು ನೋಡಿದೆ. ಅವರು ನಾನು ಹೇಳಿದ್ದು ಈ ರೀತಿಯಲ್ಲವೆಂದು ಹೇಳಿದರು. ತಾವೂ ನಾನು ಈ ರೀತಿ ಹೇಳಿಲ್ಲವೆಂದು ಮುಂಚೆ ಏನಾದರೂ ಹೇಳಿದ್ದೀರೋ ಗೊತ್ತಿಲ್ಲ. ಆದರೆ ಇಲ್ಲಿ ಒಂದು ಭಿನ್ನಾಭಿಪ್ರಾಯ ಬಂದಿದೆ. ಅವರು ಹೇಳಿದ್ದು ಈ ರೀತಿಯಲ್ಲವೆಂದು ಹೇಳಿದ್ದಾದರೆ, ಯಾವ ರೀತಿಯೆಂದು ಅವರಾದರೂ ಬಂದು ಸದನದಲ್ಲಿ ಹೇಳಿಕೆಯನ್ನು ಕೊಡಬೇಕು. ಅಥವಾ ನೀವಾದರೂ ಯಾವ ರೀತಿಯೆಂದು ಹೇಳಿಕೆ ಮಾಡಿದರೆ, ಅದರಲ್ಲಿ ಬದಲಾವಣೆಯನ್ನು ತರಬೇಕೆಂದು ಅಧ್ಯಕ್ಷರ ಮುಖೇನ ತಮ್ಮನ್ನು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಹಣಕಾಸಿನ ಮಂತ್ರಿಯಾಗಿರುವ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಸದನದಲ್ಲಿ ಹೊಸ ಸಂಪ್ರದಾಯಗಳನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ. ಬಜೆಟ್ ಚರ್ಚೆಯಾಗಿ ನಂತರ ಅವರು ಇದಕ್ಕೆ ಉತ್ತರವನ್ನು ಕೊಡುವಾಗ ಇದೆಲ್ಲವನ್ನು ಹೇಳಬಹುದಾಗಿತ್ತು. ಅಥವಾ ಚರ್ಚೆಯಾದ ಮೇಲೆ ಎರಡು, ಮೂರು ದಿವಸಗಳಲ್ಲಿ ಇದನ್ನು ಹೇಳಿದ್ದಿದ್ದರೆ ಏನೂ/ಆಗುತ್ತಾ ಇರಲಿಲ್ಲ. ಅವರು ತರಾತುರಿಯಲ್ಲಿ ಬಜೆಟ್‌ಗೆ ತಿದ್ದುಪಡಿ ಮಾಡುವ ರೀತಿಯಲ್ಲಿ ತೆಗೆದುಕೊಂಡು ಬಂದಿದ್ದಾರೆ. This is going to be the part and parcel of the budget speech. ನೀವು ಮಂಡಿಸಿರುವಂಥ ಬಜೆಟ್ ಆಗುತ್ತದೆ. ಇದು ಒಂದು ರೀತಿ corrigendam. Budget speech Assemblyಯಲ್ಲಿ present ಆಗಿದೆ. ಅದು ಚರ್ಚೆಯಾಗಬೇಕು, ಆದರ ಚರ್ಚೆ ಇವತ್ತೊ, ನಾಳೆಯೋ ಪ್ರಾರಂಭ ಆಗುವ ಹಾಗೆ ಇದೆ. ಅವರು ಉತ್ತರವನ್ನು ಹೇಳುವಾಗ ಇದನ್ನು ಹೇಳಬಹುದಾಗಿತ್ತು. ನಾವು ಇದನ್ನು ಹೆಚ್ಚು ಮಾಡುತ್ತೇವೆ, ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳಬಹುದಾಗಿತ್ತು. ಆದರೆ ಒಂದು ಏನು ಮಾಡಿದ್ದಾರೆಂದರೆ, conditional ಭರವಸೆಯನ್ನು ಕೊಟ್ಟಿದ್ದಾರೆ. ಈ ವರ್ಷದ ಮಾರ್ಚ್ 31ನೇ ತಾರೀಖಿನೊಳಗೆ 50,000ರೂಪಾಯಿಗಳ ಸಾಲವನ್ನು ತೆಗೆದುಕೊಂಡಿರುವವರು, 25,000ರೂಪಾಯಿಗಳನ್ನು ಕಟ್ಟಿದರೆ, ಇನ್ನು 25,000 ರೂಪಾಯಿಗಳನ್ನು ಸೊಸೈಟಿಗಳಿಗೆ ನಾವು ತುಂಬಿ ಕೊಡುತ್ತೇವೆಂದು ಹೇಳಬೇಕು. ಇದು ರೈತರು ಕೊಡಬೇಕಾಗಿರುವ ಹಣವನ್ನು ನಾವು ತುಂಬಿ ಕೊಡುತ್ತೇವೆಂದು

ಹೇಳಿರುವಂಥಾದ್ದು. ಈಗ 128 ತಾಲ್ಲೂಕುಗಳಲ್ಲಿ ಬರಗಾಲವಿದೆ. ಇವರು ಮನ್ನಾ ಮಾಡುವುದಕ್ಕೆ ಕಾರಣವೇ ಬರಗಾಲ. ರಾಜ್ಯದಲ್ಲಿ ಬರಗಾಲವಿದೆ, ರೈತರು ಬಹಳ ಕಷ್ಟದಲ್ಲಿದ್ದಾರೆ, ಅದಕ್ಕಾಗಿ ರೈತರಿಗೆ ಸ್ವಲ್ಪ ಸಹಾಯ ಮಾಡುವುದಕ್ಕೆ ಹೋಗುತ್ತಿದ್ದೀರಿ. ಆದರೆ, ನೀವು ಈ ರೀತಿ ಮಾರ್ಚ್ 31ರೊಳಗೆ 25 ಸಾವಿರ ರೂಪಾಯಿಗಳನ್ನು ಕಟ್ಟಬೇಕು ಎಂದರೆ ಅದರಿಂದ ರೈತರಿಗೆ ಏನೂ ಉಪಯೋಗವಾಗುವುದಿಲ್ಲ. ಈಗ ಇಡೀ ರಾಜ್ಯದ ಜನತೆಗೆ ಏನು ಭರವಸೆ ಹೋಗಿದೆಯೆಂದರೆ, ನಾವು ರೈತರ ಸಾಲವನ್ನೆಲ್ಲ ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿದ್ದು, ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುತ್ತಾರೆ ಎಂದು ದೊಡ್ಡ ಪ್ರಚಾರವಾಗಿದೆ. ಈಗ ಕೇವಲ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನುವ ಹಂತಕ್ಕೆ ಬಂದಿದ್ದು, ಅದರಲ್ಲಿಯೂ ನೀವು ಏಕೆ ಈ ರೀತಿಯ ಕಂಡೀಷನ್‌ಗಳನ್ನು ಹಾಕಿಕೊಂಡು ಕುಳಿತಿದ್ದೀರಿ. ಎಲ್ಲ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಬೇಕು. ಯಾರ್ಯಾರು ಮಧ್ಯಮಾವಧಿ ಸಾಲ ಮತ್ತು ಧೀರ್ಘಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರು ಜೂನ್ ಒಳಗೆ ಸಾಲವನ್ನು ಕಟ್ಟಿದರೆ ಈ ವರ್ಷದ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ. ಏಪ್ರಿಲ್ 1ನೇ ತಾರೀಖಿನಿಂದ ಇಲ್ಲಿಯವರೆಗೆ ಯಾರ್ಯಾರು ಅಲ್ಪಾವದಿ ಸಾಲವನ್ನು ತೆಗೆದು ಕೊಂಡಿದ್ದಾರೆ, ಆ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುತ್ತೇವೆ, ಯಾರ್ಯಾರು ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ ಅದರ ಬಡ್ಡಿಯನ್ನು ನಾವು ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿದರೆ ಅದರಿಂದ ರೈತರಿಗೆ ಏನಾದರೂ ಉಪಯೋಗವಾಗುತ್ತದೆ, ಸಹಾಯವಾಗುತ್ತದೆ. ಆದರೆ ಈಗ ನೀವು ಹೇಳಿರುವುದನ್ನು ನೋಡಿದರೆ, ಇದರಿಂದ ಬಹಳ ಜನ ರೈತರಿಗೆ ಅನುಕೂಲವಾಗುವುದಿಲ್ಲ. ನೀವು ಬಹಳ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿದ್ದೀರಿ. ನೀವು ರಾಜಕೀಯ ಲಾಭ ಮಾಡಿಕೊಳ್ಳಲು ಇದನ್ನು ಮಾಡಿದ್ದೀರಿ ಎಂದು ನನಗನ್ನಿಸುತ್ತದೆ. ಏಕೆಂದರೆ budget speechನಲ್ಲಿ ತಾವು ಹೇಳಿದ್ದೀರಿ, "ನಾನು ರೈತನ ಮಗನಾಗಿ, ರೈತರು ಎದುರಿಸುತ್ತಿರುವ ಸಂಕಟವನ್ನು ಬಲ್ಲೆ" ಎಂದು ಹೇಳಿದ್ದೀರಿ. ಇದು ನಿಮ್ಮ ಸರ್ಕಾರ. ನೀವು ರೈತರಿಗೆ ಸಹಾಯ ಮಾಡಿದರೆ ನಾವು ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇವೆ ಮತ್ತು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ರಾಜ್ಯದ 128 ತಾಲ್ಲೂಕುಗಳಲ್ಲಿ ಬರಗಾಲವಿದೆ, ಕುಡಿಯುವುದಕ್ಕೆ ನೀರಿಲ್ಲ. ಸುಮಾರು 40% oil seeds expected production targetನಲ್ಲಿ ಖೋತಾ ಆಗಿದೆ. More than 25% foordgrains shortage ಆಗಿದೆ. ಇದು ಇರತಕ್ಕಂಥ ಪರಿಸ್ಥಿತಿ. ಈ ಪರಿಸ್ಥಿತಿ ಇರುವಾಗ ನೀವು ಬರೀ 50 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡವರಿಗೆ ಮಾತ್ರ ಮನ್ನಾ ಮಾಡುತ್ತೇವೆ ಎಂದರೆ, 75 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರು,

60 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರು, ಏನು ಮಾಡಬೇಕು? ಆ ಕಾರಣದಿಂದ, ಬೆಳೆ ಸಾಲ ತೆಗೆದು ಕೊಂಡಿರುವ, ಅಲ್ಪಾವಧಿ ಸಾಲ ತೆಗೆದುಕೊಂಡಿರುವ ಎಲ್ಲ ರೈತರ ಪರವಾಗಿ ನಾವು ಹಣವನ್ನು ಸೊಸೈಟಿಗಳಿಗೆ ತುಂಬುತ್ತೇವೆ ಎಂದು ಹೇಳಿ. ಅಲ್ಲದೇ, ನೀವು ಈ ಹಣವನ್ನು ಮೇ ಅಂತ್ಯದೊಳಗಾಗಿ ಸೊಸೈಟಿಗಳಿಗೆ ತುಂಬದಿದ್ದರೆ ಅವರು ಮತ್ತೆ refinance ಮಾಡಲು ಆಗುವುದಿಲ್ಲ. ಅವುಗಳು ಒಂದು ಸಲ ಸತ್ತುಹೋದರೆ, ಮತ್ತೆ ಅವುಗಳನ್ನು revive ಮಾಡಲು ಆಗುವುದಿಲ್ಲ. ತಾವು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಮಾಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಅದನ್ನು ಬಿಟ್ಟು ನೀವು "ಮೇ ತಿಂಗಳಿನಲ್ಲಿ ಒಂದು ಸ್ವಲ್ಪ ಕೊಡುತ್ತೇವೆ, ಇನ್ನೊಂದು ಮೂರು ತಿಂಗಳಾದ ಮೇಲೆ ಸ್ವಲ್ಪ ಕೊಡುತ್ತೇವೆ" ಎಂದು ಕೊಟ್ಟರೆ ಯಾವ ಸೊಸೈಟಿಗಳು ಕೂಡ ಉಳಿಯುವುದಿಲ್ಲ. ಅವುಗಳೆಲ್ಲವೂ ನಾಶವಾಗಿ ಹೋಗಿಬಿಡುತ್ತವೆ. ರೈತರು ತೆಗೆದುಕೊಂಡಿರುವ ಎಲ್ಲ ಬೆಳೆ ಸಾಲವನ್ನೂ in view of the drought, ರಾಜ್ಯದಲ್ಲಿರುವ ಭೀಕರ ಬರಗಾಲದಿಂದ ರೈತರು ಕಷ್ಟದಲ್ಲಿರುವುದರಿಂದ, ಅವರು ತೆಗೆದುಕೊಂಡಿರುವ ಬೆಳೆ ಸಾಲವನ್ನು ಪೂರ್ಣ ಮನ್ನಾ ಮಾಡುತ್ತೇವೆ, ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿ. ಏಕೆಂದರೆ, ರೈತರು ಬೆಳೆ ಸಾಲವನ್ನು ಬಹಳ ಹೆಚ್ಚೇನೂ ತೆಗೆದುಕೊಂಡಿಲ್ಲ, ಹೆಚ್ಚೆಂದರೆ ಎರಡು ಲಕ್ಷ ರೂಪಾಯಿಗಳವರೆಗೆ ತೆಗೆದುಕೊಂಡಿರಬಹುದು. ಆಗ ಯಡಿಯೂರಪ್ಪನವರು ರೈತರ ಪರವಾಗಿದ್ದಾರೆ ಎನ್ನುವುದು ಬರುತ್ತದೆ. ಇದರಿಂದ ನಿಮಗೆ ಅನುಕೂಲವಾಗುತ್ತದೆ. ರಾಜಕೀಯ ಲಾಭ ಮಾಡಿಕೊಳ್ಳಬೇಕು ಎನ್ನುವ ಪ್ರಯತ್ನಕ್ಕೆ ಸಿದ್ಧಿ ಲಭಿಸುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ(ಹಳಿಯಾಳ): ಮಾನ್ಯ ಗೌರವಾನ್ವಿತ ಉಪ. ಮುಖ್ಯಮಂತ್ರಿಗಳು ಈಗ ಮಂಡಿಸಿರುವುದನ್ನು ನೋಡಿದರೆ ನಮಗೆ ಬಹಳ ಆಶ್ಚರ್ಯವಾಗುತ್ತಿದೆ. ಬಜೆಟ್‌ಗೆ ಒಂದು ಪಾವಿತ್ರ್ಯತೆ ಇರುತ್ತದೆ. ಇದೆಲ್ಲವನ್ನು ನಾನು ನಂತರ ಮಾತನಾಡುವಾಗ ವಿವರವಾಗಿ ಹೇಳುತ್ತೇನೆ. ಹೀಗೆ ಮನಸ್ಸು ಬಂದಾಗ ತಾವೋ ಈ ಪ್ರಕಾರದಲ್ಲಿ ಹೇಳಿಕೆ ಕೊಡುತ್ತಾ ಹೊದರೆ ನಾವು ಇಲ್ಲಿ ಏನು ಮಾತನಾಡುವುದೂ ಕಷ್ಟವಾಗಬಹುದು. ರೈತರ ವಿಚಾರವಾಗಿ ಹೇಳುವುದಾದರೆ, ಎಲ್ಲ ಬೆಳೆ ಸಾಲವನ್ನು ಮನ್ನಾ ಮಾಡಬೇಕು ಎಂದು ನಮ್ಮ ಒತ್ತಾಯವಿದೆ. ಇದರ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದರು, ನಾವು ಎಲ್ಲ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದರು. ಆಗ ತಾವು, ವಿಚಾರ ಮಾಡಬೇಕು, ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ ಎಂದು submit ಮಾಡಿದಿರಿ. ಹಾಗೆಯೇ ವಿಷಯ dilute ಆಗುತ್ತಾ ಹೋಗಿ, ರೈತರು co-operative societyಗಳಿಂದ ತೆಗೆದುಕೊಂಡಿರುವ long term, medium term and crop loan ಮನ್ನಾ ಮಾಡುತ್ತೇವೆ ಎಂದು ಹೇಳಿದಿರಿ. ಈಗ long term, medium term loanಗಳನ್ನು

ಮರೆತುಬಿಟ್ಟಿರಿ. ಈಗ, crop loanಗೆ 25 ಸಾವಿರ ರೂಪಾಯಿಗಳ restriction ತೆಗೆದುಕೊಂಡು ಬಂದಿದ್ದೀರಿ. ಯಾವ ರೈತರು 50 ಸಾವಿರ ರೂಪಾಯಿಗಳ ಬೆಳೆ ಸಾಲ ತೆಗೆದುಕೊಂಡಿದ್ದಾರೆ, ಅವರು ಮಾರ್ಚ್ 31 ರೊಳಗೆ 25 ಸಾವಿರ ರೂಪಾಯಿಗಳನ್ನು ಪಾವತಿ ಮಾಡಿದರೆ, ಉಳಿದ 25 ಸಾವಿರ ರೂಪಾಯಿಗಳನ್ನು ನಾವು ಸೊಸೈಟಿಗಳಿಗೆ ತುಂಬುತ್ತೇವೆ ಎಂದು ಹೇಳುತ್ತಿದ್ದೀರಿ. ತಾವೇ ವಿಚಾರ ಮಾಡಿ, ನಮ್ಮ ಸ್ನೇಹಿತರುಗಳು ಹೇಳಿದ ಹಾಗೆ ರಾಜ್ಯದ 128 ತಾಲ್ಲೂಕುಗಳಲ್ಲಿ ಬರಗಾಲವಿದೆ. ಮಲೆನಾಡಿನ ಹಲವಾರು ತಾಲ್ಲೂಕುಗಳಲ್ಲಿ ಅತಿವೃಷ್ಟಿ ಇದೆ. ರೈತರು ಇಷ್ಟು ಕಷ್ಟದಲ್ಲಿದ್ದಾಗ, ಮುಂದಿನ 5–6 ದಿವಸಗಳಲ್ಲಿ 25 ಸಾವಿರ ರೂಪಾಯಿಗಳನ್ನು ತುಂಬಲು ಸಾಧ್ಯವೇ ಎನ್ನುವುದನ್ನು practicalಆಗಿ ಯೋಚನೆ ಮಾಡಿ ನೋಡಿ. ತಾವು ವಿರೋಧ ಪಕ್ಷದಲ್ಲಿದ್ದಾಗ ನಮ್ಮ ಮೇಲೆ ಎಷ್ಟು ಸಾರಿ ಒತ್ತಡ ತಂದು time extension ಮಾಡಿಕೊಂಡಿರಿ ಎಂದು ಯೋಚನೆ ಮಾಡಿ. ನಾವು ಏನು ಹೇಳುತ್ತೇವೆ ಎಂದರೆ, ನೀವು ನಿಜವಾಗಿ ರೈತರಿಗೆ ಸಹಾಯ ಮಾಡಬೇಕಾದರೆ ತಾವು ಸಂಪೂರ್ಣವಾಗಿ ಬೆಳೆ ಸಾಲವನ್ನು ಮನ್ನಾ ಮಾಡಬೇಕು. ಎರಡನೆಯದಾಗಿ, ಮುಂಗಡ ಪತ್ರದಲ್ಲಿ ತಾವು ಒಂದು ಮಾತು ಹೇಳಿದ್ದೀರಿ. ಈ ವರ್ಷದಲ್ಲಿ ಎಷ್ಟು ಸಾಧ್ಯವಿದೆಯೋ ಅಷ್ಟು ಹಣವನ್ನು ಕೊಡುತ್ತೇವೆ ಮತ್ತು ಮುಂದಿನ ವರ್ಷದಲ್ಲಿ ಇದರ ಸಲುವಾಗಿ 500 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದೀರಿ. ಸಾಲ ಮನ್ನಾ ಮಾಡುವುದರಿಂದ 1.950 ಕೋಟಿ ರೂಪಾಯಿಗಳ ಹೊರೆ ಬರಬಹುದು ಎಂದು ಹೇಳಿದ್ದೀರಿ. ಇದನ್ನು ಭರಿಸಲು ನಿಮ್ಮ ಹತ್ತಿರ ಹಣ ಎಲ್ಲಿದೆ? Where is the money you have got in the budget for the next year? ಈ ವರ್ಷ ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಹಾಗಾಗಿ, 1,950 ಕೋಟಿ ರೂಪಾಯಿಗಳು ಏನು ಬೇಕಾಗಿದೆ ಅದಕ್ಕೆ revenue ಎಲ್ಲಿಂದ ಬರುತ್ತದೆ? ಇವತ್ತು ಬಜೆಟ್‌ನ ಪಾವಿತ್ರ್ಯತೆ ಉಳಿದಿಲ್ಲ. ನಾನು 25 ವರ್ಷದಿಂದ ರಾಜಕೀಯದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ರೀತಿ ಎಂದೂ ಆಗಿಲ್ಲ. ನೀವು ರೈತರಿಗೆ ಸಹಾಯ ಮಾಡಿ. ಆದರೆ ಹಣಕಾಸು ಸಂಸ್ಥೆಗಳಿಗೆ ನೀವು ಹಣವನ್ನು ತುಂಬದಿದ್ದರೆ ಅವುಗಳು ಉಳಿಯುವುದಿಲ್ಲ. All PLD banks will be closed. ರೈತರು co-operative societyಗಳಿಂದ ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುತ್ತೀರಿ ಎಂದು ತಿಳಿದು ಎಲ್ಲೂ, ಯಾವ ರೈತರೂ ಸಾಲವನ್ನು ತುಂಬಲಿಲ್ಲ. ಹಾಗಾಗಿ, PLD banks are closed. Today GDP growth is less than 2%. ಕೃಷಿ ಉತ್ಪಾದನೆ ಹೆಚ್ಚಾಗಬೇಕಾದರೆ capital investment ಹೆಚ್ಚಾಗಬೇಕು. ಆದರೆ ಅದಕ್ಕೆ ಹಣ ಎಲ್ಲಿಂದ ಬರಬೇಕು? PLD ಬ್ಯಾಂಕುಗಳು default ಆದರೆ ಯಾವ ಪ್ರಕಾರವಾಗಿ ರೈತರಿಗೆ ಸಹಾಯ ಮಾಡಲು ಸಾಧ್ಯ?

ಇದರಲ್ಲಿ 70 ಲಕ್ಷ ರೈತ ಕುಟುಂಬಗಳಿವೆ. Co-operative fieldನಲ್ಲಿ ಕೇವಲ 19 ಲಕ್ಷ ಕುಟುಂಬಗಳಿವೆ. ಅದರಲ್ಲಿ ಸಾಲ ತೆಗೆದುಕೊಂಡಿರುವವರು 10 ಲಕ್ಷ ಮಾತ್ರ. ಇನ್ನೂ 9 ಲಕ್ಷ ಜನರಿಗೆ ಸಾಲ ಸಿಗಬೇಕು. ಮಾರ್ಚ್ 31ರೊಳಗೆ ನೀವು ಹಣ ತುಂಬದಿದ್ದರೆ, ಅವುಗಳಿಗೆ NABARD refinance ಮಾಡುವುದಿಲ್ಲ. ಖರೀಫ್ ಮತ್ತು ರಬಿ ಬೆಳಗಳಿಗಾಗಿ ಬೇರೆ ಬೇರೆ seasonಗಳಲ್ಲಿ short term loan ತೆಗೆದು ಕೊಳ್ಳುತ್ತಾರೆ. ಈ ಪರಿಸ್ಥಿತಿಯಲ್ಲಿ ನೀವು ಡಿಸೆಂಬರ್‌ವರೆಗೆ restriction ಹಾಕಿದರೆ ಅದು ಸರಿಯಾದುದಲ್ಲ. ನಿಮ್ಮ ಪ್ರಕಾರ ಯಾರು ಸಾಲ ಪಡೆದಿದ್ದಾರೆ ಅವರು ಮಾರ್ಚ್ 31ರೊಳಗೆ ತುಂಬಬೇಕಾಗುತ್ತದೆ. ನಿಮ್ಮ ಮನಸ್ಸು ಒಳ್ಳೆಯದಿರಬಹುದು, ಒಳ್ಳೆಯ ವಿಚಾರವಿರಬಹುದು. ಆದರೆ, ಇವತ್ತು political motives ಹೆಚ್ಚು ಕಾಣುತ್ತಿದೆಯೇ ವಿನ: ರೈತರಿಗೆ ಸಹಾಯ ಮಾಡುವ ಉದ್ದೇಶ ಇದರೊಳಗೆ ಕಾಣುತ್ತಿಲ್ಲವೆನ್ನುವ ಸ್ಪಷ್ಟವಾದ ಆರೋಪವನ್ನು ಮಾಡುತ್ತಿದ್ದೇನೆ. ನೀವು ಮೀನುಗಾರರಿಗೆ ಮತ್ತು ನೇಕಾರರಿಗೆ ಅವರಿಗೂ 25 ಸಾವಿರ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಸಹ 50 ಸಾವಿರ ರೂ.ಗಳಿಗೆ ಮಾಡಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ, ರೈತರು, ಮೀನುಗಾರರು ಮತ್ತು ನೇಕಾರರು ಅವರಿಗೆ ಏಕೆ ಕೊಡುತ್ತಿಲ್ಲ? ಅವರಿಗೂ ಕೊಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ಅದು ಪದ್ಧತಿಯೇ ಸರಿ ಇಲ್ಲ. ಒಂದು ಸಲ Finance Minister ರವರು budget ಅನ್ನು ಇಲ್ಲಿ ಓದಿ ಆದಮೇಲೆ ಅದರ ಮೇಲೆ discussions initiate ಆಗಬೇಕು. Discussions ಎಲ್ಲ ಪೂರ್ಣವಾದ ಮೇಲೆ ಅವರು reply ಕೊಡಬೇಕು. Reply ಕೊಡುವ ವೇಳೆಗೆ discussions ಮಾಡಿದಂಥ ಸಂದರ್ಭದಲ್ಲಿ ಯಾವುದಾದರೂ ವಿಚಾರದಲ್ಲಿ ಸರ್ಕಾರದ ಪುನರ್ ಪರಿಶೀಲನೆ ಇದ್ದರೆ ಕಡಿಮೆ ಮಾಡುವುದೋ, ಜಾಸ್ತಿ ಮಾಡುವುದೋ ಇದ್ದರೆ ಅದನ್ನು announce ಮಾಡಬೇಕು. ಆದರೆ ಇದು discussions ಪ್ರಾರಂಭವಾಗಲಿಲ್ಲ, but still he has made another statement. ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ. We should stop the discussion here. Budget discussions ಮಾಡುವಾಗ ಅವರು ಉತ್ತರ ಕೊಡಲಿ, ಅದಕ್ಕೆ ನಾವು ಹೇಳಬೇಕಾದ್ದು ಅವರು ಹೇಳಬೇಕಾದದ್ದು ಎಲ್ಲ ಇದೆ. ಈ ಮಧ್ಯಂತರದಲ್ಲೇ ಮತ್ತೆ ಒಂದು mini debate start ಮಾಡತಕ್ಕಂಥದ್ದು ಅಪಚಾರವಾಗುತ್ತದೆ. That is not the procedure. He will not be showing the respect that actually should be shown to the Budget. ಅದರ ಗೌರವ ಹೋಗುತ್ತದೆ. Sanctity ಹೋಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ತಮಗೆ ಬಹಳ ಗೌರವದಿಂದ ಹೇಳುತ್ತೇನೆ. ತಾವು ಅವರಿಗೆ ಇದನ್ನು introduce ಮಾಡುವುದಕ್ಕೆ ಬಿಡಬಾರದಾಗಿತ್ತು. ಅದು basically proper ಅಲ್ಲ. ಅವರು introduce ಮಾಡಿದ ಮೇಲೆ ನಾವು ನಮ್ಮ ಅಭಿಪ್ರಾಯ ಕೊಡಬೇಕಲ್ಲವೇ? ಮಾನ್ಯ ಅಧ್ಯಕ್ಷರಿಗೆ ನಾನು ವಿನಂತಿ ಮಾಡುತ್ತಿದ್ದೇನೆ. ಈ ತರಹ ಯಾವಾಗಲೂ ಆಗುವುದಿಲ್ಲ ಸರ್. When once Finance Minister replies on the budget you can allow. You have every right. But, not in between, What can we do?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಧ್ಯಕ್ಷರು ಅವರಿಗೆ ಅವಕಾಶ ಕೊಡಬಾರದಿತ್ತು.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಸಂಪ್ರದಾಯಕ್ಕೆ ಬೆಲೆ ಇಲ್ಲ, ಅದು ನೆಗೆದು ಬಿದ್ದು ಹೋಗಿದೆ. ಆದ್ದರಿಂದ, ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ಈ ಬಗ್ಗೆ ಸಮಗ್ರವಾಗಿ ಇಲ್ಲಿ ತಾವು ಮಂಡಿಸಿದಂಥ ಆಯವ್ಯಯದ ಬಗ್ಗೆ ಸಂಪೂರ್ಣ ಚರ್ಚೆ ಮಾಡಿದ ನಂತರ ಅವರು ಉತ್ತರ ಕೊಟ್ಟಿದ್ದರೆ ಅದಕ್ಕೆ ಬೆಲೆ ಇರುತ್ತಿತ್ತು. ಆದರೆ, ನೀವೀಗ ತಕ್ಷಣ ರೈತರ ಬಗ್ಗೆ ಹೇಳಿದ್ದೀರಿ, ಅದಕ್ಕೆ ನಾವು ಸಂತೋಷಪಡುತ್ತೇವೆ. ನಮ್ಮದೇನೆಂದರೆ, ಎಲ್ಲಾ ರೈತರದು ಮನ್ನಾ ಮಾಡುತ್ತೇವೆಂದು ತಾವು ಇಲ್ಲಿ ಉತ್ತರದಲ್ಲಿ ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ರೀತಿ ನಮ್ಮ ಪ್ರತಿಪಕ್ಷದ ನಾಯಕರು ರೈತರ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುವಂಥದನ್ನು ಮಾತನಾಡಿದ್ದಾರೆ. ನಾನು ಆಗಿನಿಂದ ಗಮನಿಸುತ್ತಿದ್ದೇನೆ. ಯಾರೊಬ್ಬರ ಬಾಯಲ್ಲೂ ಸಹ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದದ್ದರ ಬಗ್ಗೆ, ಇದೇ ಬರಗಾಲ, ಅತೀವೃಷ್ಟಿಗೆ ಸಿಕ್ಕಿ ನರಳುತ್ತಿರುವಂಥ ರೈತರ ಪರಿಸ್ಥಿತಿ ಬಗ್ಗೆ ಪ್ರಸ್ತಾಪ ಇಲ್ಲಿ ಆಗುವುದಿಲ್ಲ. ಇವತ್ತು ನಾವು ಮಾಡಬೇಕಾಗಿರುವ ಕೆಲಸವೇನೆಂದರೆ, ರಾಜ್ಯದ ಹಣಕಾಸಿನ ಇತಿಮಿತಿಯೊಳಗೆ 1950 ಕೋಟಿ ರೂಪಾಯಿಗಳನ್ನು ರೈತರ ನೆರವಿಗೆ ಕೊಡುತ್ತಿರುವಂಥದ್ದು ದೇಶದ ಇತಿಹಾಸದಲ್ಲಿ ಒಂದು ರಾಜ್ಯ ಕೊಡುತ್ತಿರುವಂಥ ಒಂದು ದೊಡ್ಡ ಕೊಡುಗೆಯಾಗಿದೆ. ಇವತ್ತು ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ನಿಮಿಷ. ನೀವು ಮಾತನಾಡಬೇಕಾದರೆ ನಾನು ಮಾತನಾಡಿದ್ದೇನೇ?

ಶ್ರೀ ಅರ್.ವಿ ದೇಶಪಾಂಡೆ: ಇದನ್ನು ಯಾವ ಬಜೆಟ್‌ನಲ್ಲಿ ಹೇಳಿದ್ದಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ factsನ್ನು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ 2698 ಕೋಟಿ ರೂಪಾಯಿಗಳನ್ನು ರೈತರಿಗೆ ಪರಿಹಾರದ packageನ್ನು ಕೊಟ್ಟಿಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಾತನಾಡಲಾದರೂ ಅವಕಾಶ ಕೊಡಬೇಕಲ್ಲವೇ sir? ಇದು ಕ್ರಮವೇ? ನೀವು ಮಾತನಾಡುವಾಗ ನಾವು ಕುಳಿತುಕೊಂಡಿದ್ದೆವು.

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರದವರು ಕೊಟ್ಟಿಲ್ಲವೇ? ಧರ್ಮ್‌ಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ 1200 ಕೋಟಿ ರೂಪಾಯಿಗಳ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲಿಲ್ಲವೇ? ಇತಿಹಾಸವನ್ನು ನಿರ್ಮಾಣ ಮಾಡುತ್ತೇವೆಂದು ಹೇಳುವುದಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೆ ಮಾತನಾಡಲು ಅವಕಾಶ ಕೊಡದೆಯೇ...

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಅವರೂ, ನೀವೆಲ್ಲ ಮಾತನಾಡಿದ್ದೀರಿ. ಹಲವಾರು ಸಲಹೆಗಳನ್ನು ಕೊಟ್ಟಿದ್ದೀರಿ. ಎಲ್ಲಾ ಮಾಡಿದ್ದೀರಿ. Let him reply. ಅದಕ್ಕೇಕೆ ನೀವು ಮಧ್ಯ ಮಧ್ಯದಲ್ಲಿ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಹೇಳಿದ್ದಕ್ಕೆ ಉತ್ತರ ಕೊಡಬೇಕಲ್ವಾ?(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಪೂರ್ಣವಾಗಿ ಹೇಳಿದಮೇಲೆ ಕೊಡಿ. ನಾನು yield ಆಗದೆಯೇ ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: discussion ಆದಮೇಲೆ ಇಲ್ಲಿ ತರಬೇಕಾಗಿತ್ತು ನೀವು ಬಜೆಟ್ ಮೇಲೆ general discussion ಆದಮೇಲೆ ಇದನ್ನು ತರಬೇಕಾಗಿತ್ತು.

ಅಧ್ಯಕ್ಷರು: ಅದಕ್ಕೆ ಅವರು ಉತ್ತರ ಕೊಡಬೇಕಿಲ್ಲ

ಶ್ರೀ ಸಿದ್ದರಾಮಯ್ಯ: ಹಾಗಾದರೆ, ಮಧ್ಯದಲ್ಲೇಕೆ ತೆಗೆದುಕೊಂಡು ಬಂದಿರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಅಧಿಕಾರದ ಚೌಕಟ್ಟಿನಲ್ಲಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ತಂದಿದ್ದೇವೆ. ನಮಗೆ ಒಂದು statement ಮಾಡಲು ಅವಕಾಶ ಇಲ್ಲವೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಇದು ಸಂವಿಧಾನದಲ್ಲಿ ಇದೆಯೇ? ಎಲ್ಲಿದೆ ತೋರಿಸಿ?

ಶ್ರೀ ಬಿ.ಎಸ್. ಯಡಿಯೂರಪ್ಪ: ಏನು ತೋರಿಸಬೇಕು?

ಶ್ರೀ ಸಿದ್ದರಾಮಯ್ಯ: Article 202ನಲ್ಲಿ ತೋರಿಸಿ?

ಶ್ರೀ ಬಿ.ಎಸ್. ಯಡಿಯೂರಪ್ಪ: Statement ಮಾಡಲು ನಮಗೆ ಅಧಿಕಾರವಿದೆ ಆದ್ದರಿಂದ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ: Article 202ನಲ್ಲಿ Budget ಮಂಡಿಸುವುದು ಎಂದು ಇದೆ. ಅದರಲಿ ಎಲ್ಲಿದೆ ತೋರಿಸಿ?

ಶ್ರೀ ಬಿ.ಎಸ್. ಯಡಿಯೂರಪ್ಪ: You cannot question the Chair/

ಶ್ರೀ ಸಿದ್ದರಾಮಯ್ಯ: ಅದೇ ತಪ್ಪು. ಕೊಟ್ಟಿದ್ದೇ ತಪ್ಪು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅನುಭವವಿರುವ ತಾವೇ ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಈಗ suo motu ಅಗಿರತಕ್ಕ..

ಶ್ರೀ ಎನ್.ಧರ್ಮಸಿಂಗ್: ಬಜೆಟ್ ಮಂಡನೆಯಲ್ಲಿ...

ಶ್ರೀ ಕೆ.ಎಸ್. ಈಶ್ವರಪ್ಪ: ಮೊದಲನೆಯ ಸಲ ಇಷ್ಟು ಸಾಲವನ್ನು ಮನ್ನಾ ಮಾಡಿರುವುದಕ್ಕೆ ಹೊಟ್ಟೆಯುರಿಯಿಂದ ಇವರಿಗೆ ತಡೆದುಕೊಳ್ಳಲು ಆಗುತ್ತಿಲ್ಲ! ಬೇರೆ ಇನ್ನೇನೂ ಅಲ್ಲ. ಇದಕ್ಕೆ ರಾಜಕೀಯ, ಸಂವಿಧಾನವಿಲ್ಲ. ಬಜೆಟ್ ಮೇಲೆ ಹೋದ ವರ್ಷ ಚರ್ಚೆ ಮಾಡಿದಿರಾ? ನಮಗೆ ಒಂದು ತಿಂಗಳು ಚರ್ಚೆ ಮಾಡಿ ಎಂದು ಅವಕಾಶ ಕೊಟ್ಟಿದ್ದೇವು. ಬರೀ ಧರಣಿ, ಸತ್ಯಾಗ್ರಹದಲ್ಲೇ ಇಡೀ session ಅನ್ನು ಹಾಳು ಮಾಡಿಬಿಟ್ಟರು. ಈಗ ಬಜೆಟ್ ಚರ್ಚೆ ಶುರುವಾಗಿ ಎಷ್ಟು ದಿವಸವಾಯಿತು? (ಗೊಂದಲ) ಇದುವರೆಗೆ ಏನಾದರೂ ಮಾಡಿದ್ದಾರೆಯೇ? ಇವರಿಗೆ ಬಜೆಟ್ ಬಗ್ಗೆ ಚರ್ಚೆ ಮಾಡಲು ಆಸಕ್ತಿಯೂ ಇಲ್ಲ. ರೈತರ ಸಾಲ ಮನ್ನಾ ಮಾಡುತ್ತೇವೆಂದರೂ ಅದಕ್ಕೂ ಹೊಟ್ಟೆ ಉರಿ. ಇಂಥ ಕಾಂಗ್ರೆಸ್ ವಿರೋಧ ಪಕ್ಷ ರಾಜ್ಯದಲ್ಲಿ ಎಂದೂ ಇರಲಿಲ್ಲ. ಇಷ್ಟು ನಮ್ಮ ದುರಾದೃಷ್ಟ. ಇವರು ಇಷ್ಟೆಲ್ಲಾ ಮಾತನಾಡಲು ಅವಕಾಶ ಕೊಟ್ಟರು. ಆದರೆ, ನಮ್ಮ ನಾಯಕರು ಮಾತನಾಡುವಾಗ ಒಟ್ಟೊಟ್ಟಿಗೇ ನಿಂತು ಕೂಗುತ್ತಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಈ ರೀತಿ ರೈತರ ಮನ್ನಾ ಮಾಡಿದ್ದಾರೆಯೆ? ಒಂದು ಸಲವಾದರೂ ಕರ್ನಾಟಕ ರಾಜ್ಯದಲ್ಲಿ ಈ ರೀತಿ ಮಾಡಿದ್ದೀರಾ ನೀವು?(ಗೊಂದಲ)

ಶ್ರೀ ಸಿದ್ದರಾಮಯ್ಯ: ಹತ್ತು ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದಾರೆ. ಇದೇನೂ ಹೊಸದಲ್ಲ. ವಿ.ಪಿ. ಸಿಂಗ್ ಇದ್ದಾಗ, ದೇವೀಲಾಲ್ ಇದ್ದಾಗ ಹತ್ತು ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದಾರೆ. It is not a new program in the country. ಸೋನಿಯಾಗಾಂಧಿಯವರು,(ಗೊಂದಲ) ಮನಮೋಹನ್‌ಸಿಂಗ್‌ರವರು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ರೈತರಿಗೆ ಕೊಟ್ಟಿರತಕ್ಕದ್ದು?

ಶ್ರೀ ಕೆ.ಎಸ್.ಈಶ್ವರಪ್ಪ: ಕೇಂದ್ರದ್ದು ಆಮೇಲೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿ ಮಾಡಿರಲಿಲ್ಲ.

ಅಧ್ಯಕ್ಷರು: ಎಲ್ಲರೂ ಏಕೆ ಮಾತನಾಡುತ್ತೀರಿ?(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಕೇಳಿ.

ಅಧ್ಯಕ್ಷರು: ಅವರು statement ಮಾಡಿದ್ದಾರೆ. ಅದಾದಮೇಲೆ ನೀವುಗಳೆಲ್ಲಾ ಅದರ ಮೇಲೆ ಸಲಹೆಗಳನ್ನು, ಬೇರೆ ಬೇರೆ ಒತ್ತಾಯಗಳನ್ನು ಮಾಡಿದ್ದೀರಿ. ಅವರು ಅದಕ್ಕೆ ಉತ್ತರವನ್ನು ಕೊಡಲಿ.(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಉತ್ತರವನ್ನು ಕೊಡಲು ಅವರು ಬಿಡುವುದೇ ಇಲ್ಲವಲ್ಲಾ? ಮೊದಲು ಉತ್ತರ ಕೊಡಲು ಅವಕಾಶ ಕೊಡಿ. ಅಮೇಲೆ, ಅವರು clarification ಕೇಳಲಿ.(ಗೊಂದಲ)ಇವರು ಎಷ್ಟೆಷ್ಟು ಸಲ ಮಾತನಾಡಿದ್ದಾರೆ ಕೇಳಿದ್ದಾಯಿತು. ಆದ್ದರಿಂದ ಈಗ ಉತ್ತರ ಕೊಡಲು ಅವಕಾಶ ಕೊಡಿ. ಅಮೇಲೆ, clarification ಕೇಳಲಿ.

ಶ್ರೀ ಎನ್. ಧರ್ಮಸಿಂಗ್: ವಿದರ್ಭ package ತರಹ 2890 ಕೋಟಿ ಕರ್ನಾಟಕ ರಾಜ್ಯಕ್ಕೆ ಕೊಟ್ಟಿದ್ದಾರೆ. ಕೇಂದ್ರಸರ್ಕಾರ ಕೊಟ್ಟಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಇದು ಸರಿಯಲ್ಲ. ಖಂಡಿತ ಇದು ಸರಿಯಲ್ಲ. ಅವರಿಗೆ ಉತ್ತರ ಕೊಡಲು ಬಿಡಿ.(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ದಯಮಾಡಿ, ವಿರೋಧ ಪಕ್ಷದ ನಾಯಕರಿಗೆ, ರೈತರ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರ ಬ್ಯಾಂಕುಗಳಲ್ಲಿ ರೈತರುಗಳು ಮಾಡಿರುವ ಸಾಲದ ಬಗ್ಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿದಂತಹ ಸಾಲದ ಹಣವನ್ನು ಮನ್ನಾ ಮಾಡುವ ಬಗ್ಗೆ ನಿರ್ಣಯವನ್ನು ತರಲಿ. ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯ ಮಂಡನೆ ಮಾಡಲಿ, ಅದನ್ನು ನಾವೆಲ್ಲಾ ಸಮರ್ಥನೆ ಮಾಡೋಣ.

ಶ್ರೀ ಎನ್. ಧರ್ಮಸಿಂಗ್: ಇನ್ನೂ ರೈತರಿಗೆ ಎಷ್ಟು ಜಾಸ್ತಿ ಮಾಡುತ್ತೀರಿ ಅದನ್ನು ಹೇಳಿ ಮೊದಲು 8 ದಿವಸದ ಒಳಗಾಗಿ ರೈತರ ಸಾಲ ತೀರಿಸಬೇಕು ನೀವು,

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮೊದಲು ಅವರಿಗೆ ಉತ್ತರ ಹೇಳಲು ಅವಕಾಶ ಕೊಡಿ. ಆಮೇಲೆ ಅವರು clarification ಕೇಳಲಿ. ಇವರು ಮಾತನಾಡಲೇ ಅವಕಾಶ, ಉತ್ತರ ಕೊಡಲೇ ಅವಕಾಶ ಕೊಡುತ್ತಿಲ್ಲ. ಇವರು ಮಾತ್ರ ಗಂಟೆಗಟ್ಟಲೆ ಮಾತನಾಡುತ್ತಾರೆ. ಇದು ಯಾವ ನ್ಯಾಯ?

(ಗೊಂದಲ)

ಮೊದಲು ಉತ್ತರ ಕೊಡಲು ಅವಕಾಶ ಕೊಡಿ. ಅನಂತರ clarification ಕೇಳಲಿ.

ಶ್ರೀ ಆರಗ ಜ್ಞಾನೇಂದ್ರ: ದಯಮಾಡಿ ವಿರೋಧ ಪಕ್ಷದ ನಾಯಕರು ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಮಾಡುವ ಬಗ್ಗೆ ಒಂದು ನಿರ್ಣಯವನ್ನು ತರಲಿ. ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರೋಣ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್: ಇವತ್ತು ಸದನದಲ್ಲಿ ಚರ್ಚೆಯಾಗಲಿ. ಚರ್ಚೆಯಾದ ಸಂದರ್ಭದಲ್ಲಿ ಇನ್ನು ಏನು ವಿನಾಯಿತಿ ಕೊಡುತ್ತೇವೆಂದು ಹೇಳಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ಇಷ್ಟೊತ್ತು ಚರ್ಚೆಯಾಗಿಲ್ಲವೇ? ಹಾಗಾದರೆ ಇಷ್ಟೊತ್ತು ಆಗಿದ್ದೇನು?

ಶ್ರೀ ಎಂ.ಪಿ ಪ್ರಕಾಶ್: ನಿಯಮಾವಳಿ 345ರ ಕೆಳಗೆ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಒಂದು ಹೇಳಿಕೆಯನ್ನು ಕೊಡಲು ತಾವು ಪರವಾನಗಿಯನ್ನು ಕೊಟ್ಟಿದ್ದೀರಿ. ಅದೇ ರೀತಿಯಾಗಿ ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಇಲ್ಲ. ಆದರೂ ಕೂಡ ಬಹಳ ಮಹತ್ವವಾದ ವಿಷಯವಿದ್ದರೆ ಚರ್ಚೆಗೆ ತಾವು ಅವಕಾಶವನ್ನು ಕಲ್ಪಿಸಿಕೊಡಬಹುದು.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರೇ, ಇವತ್ತು ಇನ್ನೂ ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾಗಿಲ್ಲ.

ಶ್ರೀ ಎಂ.ಪಿ ಪ್ರಕಾಶ್: ವಿರೋಧ ಪಕ್ಷದ ನಾಯಕರು ತಾವು, ತಾವು ಹೇಳಿದ ತಕ್ಷಣವೇ ನಾನು yield ಆದೆ. ಈಗಲೂ ಕೂಡ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವಾಗ ನಿಯಮ 345ರಲ್ಲಿ ಬಹಳ ಸ್ಪಷ್ಟವಾಗಿರುವುದಿದೆ. ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಯಾರ ಆಕ್ಷೇಪಣೆಯೂ ಇಲ್ಲ.

"With the consent of the Speaker a Minister may make a statement on a matter of public importance. On such statement no discussion shall be allowed, members may be permitted to ask clarification for the purpose of eliciting further information".

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: Financial matters 345ರ ಕೆಳಗೆ ಮಾಡಿಸುತ್ತೀರಾ ನೀವು? ತಾವೀಗ rules quote ಮಾಡಿದ್ದೀರಿ. ನಾವ್ಯಾರೂ ಪ್ರಶ್ನೆ ಮಾಡಿರಲಿಲ್ಲ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: Let me submit whatever I want to say. Let me complete. Then you try to convince me. I am here to correct myself. ನೀವೆಲ್ಲರೂ ಮಧ್ಯದಲ್ಲಿ ನಿಂತುಕೊಂಡು ಇದೇನು? ಅದೇನು? ಅಂದರೆ ನಾವು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ? ನನ್ನ ಅಲ್ಪ ಬುದ್ಧಿಗೆ ಏನು ತಿಳಿದಿದೆ, ಅದರ ಪ್ರಕಾರ 345ರ ನಿಯಮವನ್ನು ಹೇಳಿದ್ದೇನೆ. gestures themselves also amount to the reason. Right ಇರಲಿ, wrong ಇರಲಿ ನಾವು ಹೇಳಿರತಕ್ಕಂಥಾದ್ದು. ಈಗ ಬಜೆಟ್ ವಿಷಯದಲ್ಲಿ ಯಾವುದೇ ಸಂದರ್ಭದಲ್ಲಿ ಕೂಡ ಈ ನಿಯಮ 345 ಅನ್ನೂ ಕೂಡ ಪರಾಂಬರಿಸಬೇಕಾಗುತ್ತದೆ. ಅದರ ಕೆಳಗೆ ಅವರೊಂದು statement ಕೊಟ್ಟರು. ಅನೇಕ ರೈತರು ಈ ವಿಚಾರದಲ್ಲಿ

ಆತಂಕಕ್ಕೊಳಗಾಗಿದ್ದರಿಂದ ಅದರ ಸ್ಪಷ್ಟೀಕರಣವನ್ನು ಕೊಡಬೇಕಾಯಿತು. ಬಜೆಟ್‌ನ ಪಾವಿತ್ರ್ಯತೆ ಹೊರಟು ಹೋಯಿತು, ನಂತರ ಹೇಳಬೇಕಾಗಿತ್ತು ಎಂದು ತಾವು ಹೇಳುತ್ತೀರಿ. ಅದು it is a matter of opinion, perception. ಆ ಕಾರಣಕ್ಕಾಗಿ ನಿಯಮಬಾಹಿರವಾಗಿರತಕ್ಕಂಥದ್ದೇನೂ ಅವರು ಹೇಳಿಲ್ಲ. ನಿಯಮಬಾಹಿರವಾಗಿತಕ್ಕಂಥ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಚರ್ಚೆಗೆ ಅನುಕೂಲವಾಗತಕ್ಕಂಥಾದ್ದಿದೆ. ಜನತೆಯ ಮನಸ್ಸಿನಲ್ಲಿರತಕ್ಕಂಥ ಆತಂಕವನ್ನು ನಿವಾರಣೆ ಮಾಡಬೇಕಾಗಿದೆ. ಏಕೆಂದರೆ, ಪತ್ರಿಕೆಯಲ್ಲಿ ಸರಿಯಾಗಿ ವರದಿಯಾಗಿದೆ. 25,000 ರೂಪಾಯಿಗಳು ಸಾಲ ಇರತಕ್ಕಂಥವರು ಮಾತ್ರ ಇದರ ಲಾಭವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಉಳಿದಿರತಕ್ಕಂಥವರು 31ನೇ ತಾರೀಖಿನೊಳಗಾಗಿ ಅಸಲನ್ನು ಕಟ್ಟಿದರೆ ಬಡ್ಡಿ ಮನ್ನಾ ಆಗುತ್ತದೆಂದು ಹೇಳಿ ಅತಂಕಕ್ಕೊಳಗಾಗಿದ್ದರು. ಅದರ ಬದಲು ಅವರು, ಈಗ 50,000 ರೂಪಾಯಿಗಳವರೆಗೆ ಇರತಕ್ಕಂಥ ಸಾಲಗಾರರು ಯಾರ್‍ಯಾರಿದ್ದಾರೆ ಅವರಿಗೆ 25,000 ರೂಪಾಯಿಗಳವರೆಗೂ ಊರ್ಜಿತವಾಗುತ್ತದೆ. 50,000 ರೂಪಾಯಿ ಸಾಲ ತೆಗೆದುಕೊಂಡವರಿಗೆ 25 ಸಾವಿರ ರೂಪಾಯಿ ಮನ್ನಾ ಆಗುತ್ತದೆ, ಉಳಿದ 25000ಕ್ಕೆ ನೀವು ಅಸಲನ್ನು ಕಟ್ಟಿದರೆ ಆಗುತ್ತದೆ, ಇಷ್ಟು ಹೊರೆಯಾಗುತ್ತದೆ ಎಂಬ ಮಾತನ್ನು ಹೇಳಿದರು. ತಾವು ಬಜೆಟ್ ಮೇಲೆ ಉತ್ತರ ಕೊಡತಕ್ಕಂಥ ಸಂದರ್ಭದಲಿ ಇದರ ಬಗ್ಗೆ ಹೇಳಬಹುದಾಗಿತ್ತು, ನಿಮಗೆ ಯಾರೂ ಕೈಹಿಡಿಯುತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನೂ ಹೇಳಿದಿರಿ. ಹೆಚ್ಚು ಆತಂಕವಿರಬಾರದೆನ್ನುವ ಕಾರಣಕ್ಕಾಗಿ ಅವರು ಹೇಳಿಕೆ ಕೊಟ್ಟಿದ್ದಾರೆ. ಇದರ ಜೊತೆಗೆ, ಮಾತನಾಡುವಂಥ ಸಂದರ್ಭದಲ್ಲಿ ಅನೇಕ ಬಾರಿ ಕೂಡ ಚರ್ಚೆ ಮಾಡಿದ್ದೇವೆ. ಇದೇನೂ ಅವರು ದುಡ್ಡು ಕೊಟ್ಟಿದ್ದಾ? ನೀವು ಆಗಲೇ ಚರ್ಚೆ ಮಾಡಿದಂಥ ಸಂದರ್ಭ ಬಂದಾಗ, ಮಾನ್ಯ ಈಶ್ವರಪ್ಪನವಪರು ಮಾತನಾಡುವಾಗ, ಯಡಿಯೂರಪ್ಪನವರು ನಮಗೆ ಈ ರೀತಿ ಆರೋಗ್ಯ ಇಲಾಖೆಗೆ ಹಣ ಕೊಟ್ಟಿದ್ದರೆ ಎಂದರೆ ಏನು ಆರೋಗ್ಯ ಇಲಾಖೆಯಿಂದ ಯಡಿಯೋರಪ್ಪನವರು ಕೊಟ್ಟಿದ್ದಾರೆಂದತರೆ ಅದೇನೂ ಅವರಿಗೆ ಕೊಟ್ಟಿರತಕ್ಕಂಥದ್ದೇ ಇಲಾಖೆಗೆ ಬೇಡಿಕೆ ಇರುತ್ತದೆ, ಇಲಾಖಾ ಬೇಡಿಕೆ ಮೇಲೆ ಮಾತನಾಡಿ ಎಂದು ಹೇಳಿದರು. ನಾವೇನಾದರೂ, ಕೇಂದ್ರ ಸರ್ಕಾರದವರು ಏಕೆ ರದ್ದುಮಾಡಿಲ್ಲವೆಂದ ತಕ್ಷಣವೇ... ನಿಮ್ಮದು ಎಷ್ಟು ಕೇಂದ್ರ ಸರ್ಕಾರವೋ, ಅದು ನಮ್ಮದೂ ಅಷ್ಟೇ ಕೇಂದ್ರ ಸರ್ಕಾರ. ಅದು ಕಾಂಗ್ರೆಸ್‌ನ ಸರ್ಕಾರ ಅಲ್ಲ ಅಥವಾ ಇದೂ ಕೂಡ ಸಮ್ಮಿಶ್ರ ಸರ್ಕಾರ ಅಲ್ಲ. ಇದು ಕನ್ನಡಿಗರ ಸರ್ಕಾರ. ಅದು ಭಾರತೀಯರ ಸರ್ಕಾರ. ಆ ಕಾರಣಕ್ಕಾಗಿ ನಾವು ಕೇಂದ್ರ ಸರ್ಕಾರದಲ್ಲಿರತಕ್ಕಂಥ ವಿಚಾರಗಳನ್ನೂ ಕೂಡ ಚರ್ಚೆ ಮಾಡುತ್ತೇವೆ. ನಿಮ್ಮ ಏನು ದೊಡ್ಡ ಶಕ್ತಿ ಇದೆ, ಪಕ್ಷದವರೇ ಅಲ್ಲಿ ಮುಖಂಡತ್ವ ವಹಿಸಿರುವುದರಿಂದ ನಮ್ಮ ರೈತರಿಗೂ ಕೂಡ ಸಾಲ ಮನ್ನಾ ಆಗತಕ್ಕಂಥ ವಿಚಾರದಲ್ಲಿ ತಾವು ಮಾಡಿ ಎಂದು ಹೇಳಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಂಥ ಸಂದರ್ಭದಲ್ಲಿ

ಇದೇನೂ ಹೊಸ ವಿಷಯವಲ್ಲ, ವಿ.ಪಿ. ಸಿಂಗ್‌ರವರ ಕಾಲದಲ್ಲಿ 10 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿದ್ದಾರೆಂದು ಹೇಳಿದರು. ಇದು ಹೊಸ ವಿಷಯವೇ, ಏಕೆಂದರೆ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ, ಆಗ ದೇವೇಗೌಡರು, ಎಸ್.ಆರ್.ಬೊಮ್ಮಾಯಿಯವರು, ಜೆ.ಹೆಚ್. ಪಟೇಲ್‌ರವರು, ನಾನು ಎಲ್ಲರೂ ಆ ಸಚಿವ ಸಂಪುಟದಲ್ಲಿದ್ದಾಗ ಇಡೀ ಭಾರತ ದೇಶದಲ್ಲಿ ಪ್ರಥಮ ಬಾರಿಗೆ ಬಡ್ಡಿಯನ್ನು ಮನ್ನಾ ಮಾಡತಕ್ಕಂಥಾದ್ದು, ಅಸಲನ್ನು ಕೊಟ್ಟಿದರೆ ಬಡ್ಡಿ ರದ್ದು ಮಾಡುವ ಪರಿಕಲ್ಪನೆ ಆ ಕಾಲದಲ್ಲಿ ಬಂತು. ಅಲ್ಲಿಯವರೆಗೂ ಕೂಡ ಭಾರತ ದೇಶದಲ್ಲಿ ಇಂಥ ಯಾವ ವಿಚಾರಗಳೂ ಕೂಡ ಇರಲಿಲ್ಲ. ಮುಂದೆ, ದೇವೆಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು 4ನೇ ಬಾರಿ ರದ್ದು ಮಾಡುವಂಥ ಸಂದರ್ಭದಲ್ಲಿ NABARD ನವರು ನಮಗೆ ಇನ್ನು ಮೇಲೆ ಸಾಲ ಕೊಡುವುದಿಲ್ಲ, ನಿಲ್ಲಿಸುತ್ತೇವೆಂದರು. ಎಸ್.ಎಸ್. ಪಾಟೀಲ್‌ರನ್ನು, ಎಂ.ಸಿ. ನಾಣಯ್ಯನವರನ್ನು ಚರ್ಚೆ ಮಾಡಲಿಕ್ಕೆ ಸಿದ್ದರಾಮಯ್ಯನವರ ನೇತೃತ್ವದಲ್ಲಿ NABARD ನವರ ಜೊತೆ ಚರ್ಚೆ ಮಾಡಲಿಕ್ಕೆ ಬೊಂಬಾಯಿಗೆ ಹೋಗಿ ಮಾತನಾಡಿ, ನಾವು ಹಣವನ್ನು ಕಟ್ಟುತ್ತೇವೆ, ನಿಮಗೆ ಏಕೆ ಆತಂಕ? ನಿಮಗೇನಾಗಬೇಕಾಗಿದೆ, ನೀವು ಸಾಲ ಕಟ್ಟಿದ್ದೀರಿ, ಆ ಸಾಲಗಳನ್ನು ನಾವು ಕಟ್ಟುತ್ತೇವೆ, ನಾವು ಅವರ ಪರವಾಗಿ ಸಾಲವನ್ನು ಕಟ್ಟುತ್ತೇವೆಂದು ಹೇಳಿ ಅದರ ಪ್ರಕಾರವಾಗಿ ಸಾಲ ಕಟ್ಟಿರುವುದಿದೆ. ರಾಜಣ್ಣನವರು ಹೇಳಿದಂತೆ ಒಂದು ಆತಂಕವಿದೆ. ನಾವು ಮೇ ತಿಂಗಳೊಳಗೋ ಅಥವಾ ಅದರೊಳಗಾಗಿಯೇ ನಾವು ಹಣ ಕಟ್ಟದೇ ಹೋಗಿದ್ದರೆ 28 ಸಾವಿರದಷ್ಟಿರುವ ನಮ್ಮ Cooperative Institutiions ರೊಗಗ್ರಸ್ತವಾಗುತ್ತವೆ ಅನ್ನುವಂಥಾದ್ದೇನಿದೆ, ಆ ಆತಂಕಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಆಗಲಿ. ಆ ಕಾರಣಕ್ಕಾಗಿ ಸನ್ಮಾನ್ಯ ಕೇಂದ್ರ ಸರ್ಕಾರ ಎಂದ ಕೂಡಲೇ ಅದು ನಿಮ್ಮದಲ್ಲ. ನಾವೂ ಕೂಡ ಸಂತೋಷಪಡುವಂಥ ಅನೇಕ ವಿಷಯಗಳಿವೆ. ನಮ್ಮ ಬಜೆಟ್ ಬಂದಾಗಲೂ ಕೂಡ ನೀವು ಸಂತೋಷಪಡುವಂಥಾದ್ದು ಇದ್ದರೆ ಅದನ್ನು ಹೇಳಿ. ಈಗ ಅವರು ಹೇಳಿಕೆ ಕೊಟ್ಟಿರತಕ್ಕಂಥಾದ್ದರಲಿ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲದಿದ್ದರೂ ತಾವು ಕೊಟ್ಟಿದ್ದೀರಿ. ಅದರ ಪಾವಿತ್ರ್ಯತೆ ಹಾಳಾಗುತ್ತದೆ ಎಂದಲ್ಲ. ದೊಡ್ಡ ಗುರಿಯನ್ನು ಇಟ್ಟುಕೊಂಡಿರತಕ್ಕಂಥ ಸಂದರ್ಭದಲ್ಲಿ ರೈತರ ಮನಸ್ಸಿನಲ್ಲಿ ಅನಾವಶ್ಯಕವಾದ ಆತಂಕ ಮೂಡಬಾರದೆಂದು ಆ ಹೇಳಿಕೆ ಕೊಟ್ಟಿದ್ದಾರೆ. ದಯವಿಟ್ಟು, ಅದನ್ನು ಬಹಳ ಸಕಾರಾತ್ಮಕವಾಗಿ ಸ್ವೀಕಾರ ಮಾಡಬೇಕೆಂದು ವಿನಂತಿಮಾಡುತ್ತೇನೆ.

ಶ್ರೀಕೆ.ಆರ್.ರಮೇಶ್ ಕುಮಾರ್: ಪಾವಿತ್ರತೆ ಹೋಗುವುದಿಲ್ಲ. ತಪ್ಪೂ ಏನಾಗುವುದಿಲ್ಲ. ಹಾಗಾದರೆ, Planning Commission ಏಕಿರಬೇಕು? ಇವರು Budget present ಮಾಡುವುದಕ್ಕೆ ಮೊದಲು Planning Commission ನವರ ಹತ್ತಿರ discussion ಗೆ ಏಕೆ ಹೋಗಬೇಕು? Plan size ಏಕೆ discuss

ಮಾಡಬೇಕು? ಇಲ್ಲಿ ಬಂದು tax proposals ಏಕೆ ಹೇಳಬೇಕು? Concessions ಏಕೆ announce ಮಾಡಬೇಕು? ಆಮೇಲೆ, department wise demands ಏಕೆ ತೆಗೆದುಕೊಳ್ಳಬೇಕು? ಏನು ಬೇಕಾಗಿಲ್ಲ. ಮನಸ್ಸಿಗೆ ಬಂದಂತೆ ಮಾಡಿಕೊಂಡು ಹೋಗಿ. ಒಂದು order ಬೇಕಿಲ್ಲವೆಂದರೆ, procedure ಬೇಕಿಲ್ಲವೆಂದರೆ you do as you like.

ಶ್ರೀ ಎಂ.ಪಿ. ಪ್ರಕಾಶ್: ಯಾವುದೇ ಆದರೂ ಒಂದು ಸನ್ನಿವೇಶದ ಪ್ರಕಾರ ನಡೆದುಕೊಳ್ಳಬೇಕಾದರೆ, ನಾವು ಯೋಜನಾ ಗಾತ್ರವನ್ನು ನಿರ್ಧಾರ ಮಾಡಬೇಕಾಗುತ್ತದೆ. ಆಯವ್ಯಯದಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಹಣಕಾಸನ್ನೂ ಹೊಂದಿಸಿಕೊಡಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ಹಿಂದಿನ ಜೆ.ಹೆಚ್. ಪಟೇಲ್‌ರವರ ಮಂತ್ರಿಮಂಡಲದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು.

ಶ್ರೀ ಕೆ. ಆರ್. ರಮೇಶ್‌ಕುಮಾರ್: ನಾನು ಅದನ್ನೆ ವಿನಂತಿ ಮಾಡಿಕೊಂಡಿರತಕ್ಕಂಥಾದ್ದು. ಹಣಕಾಸಿನ ಮಂತ್ರಿಯಾಗಿರತಕ್ಕಂಥದವರಿಗೆ ಈ ಸದನದಲ್ಲಿ ದೊರಕತಕ್ಕಂಥ ವಿಶೇಷ ಗೌರವ ಇದು. ಅವರು ಬಜೆಟ್ ಮಂಡಿಸಿಯಾದ ಮೇಲೆ ಅದರ ಮೇಲೆ ಪೂರ್ಣ ಪ್ರಮಾಣದ ಚರ್ಚೆಯಾದ ಮೇಲೆ ಚರ್ಚೆಯ ವೇಳೆ ಅವರಿಗೇನೇನು ಅಂಶಗಳು ಮನಸ್ಸಿಗೆ ಬರುತ್ತವೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ರಾಜ್ಯದ ಹಿತವನ್ನು, ಬೊಕ್ಕಸದ ಪರಿಸ್ಥಿತಿಯನ್ನು ನೋಡಿಕೊಂಡು ಏನೇನು concession ಕೊಟ್ಟು ಅದನ್ನೆಲ್ಲ declare ಮಾಡಬಹುದು. ಅದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ಅವರೇ ಅದನ್ನು ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ತಾವು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತಾ, ಯೋಜನಾ ಗಾತ್ರದ ವಿಚಾರಕ್ಕೆ ಬಂದಾಗ ಯೋಜನಾ ಗಾತ್ರದ ಚರ್ಚೆ ಏಕಾಗಬೇಕು? ಆಯವ್ಯಯದ ವಿಚಾರದಲ್ಲಿ ಬಜೆಟ್‌ನ ಪಾವಿತ್ರ್ಯತೆ ಬಗ್ಗೆ ಮಾತನಾಡಿದಾಗ ಹಿಂದೆ ನಮ್ಮಲ್ಲಿ ಸರ್ಕಾರಿ ನೌಕರರಿಗೆ ಅವತ್ತಿನ ದಿವಸದಲ್ಲಿ 720 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟೆವು. ಆ ಸಂದರ್ಭದಲ್ಲಿ ನಾವು ಅಂತರಿಕವಾಗಿ ಚರ್ಚೆ ಮಾಡುವಾಗ ಅದರ ಸಾಧಕ ಬಾಧಕ ಎಲ್ಲ ಚರ್ಚೆ ಮಾಡಿದೆವು. ಆದರೆ, ಅನಿವಾರ್ಯವಾದಂಥ ಒಂದು ಸ್ಥಿತಿ ತೆಗೆದುಕೊಂಡು ಬಂದಾಗ 720 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಪ್ರಸ್ತಾಪ ಇಲ್ಲದಿದ್ದರೂ ಕೂಡ ಅದನ್ನು ಮಾಡಿಕೊಟ್ಟೆವು. ಒಂದೊಂದು ಸಂದರ್ಭಗಳು ಹಾಗೆ ಬರುತ್ತವೆ.

ಶ್ರೀ ಸಿದ್ದರಾಮಯ್ಯ: ನಮ್ಮ ತಕರಾರೇನಿಲ್ಲ. ನಿಯಮ 345ರಲ್ಲಿ ಹೇಳುವುದಕ್ಕೆ ನಮ್ಮ ತಕರಾರೇನಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಮ್ಮ ತಕರಾರಿದೆ.

ಶ್ರೀ ಸಿದ್ದರಾಮಯ್ಯ: ನಿಯಮ 345 ಇರುವುದು, ಮಂತ್ರಿಗಳು statement....

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾತನಾಡುತ್ತೀರೇ ಹೊರತು, ಇದು ರೈತರಿಗೆ ಅನುಕೂಲವಾಗುತ್ತದೆ ಎಂದು ನೋಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು rules ಪುಸ್ತಕ ಮುಟ್ಟುವುದಿಲ್ಲ. Law Ministerರವರು rules ಹೇಳಿದರು. Rules cannot be misquoted.

ಶ್ರೀ ಸಿದ್ದರಾಮಯ್ಯ: ರೈತರಿಗೆ ಅನುಕೂಲವಾಗುತ್ತದೆ ಎಂದು ಅದಕ್ಕೆ ನಾವು ಸ್ವಾಗತ ಮಾಡೆದ್ದೇವಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು rules ಹೇಳಿಲಲ್ಲ. Rules ಹೇಳಿದ್ದು Parliamentary Affairs Minister.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮಗೆ ರೈತರು.... ಜನರ ಹತ್ತಿರ ಹೋಗಿ ಜನರು ಬಡಿಗೆ ತೆಗೆದುಕೊಂಡು ಬೆನ್ನ ಹತ್ತುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: 10 ಸಾರಿ ಹೋಗಿದ್ದೇವೆ, ಬಂದಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮನೆ ಮನೆಯಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿದೆ. ಇಷ್ಟು ವರ್ಷ ನೀವ್ಯಾರೂ ಮಾಡುವುದಕ್ಕಾಗದ ಕೆಲಸವನ್ನು ನಾವು ಮಾಡಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: It is not related to budget. That is our objection.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ ಕೊಡಲಿ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಆಯವ್ಯಯ ಮಂಡನೆ ಮಾಡಿ, ಆಯವ್ಯಯ ಚರ್ಚೆಯಾಗದೇ ನೀವು ಮಧ್ಯೆ ಬಂದು ಹೇಳಿಕೆ ಕೊಟ್ಟು ಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನೇನು ಮಾಡಿದ್ದೇನೆಂದು ಉತ್ತರ ಕೊಡುತ್ತೇನೆ. ಹೀಗೇ ನಡೆಯಬೇಕೆಂದು ನೀವು ಹೇಳುವುದಕ್ಕಾಗುವುದಿಲ್ಲ. (ಗೊಂದಲ) ಅಧ್ಯಕ್ಷರ ಅಪ್ಪಣೆ ಪಡೆದು.....ಮಾಡಿದ್ದೇನೆ(ಗೊಂದಲ) ಇವತ್ತು ರೈತರು ನಮ್ಮದೇನು ಗತಿ? 50 ಸಾವಿರ ಮಾಡಿದ್ದಾರೆ, ನಮ್ಮದು 25 ಸಾವಿರ ಮನ್ನಾ ಆದ ಮೇಲೆ ನೆಮ್ಮದಿಯಿಂದ ಬದುಕುತ್ತೇನೆ ಎನ್ನುವಂಥ ಮನುಷ್ಯ, ಯಾವ ರೈತ ಸಂಕಷ್ಟದಲ್ಲಿದ್ದ ಅವನಿಗೆ ಇನ್ನೊಂದು ವಾರದ ಕಾಲದವರೆಗೂ ಏನೋ ಆಗುತ್ತದೆ

ಎನ್ನುವ ಅಗತ್ಯವಿಲ್ಲ, ಇವತ್ತೇ ನಿಮಗೂ 25 ಸಾವಿರ concession ಕೊಟ್ಟಿದ್ದೇನೆಂದು ಹೇಳಿದರೆ ಅವರು ಇವತ್ತು ನೆಮ್ಮದಿಯಿಂದ ಊಟ ಮಾಡುತ್ತಾರೆ. ಅದಕ್ಕೆ ಅವರಿಗೆ ಸಂಕಟವೇನು? (ಗೊಂದಲ) ನಿಮ್ಮ ಸಮಸ್ಯೆ ಏನು ಕೇಳಿ?(ಗೊಂದಲ)

ಶ್ರೀ ಧರ್ಮಸಿಂಗ್: ಘೋಷಣೆ ಮಾಡುತ್ತಿದ್ದೀರಿ. ರೈತರಿಗೆ ವಂಚನೆ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ, ಕುಳಿತುಕೊಳ್ಳಿ. ಅವರು ಉತ್ತರ ಹೇಳಲಿ. ಪ್ರಶ್ನೆಗಳಿಗೆ ಉತ್ತರ ಹೇಳಲಿ. (ಗೊಂದಲ)

(ಗೊಂದಲ)

ಅಧ್ಯಕ್ಷರು: ನೋಡಿ ದಯಮಾಡಿ ಕೇಳಿ. ಅವರು statement ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟೆ. Statement ಮಾಡಿದ ಮೇಲೆ ನಿಮ್ಮ ಸಲಹೆಗಳನ್ನು ನೀಡಿ(ಗೊಂದಲ) ಅದಕ್ಕೆ ಅವರು ಉತ್ತರ ಕೊಡಬೇಕೆಲ್ಲವೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ಯಾವ ರೂಲ್ ಪ್ರಕಾರ ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ ಎಂದು ನಮಗೆ ಹೇಳಿ.

(ಗೊಂದಲ)

ಅಧ್ಯಕ್ಷರು: 345 ರ ಪ್ರಕಾರ ಮಾಡಿ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಸ್ಪೀಕರ್, ಲಾ ಮಿನಿಸ್ಟ್ರು ಹೇಳಿದ್ದಾರೆ 345ರ ಮೇಲೆ ಮಂತ್ರಿಗಳು ಹೇಗೆ ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು: ನೋಡಿ ಸ್ವಾಮಿ ಮಾನ್ಯ ಮಂತ್ರಿಗಳು ಕೆಲವು ಸಾರ್ವಜನಿಕ ಮಹತ್ವವಿರುವ ಅಂಶಗಳ ಬಗ್ಗೆ ಹೇಳುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಯಾವ ರೂಲ್‌ನಲ್ಲಿ ಅವಕಾಶ ಕೊಟ್ಟಿದ್ದೀರಿ?

(ಗೊಂದಲ)

ಅಧ್ಯಕ್ಷರು: ರೀ ಸ್ವಾಮಿ, ಮೊದಲು ಇಲ್ಲಿ ಕೇಳಿ. 345ರ ಕೆಳಗೆ ಕೊಟ್ಟಿದ್ದೇನೆ. ಕೊಟ್ಟ ತಕ್ಷಣ ಅವರು ಹೇಳಿಕೆ ಕೊಟ್ಟರು. ಅವರು statement ಕೊಟ್ಟತಕ್ಷಣ ನೀವು ಕಾಯಿದೆಗಳನ್ನು ಹೇಳುವವರು ಚರ್ಚೆಯಲ್ಲಿ ಹೇಗೆ ಭಾಗವಹಿಸಿದಿರಿ? ಈಗ ನೀವು ಮಾತನಾಡುತ್ತಿರಾ? Are you questioning?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: Yes, we are questioning.

(ಗೊಂದಲ)

ಅಧ್ಯಕ್ಷರು: ಚರ್ಚೆಯಲ್ಲಿ ಏಕೆ ಭಾಗವಹಿಸಿದಿರಿ? I have got power. ನಾನು ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೇನೆ. ನೀವು ಚರ್ಚೆಯಲ್ಲಿ ಭಾಗಿಯಾಗಿ ನಿಮಗೆ ಇಷ್ಟ ಬಂದ ಹಾಗೆ ಮಾತನಾಡುತ್ತೀರಿ. I am seeing. ಇಲ್ಲಿ ಏನಾಗಿದೆ ಎಂದರೆ, ನೀವು ಹೇಳುವುದನ್ನು ಒಪ್ಪಿದರೆ ಸರಿ. ಅಲ್ಲದಿದ್ದರೆ ಅಲ್ಲ. ನೀವು ಹೇಗೆ ಚರ್ಚೆಯಲ್ಲಿ ಭಾಗವಹಿಸಿದಿರಿ? ಅವರೇನು statement ಮಾಡಿದ ತಕ್ಷಣ ನೀವು ಎದ್ದು ನಿಂತು ಮಾಡುವ ಹಾಗೆ ಇಲ್ಲ ಎಂದು ಹೇಳಿದ್ದರೆ I would have agreed. ಈಗ ಏನಾಗಿದೆ ಎಂದರೆ, ನೀವು ಹೇಳುವುದನ್ನ ಹೇಳಿ ಬಿಟ್ಟು ಕೊನೆಯಲ್ಲಿ ಈ ರೀತಿ ಹೇಳಿದರೆ ಹೇಗೆ? ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವೇನು ಹೆದರಿಕೊಂಡು ಓಡಿ ಹೋಗುವುದಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಹುಚ್ಚು-ಹುಚ್ಚಾಗಿ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನನಗೆ ಇರತಕ್ಕಂಥ ಅಧಿಕಾರದಲ್ಲಿ ನಿಯಾಮಾವಳಿಯಲ್ಲಿರುವಂತೆ ಅವರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಭೆ ಅಕ್ರಮವಾಗಿ ನಡೆಯುತ್ತಿದೆ.

ಅಧ್ಯಕ್ಷರು: ನೀವು ಉತ್ತರ ಕೊಡಿ ಸ್ವಾಮಿ. ಏನೆಂದರೆ ನೀವೇ ಕೆಲವು ಜನ ಈ ಸದನವನ್ನು ಗುತ್ತಿಗೆ ತೆಗೆದುಕೊಂಡಿದ್ದೀರಿ. ನನಗಿರತಕ್ಕಂಥ ಅಧಿಕಾರವನ್ನು ಬಳಸಿಕೊಂಡು ಅವರಿಗೆ statement ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆ ಚರ್ಚೆಯಲ್ಲಿ ನೀವೇಕೆ ಭಾಗವಹಿಸಿದಿರಿ? ಚರ್ಚೆಯಲ್ಲಿ ಭಾಗವಹಿಸಿ ನಿಮ್ಮ ಸಲಹೆಗಳನ್ನು ಕೊಟ್ಟು ಈಗ ಯಾವ ನಿಯಮದಲ್ಲಿ ಕೊಟ್ಟಿರಿ ಎಂದು ಕೇಳುತ್ತಿದ್ದೀರಾ?ಇದು ನಿಮಗೆ ಗೌರವವಲ್ಲ ಎನೆಂದರೆ ನೀವೆಲ್ಲ ಕೆಲವರು ಗುತ್ತಿಗೆಗೆ ತೆಗೆದುಕೊಂಡಿದ್ದೀರಾ? No. I am seeing. ಪ್ರತಿಯೊಂದಕ್ಕೂ ಒಂದು ಇತಿ ಮಿತಿ ಇದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನಮಗೆ ಹೇಳಬೇಡಿ. ನೀವು ಮೊದಲು ಬೇರೆಯವರಿಗೆ ಹೇಳಿ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಯಾವುದು apply ಆಗುವುದಿಲ್ಲವೆಂದು ಹೇಳುತ್ತೀರೋ ಅದನ್ನು ಅಲ್ಲೇ ಪಕ್ಕದಲ್ಲೇ ಇರುವವರು ಮಾತನಾಡಲು ಬಿಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಿಟ್ಟಿನಿಂದ ಸದನವನ್ನು ನಡೆಸುವುದು ಒಳ್ಳೆಯದಲ್ಲ.

ಅಧ್ಯಕ್ಷರು: ನೋಡಿ ಸ್ವಾಮಿ, ನಾನು ಹೇಳುತ್ತೇನೆ ಕೇಳಿ, ನೀವು ಕೆಲವು ಜನ ಗುತ್ತಿಗೆ ತೆಗೆದುಕೊಂಡ ಹಾಗೆ... ನೀವು ಹೇಳಿದಂತೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಈ ನಿಯಮಾವಳಿಯಲ್ಲಿರತಕ್ಕಂಥ provisions ಏನು ಇದೆ ಅದರ ಮೇಲೆ ನನ್ನ ಅಧಿಕಾರವನ್ನು ಉಪಯೋಗಿಸಿ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಇದರ ಬಗ್ಗೆ ನಿಯಮಾವಳಿ 345 clear ಆಗಿ ಹೇಳುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಬಜೆಟ್‌ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಅವರು ಹೇಳಬೇಕು.

ಅಧ್ಯಕ್ಷರು: ನೀವು ಮೊದಲು ನನ್ನ ಮಾತನ್ನು ಕೇಳಿ ಸ್ವಾಮಿ. ಅವರು statement ಮಾಡಿದ ತಕ್ಷಣ ನೀವು ಈ ಪ್ರಶ್ನೆಯನ್ನು ಎತ್ತಿದ್ದರೆ, I would have agreed. ಈಗ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಿ, ಸಲಹೆಗಳನ್ನು ಕೊಟ್ಟು, ಉತ್ತರ ಕೊಡಿ ಎಂದಾಗ ನೀವು rules ಹೇಳುತ್ತಿದ್ದೀರಿ? ಇದು ಸರಿಯೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ಹೌದು. ಅವರು ಹೇಳುವವರೆಗೂ ನಾವು ಕೇಳಿರಲಿಲ್ಲ. ದಯಮಾಡಿ ನಮಗೆ ಹೇಳುವುದಕ್ಕೆ ಅವಕಾಶ ಕೊಡಿ. ನಿಮ್ಮ Law Ministerರವರೇ rules quote ಮಾಡಿದ್ದು, ನಾವಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಬುದ್ಧಿವಂತರಿರಬಹುದು. ಆದರೆ ನಿಮ್ಮ ಬುದ್ಧಿವಂತಿಕೆಯನ್ನು ಈ ಸಭೆಯನ್ನು ಹಾಳು ಮಾಡುವುದಕ್ಕೆ ದಯಮಾಡಿ ಉಪಯೋಗಿಸಬೇಡಿ.

(ಗೊಂದಲ)

SRI J.C.MADHUSWAMY: Rules can not be mis-quoted. How can he mis-quote a rule?

(ಗೊಂದಲ)

ಅಧ್ಯಕ್ಷರು: ನಮಗೂ ನೋಡಿ ನೋಡಿ ಸಾಕಾಗಿ ಹೋಗಿದೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಅವರು permission ಕೊಡುತ್ತಾರೆ. ಯಾವುದು apply ಆಗುವುದಿಲ್ಲವೆನ್ನುವುದು ತಾವು ಹೇಳಿ. How it is not applicable ಎಂಬುದನ್ನು ತಾವು ಹೇಳಿ. You ask your friends and enlighten this House. ನಿಮ್ಮಲ್ಲೇ ಎಲ್ಲರೂ ಮಾತನಾಡಿದರೆ ತಪ್ಪಾಗುತ್ತದೆ. How it is not applicable ಎಂಬುದನ್ನು ತಾವು ಹೇಳಿ. We are here to correct. We are here to learn. ತಾವು ಮಾತನಾಡಿ. ಅದರಲ್ಲೇನಿದೆ. ಯಾರೇನೂ ಬೃಹಸ್ಪತಿಗಳಲ್ಲ.

ಅಧ್ಯಕ್ಷರು: ಈಗ ನಾನು 345 ರ ಅಡಿಯಲ್ಲಿ ಅವಕಾಶ ಕೊಟ್ಟಿದ್ದೇನೆ. ಆ ಸಂದರ್ಭದಲ್ಲಿ ಅವರು ಈ ಪ್ರಶ್ನೆ ಎತ್ತಲಿಲ್ಲ. ಅವರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿದರು. ಎಲ್ಲರೂ ಭಾಗವಹಿಸಿದ ಮೇಲೆ ಇವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟಾಗ ಅನೇಕ ತಕರಾರುಗಳನ್ನು ಎತ್ತಿದರು. ಈಗ ಯಾವ ನಿಯಮಾವಳಿಯಡಿಯಲ್ಲಿ ಕೊಟ್ಟಿದ್ದೀರೆಂದು ಕೇಳುತ್ತಿದ್ದಾರೆ. ನಿಯಮಾವಳಿಯಲ್ಲಿ ದತ್ತಕವಾಗಿರತಕ್ಕಂಥ ಅಧಿಕಾರದಲ್ಲೇ ಕೊಟ್ಟಿರುವುದು. ನಾನು ಮೊದಲಿನಿಂದಲೂ ಕೆಲವರು ಇಲ್ಲಿ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದನ್ನು ಗಮನಿಸಿದ್ದೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ತಾವು ದಯಮಾಡಿ ಸ್ವಲ್ಪ ತಾಳ್ಮೆಯನ್ನು ವಹಿಸಬೇಕು.

(ಗೊಂದಲ)

ಅಧ್ಯಕ್ಷರು: ನೋಡಿ ಸ್ವಾಮಿ ನೀವು ಪಂಡಿತರೇ ಇರಬಹುದು. ಆದರೆ ಕೊನೆಯ ಪಕ್ಷ ನಿಯಮಗಳನ್ನಾದರೂ ಓದಿಕೊಂಡು ಅರ್ಥ ಮಾಡಿಕೊಳ್ಳುವಂಥ ಶಕ್ತಿಯಾದರೂ ನನಗೆ ಇದೆ. ನೀವು ನಡೆದುಕೊಳ್ಳುವ ರೀತಿ, ಈ ಪೀಠಕ್ಕೆ ತೋರಿಸುವ ಅಗೌರವ ಎಲ್ಲವನ್ನೂ ನಾನು ನೋಡಿದ್ದೇನೆ. ಯಾರೂನೂ ಎಲ್ಲಿಯೂ ಇಲ್ಲದೇ ಇರತಕ್ಕಂಥಾದ್ದು ಮಾಡಿಲ್ಲ. ಇವತ್ತು ಅಂಬೇಡ್ಕರ್‌ರವರು ರಚಿಸಿದರು ಸಂವಿಧಾನದಂತೆಯೇ ನಾವು ನಡೆದುಕೊಳ್ಳುತ್ತಿದ್ದೇವೆ.

(ಗೊಂದಲ)

ಶ್ರೀ ರಮೇಶ್ ಕುಮಾರ್: ತಾವು ಏಕೆ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದೀರಿ ಎಂದು ಗೊತ್ತಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಇದೇನು ಸ್ವಾಮಿ? ಎಲ್ಲದ್ದಕ್ಕೂ ಒಂದು ಇತಿ ಮಿತಿ ಇದೆ. ಏನೂ ಗೊತ್ತಿಲ್ಲವೆಂದು ಅಗೌರವ ಕೊಡುತ್ತಿರುವುದು, ಬಾಯಿಗೆ ಬಂದ ಹಾಗೆ

ಮಾತನಾಡುವುದು. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಮೇಶ್ ಕುಮಾರ್‌ರವರು ಏನು ಮಾತನಾಡುತ್ತಾರೆಂದು ಕೇಳೋಣ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ದಯಮಾಡಿ ಕುಳಿತುಕೊಳ್ಳಿ. ನಾವೂ ಒಂದು ಮಾತು ಹೇಳುತ್ತೇವೆ. ಅಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರೆಲ್ಲರೂ ಮಾತನಾಡುವುದನ್ನು ನಾವು ಕೇಳಿದ್ದೇವೆ. ಈಗ ನಾವು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಸಿದ್ದು ಸವದಿ: ಮೊದಲು ನೀವು ಬಡ್ಡಿ ಮನ್ನಾ ಮಾಡುವುದರ ಬಗ್ಗೆ ಪ್ರಯತ್ನ ಮಾಡಿ. ರೈತರ ಬಗ್ಗೆ ಚಿಂತನೆ ಮಾಡಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಮೇಶ್ ಕುಮಾರ್‌ರವರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು: ಸಾಲ ಮನ್ನಾದ ಹೆಚ್ಚುವರಿ ಹಣದ ಬಗ್ಗೆ ನಾವೆಲ್ಲರೂ ಅವರನ್ನು ಅಭಿನಂದಿಸಬೇಕಾಗಿದೆ. ರೈತರ ಸಮಸ್ಯೆಯನ್ನು ಅಷ್ಟು ಶೀಘ್ರವಾಗಿ ಪರಿಹಾರ ಮಾಡಿದ್ದಾರೆ. ಏಕೆಂದರೆ, ಬಜೆಟ್ ಮಂಡನೆ ಮಾಡಿದಂಥ ದಿವಸದಿಂದ ಮಾನ್ಯ ಯಡಿಯೂರಪ್ಪನವರ ಮೇಲೆ ರೈತರ ಒತ್ತಡ ಎಷ್ಟು ಇತ್ತು ಎಂಬುದು ನಮಗೆ ಗೊತ್ತಿದೆ. ಪ್ರತಿನಿತ್ಯ ಸಾವಿರಾರು ರೈತರು ಅವರ ಮನೆಯ ಬಾಗಿಲಿಗೆ ಹೋಗುತ್ತಿದ್ದರು. ನೀವು ಮಾಡುತ್ತಿರುವಂಥ 25 ಸಾವಿರ ರೂಪಾಯಿಯಿಂದ 50 ಸಾವಿರ ರೂಪಾಯಿಗೆ ಏರಿಸಿ ನಮಗೆ ಪರಿಹಾರವನ್ನು ಕೊಡಿ ಎನ್ನತಕ್ಕಂಥ ಒತ್ತಡ. ರೈತರ ಸಮಸ್ಯೆಯನ್ನು ಅರಿತುಕೊಂಡಂಥ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರನ್ನು ನಾವು ಅಭಿನಂದಿಸುವುದನ್ನು ಬಿಟ್ಟು ಕಾನೂನು, ಸಂವಿಧಾನ, ಸರಿಯಿಲ್ಲ, ಈ ರೀತಿಯ ಅಪಸ್ವರದ ಭಾವನೆಗಳನ್ನು ಇಲ್ಲಿ ಏಕೆ ಇವರು ವ್ಯಕ್ತ ಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ನಾವು ಮಾನ್ಯ ಮುಖ್ಯಮಂತ್ರಿಗಳು ಮತ್ತು ಯಡಿಯೂರಪ್ಪನವರನ್ನು ಅಭಿನಂದಿಸಬೇಕಾಗಿದೆ. ಚರ್ಚೆಯಾಗುವುದಕ್ಕೆ ಮುಂಚಿತವಾಗಿ ರೈತರ ಸಮಸ್ಯೆಗೆ ಸ್ಪಂದಿಸಿದ್ದಾರೆ. ಅವರನ್ನು ನೀವು ಒಕ್ಕೊರಲಿಂದ ಅಭಿನಂದಿಸಿ. ನಿಮ್ಮ ಸರ್ಕಾರ ಇದ್ದಾಗ ನೀವು ಮಾಡಿರತಕ್ಕಂಥ ಸಾಧನೆಗಳನ್ನು ನೀವು ನೆನಪಿಸಿಕೊಳ್ಳಿ. ಅದಕ್ಕಿಂತ ಮಹತ್ತರವಾದಂಥ ಸಾಧನೆ ಇವತ್ತು ಆಗಿದೆ. ಇತಿಹಾಸವನ್ನು ಸೃಷ್ಟಿಸಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ರೈತರ ಪರವಾಗಿ ಮುಡಿಪಾಗಿಟ್ಟಿದ್ದಾರೆ. ಅದನ್ನು ಶ್ಲಾಘನೆ ಮಾಡುವುದನ್ನು ಬಿಟ್ಟು, ಕಾನೂನು ಸಮರದ

ವ್ಯವಸ್ಥೆಯಲ್ಲಿ ಇದನ್ನು ಹೋರಾಟಕ್ಕೆ ತೆಗೆದುಕೊಳ್ಳುತ್ತಿದ್ದೀರಲ್ಲ, ಇದು ನ್ಯಾಯವೇ? ಇದರ ಬಗ್ಗೆ ನೀವು ಆತ್ಮವಿಮರ್ಶೆ ಮಾಡಿಕೊಳ್ಳಿ. ಪ್ರಾಮಾಣಿಕವಾಗಿ ಹೇಳಿ. ಯಡಿಯೂರಪ್ಪನವರು ಮಾಡುತ್ತಿರುವಂಥ ಕೆಲಸ ಒಳ್ಳೆಯ ಕೆಲಸ.

(ಗೊಂದಲ)

ಅಧ್ಯಕ್ಷರು: ಅವರು ಅವರ ಭಾವನೆಗಳನ್ನು ಹೇಳುತ್ತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್: ಇವತ್ತು ಸಮ್ಮಿಶ್ರ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ. ವಿರೋಧ ಪಕ್ಷದವರು ಹೇಳಿದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಇವತ್ತೇನು ಹಣಕಾಸು ಸಚಿವರು ಮಂಡನೆ ಮಾಡಿದ್ದಾರೆ ಅದನ್ನು ತಾವು ಸ್ವಾಗತ ಮಾಡಬೇಕು. ಸರ್ಕಾರಕ್ಕೆ ಅಭಿನಂದನೆ ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು statement ಮಾಡುತ್ತೇನೆಂದು ತಮ್ಮ ಅನುಮತಿಯನ್ನು ಪಡೆದು statement ಮಾಡಿದ್ದೇನೆ. Statement ಮಾಡಿದ ನಂತರ ಸುಮಾರು ಒಂದು ಗಂಟೆಯ ಕಾಲ ಗೌರವಾನ್ವಿತ ವಿರೋಧ ಪಕ್ಷದ ಎಲ್ಲಾ ನಾಯಕರೂ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಯಾವ ಪರಿಸ್ಥಿತಿಯಲ್ಲಿದ್ದೇನೆ, 1950 ಕೋಟಿ ರೂಪಾಯಿಗಳ concession ಕೊಟ್ಟಿದ್ದೇನೆ. ನನ್ನ ಹಣಕಾಸಿನ ಇತಿ ಮಿತಿಯಲ್ಲಿ ಇದನ್ನು ಮಾಡಿದ್ದೇನೆ. ಇಲ್ಲಿ ಈ ಚರ್ಚೆ ಮಾಡುವುದರ ಬದಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಸಾಲ ಮನ್ನಾ ಆಗಬೇಕು, ಬಡ್ಡಿ ಮನ್ನಾ ಆಗಬೇಕು ಎಂದು ಅಲ್ಲಿ ಸತ್ಯಾಗ್ರಹವನ್ನು, ಹೋರಾಟವನ್ನು ಅಥವಾ ತಾವೆಲ್ಲರೂ ಒಪ್ಪಿಗೆ ಕೊಟ್ಟರೆ ಇಲ್ಲಿ ಸರ್ವಾನುಮತದ ನಿರ್ಣಯ ಮಾಡಿ ಇಂಥ ಭೀಕರ ಬರಗಾಲವಿರುವಂಥ ಕಾಲದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಸಹ ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ ಆಗಬೇಕೆಂದು ಒಂದು ನಿರ್ಣಯ ಮಾಡುವಂಥ ಸಂದರ್ಭ ಇದು. ಇಂಥ ಸಂದರ್ಭದಲ್ಲಿ ನಾನು statement ಮಾಡುವಾಗ, ಮನೆ ಮನೆಗಳಲ್ಲಿ ಇವತ್ತು ಆಯವ್ಯಯದ ಬಗ್ಗೆ ಚರ್ಚೆಯಾಗುತ್ತಿದೆ. ನಮಗೆ ಇರುವ ಅನುಮಾನವೇನೆಂದರೆ ಕಳೆದ ಬಜೆಟ್ ಮೇಲೆ ಚರ್ಚೆಯಾಗಲಿಲ್ಲ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಲಿಲ್ಲ, ಈ ಬಾರಿಯೂ ಕೂಡ ಆಯವ್ಯಯದ ಮೇಲೆ ಚರ್ಚೆಯಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ನನಗೆ ಇದೆ. ಅದಕ್ಕಾಗಿ ರೈತರ ಅನುಕೂಲಕ್ಕಾಗಿ ಈಗ ನಾನು announce ಮಾಡಿದರೆ ನಿಮಗೆ ಏನು ತೊಂದರೆಯಾಗಿದೆ?

ಶ್ರೀ ಎನ್.ಧರ್ಮಸಿಂಗ್: ಮನೆಮನೆಯಲ್ಲಿ ಬಜೆಟ್ ಬಗ್ಗೆ ಚರ್ಚೆಯಾಗುತ್ತಿದೆ ಎಂದು ಹೇಳುವುದು ನಿಮ್ಮ ಭ್ರಮೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಜೊತೆ ಬನ್ನಿ. ನಿಮಗೆ ಸಿಟ್ಟು ಏಕೆ ಬರುತ್ತದೆ?

ಶ್ರೀ ಎನ್.ಧರ್ಮಸಿಂಗ್: ನಿಮ್ಮ ಮಿತ್ರ ಪಕ್ಷದವರೇ ಹೇಳುತ್ತಿದ್ದಾರಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇಷ್ಟು ವರ್ಷ ನೀವು ಅಧಿಕಾರ ನಡೆಸಿರುವುದು... ನೀವು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಮನೆ ಮನೆಯಲ್ಲಿ ಚರ್ಚೆಯಾಗುತ್ತಿರುವ ಬಗ್ಗೆಯೂ ಹೇಳಿ.

ಶ್ರೀ ಎನ್.ಧರ್ಮಸಿಂಗ್: ಜ್ಞಾನೇಂದ್ರರವರೇ, ಒಂದು ನಿಮಿಷ, ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾದ ಮೇಲೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳಿ. ತಾವು rules ಪ್ರಕಾರ ನಮಗೆ ಅವಕಾಶ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಸಾಮಾನ್ಯವಾಗಿ ಸದನದಲ್ಲಿ ಬಜೆಟ್ ಮಂಡನೆಯಾದ ಮೇಲೆ ಅದೇ ವಿಚಾರವಾಗಿ ಪ್ರಸ್ತಾಪ ಮಾಡತಕ್ಕಂಥ ಅವಕಾಶ ಆಗಬಾರದು. ಚರ್ಚೆ ಆಗಬಾರದು. ಇದು ಸರಿಯಲ್ಲ. ನೀವು ಬಜೆಟ್ ಚರ್ಚೆಯ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ. ಈಗೇಕೆ ಹೇಳುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇಲ್ಲಿರತಕ್ಕಂಥ ಮಾನ್ಯ ವಿರೋಧಪಕ್ಷದ ನಾಯಕರು ಹಿಂದೆ ಮುಖ್ಯಮಂತ್ರಿಗಳಾಗಿದ್ದರು ಮತ್ತು ಅವರು ಸಾಕಷ್ಟು ಅನುಭವವನ್ನು ಸಹ ಹೊಂದಿದ್ದಾರೆ. ಮತ್ತೆ ಇಲ್ಲಿ ಸ್ಪೀಕರ್ ಆಗಿದ್ದಂಥ ಮಾನ್ಯ ರಮೇಶ್‌ಕುಮಾರ್‌ರವರು ಸಹ ಅಲ್ಲಿ ಕುಳಿತುಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುವುದೇನೆಂದರೆ, 31.03.2007ರೊಳಗಾಗಿ ಅವರು ರೀ-ಪೇಮೆಂಟ್ ಮಾಡಬಹುದಾಗಿದೆ. ಆದರೆ, ಈ ಅವಧಿ ಕೇವಲ ಇನ್ನು 7-8 ದಿವಸಳು ಇರುವುದರಿಂದ 50 ಸಾವಿರ ರೂಪಾಯಿ ಗಳವರೆಗೆ ಸಾಲ ಇರತಕ್ಕಂಥವರು ಮೊದಲು 25 ಸಾವಿರ ರೂಪಾಯಿ ಕಟ್ಟಿರೆ ಬಾಕಿ ಇರತಕ್ಕಂಥ 25 ಸಾವಿರ ರೂಪಾಯಿಗಳಿಗೆ ಅಸಲು ಕೊಟ್ಟಿದರೆ, ಬಡ್ಡಿ ಹಣವನ್ನು ಮನ್ನಾ ಮಾಡುತ್ತೇವೆಂಬ ಮೆಸೇಜ್ ಆದಷ್ಟು ಬೇಗ ಅವರಿಗೆ ತಲುಪಿದರೆ ಅವರು ಬೇಗ ಹಣವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆಂಬ ಕಾರಣದಿಂದ ನಿಮ್ಮ

ಅನುಮತಿಯನ್ನು ಪಡೆದು ನಾನು ಇಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇದಕ್ಕೆ ಕ್ಲಾರಿಫಿಕೇಷನ್‌ನ್ನು ಗಂಟೆಗಟ್ಟಲೆ ಕೇಳಿದರು. ನನ್ನ ಹಣಕಾಸಿನ ಇತಿಮಿತಿಯಲ್ಲಿ ಇದಕ್ಕಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇನೆ. ಮತ್ತೆ ಇವತ್ತಿನ ದಿವಸ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಅನುಕೂಲವಾಗುತ್ತಿದೆ ಎಂಬ ಮಾತನ್ನು ನಾನು ಹೇಳಿದ್ದೇನೆ. ಇದರ ಬಗ್ಗೆ ಚರ್ಚೆ ಕೂಡ ಆಯಿತು. ಕಾನೂನಿನ ಚೌಕಟ್ಟಿನಲ್ಲಿ ಇದಕ್ಕೆ ಅವಕಾಶವಿಲ್ಲ, ನಿಯಮಾವಳಿಯಲ್ಲಿ ಅವಕಾಶವಿಲ್ಲವೆಂದು ಈಗ ಹೇಳಿದರೆ ಹೇಗೆ? ನಾನು ಸ್ಟೇಟ್‌ಮೆಂಟ್ ಮಾಡಿದ ತಕ್ಷಣ ಈ ನಿಯಮಾವಳಿ ಪ್ರಕಾರ ಅವಕಾಶ ಇಲ್ಲವೆಂದು ಹೇಳಿದ್ದರೆ ನಿಮ್ಮ ರೂಲಿಂಗ್‌ಗೆ ನಾನು ಕಾಯುತ್ತಿದ್ದೆ. ಆದರೆ, ಈಗ ಸ್ಟೇಟ್‌ಮೆಂಟ್ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟು ಇದರ ಬಗ್ಗೆ ಎಲ್ಲವೂ ಚರ್ಚೆಯಾದ ಮೇಲೆ, ಈ ರಾಜ್ಯದ ರೈತರಿಗೆ ಇಂಥ ನೆರವು ಸಿಗುತ್ತದೆ ಎಂದು ಸಂತೋಷಪಟ್ಟು ಅಭಿನಂದನೆ ಸಲ್ಲಿಸುವುದನ್ನು ಬಿಟ್ಟು ಏನೋ ಅನುಕೂಲ ಆಗಿಹೋಯಿತಲ್ಲಾ ಎಂದು ತಾವು ಸಂಕಟ ಪಟ್ಟುಕೊಂಡು ಬೇರೆ ರೀತಿಯಲ್ಲಿ ಮಾತನಾಡಿದರೆ ಹೇಗೆ? ನೀವೇನು ಮಾಡಿದ್ದೀರೆಂಬುದನ್ನು ಹೇಳಿ? ಹಿಂದೆ ಭೀಕರವಾದಂಥ ಬರಗಾಲ ಇತ್ತು. ಆಗ ಸಾಲ ಮನ್ನಾ ಮಾಡಿದ್ದೀರಾ? ಇವತ್ತಿನ ದಿವಸ 1960 ಕೋಟಿ ರೂಪಾಯಿಗಳ ಸಾಲವನ್ನು ನಾನು ಮನ್ನಾ ಮಾಡಿದ್ದೇನೆ.

ಶ್ರೀ ಎನ್.ಧರ್ಮಸಿಂಗ್:– 241 ಕೋಟಿ ಪಿ.ಎಲ್.ಡಿ.ಬ್ಯಾಂಕ್‌ನ ಹಣ ಇದೆ. ಮತ್ತೆ ನೀವು ಬರಗಾಲವನ್ನು ಎಲ್ಲಿ ನಿವಾರಣೆ ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ:– 6% ಇದ್ದಂಥ ಬಡ್ಡಿಯನ್ನು 4%ಗೆ ಮಾಡಿದ್ದೇವೆ. ಇದನ್ನು ಈ ದೇಶದಲ್ಲಿಯೇ ಮೊದಲ ಬಾರಿಗೆ ನಮ್ಮ ಸಮಿಶ್ರ ಸರ್ಕಾರ ಮಾಡಿದೆ. ಈ ದೇಶದಲ್ಲಿ ಯಾರೂ ಕೂಡ 4%ಬಡ್ಡಿಗೆ ಸಾಲವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– 11% ಇದ್ದಂಥದನ್ನು 6%ಗೆ ಇಳಿಸಿರತಕ್ಕಂಥದು ದೊಡ್ಡದೆ ಅಥವಾ 6% ಇದ್ದಂಥದನ್ನು 4% ಇಳಿಸಿರತಕ್ಕಂಥದು ಹೆಚ್ಚೇ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ರಾಜ್ಯದಲ್ಲಿ ಬರಗಾಲ ಇದೆ. ಆದ್ದರಿಂದ ರೈತರ ಸಾಲ ಮನ್ನಾ ಮಾಡಬೇಕು. ಆದ್ದರಿಂದ ಕೇಂದ್ರಕ್ಕೆ ನಿಯೋಗ ಹೋಗೋಣವೆಂದು ಹೇಳಿದಾಗ ಒಪ್ಪದೆ ಇರತಕ್ಕಂಥವರು ನೀವು. ಇವತ್ತಿನ ದಿವಸ ಕೇಂದ್ರ ಸರ್ಕಾರದಿಂದ ಯಾವುದೇ ನೆರವು ಬಂದಿಲ್ಲ. ಮತ್ತೆ ಬರಗಾಲಕ್ಕೂ ಸಹ ನೆರವು ಬಂದಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಯಡಿಯೂರಪ್ಪನವರೆ. ಕೇಂದ್ರ ಸರ್ಕಾರ ಕೊಟ್ಟಿರಕ್ಕಂಥ ಹಣವನ್ನು ನೀವು ಇನ್ನೂ ಖರ್ಚು ಮಾಡಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾವು ರೈತರಿಗೆ ಮಾಡಿಕೊಟ್ಟಿರುವ ಸವಲತ್ತಿನ ಬಗ್ಗೆ ಸ್ವಾಗತ ಮಾಡದೆ, ಅದರ ಬದಲು ಏನು ಬೇಕಾದರೂ ಮಾತನಾಡಿದರೆ ಹೇಗೆ? ನಿಮಗೆ ಇದನ್ನು ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಸಂಕಟ ಪಟ್ಟುಕೊಂಡು ಮಾತನಾಡುತ್ತಿದ್ದೀರಿ.

ಅಧ್ಯಕ್ಷರು:– ಮಾನ್ಯ ಖರ್ಗೆಯವರೆ, ತಾವೆಲ್ಲರೂ ಇದರ ಬಗ್ಗೆ ತಮ್ಮಗಳ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ನಾನು ರೆಕಾರ್ಡ್ ಸ್ಟ್ರೈಟ್ ಆಗಿರಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಬೇರೇನೂ ಇಲ್ಲ. ಅವರು ಹೇಳಿರತಕ್ಕಂಥಾದ್ದಕ್ಕೆ ನಾವು ತಪ್ಪಾಗಿ ಹೇಳಬೇಕೆಂದು ಅಥವಾ ನಮ್ಮದೇ ಆದಂಥ ವಿಷಯಗಳನ್ನು ಹೇಳಬೇಕೆಂದೇನೂ ಇಲ್ಲ. ರೆಕಾರ್ಡ್ ಸ್ಟ್ರೈಟ್ ಆಗಿರಬೇಕಷ್ಟೆ.

ಶ್ರೀ ಹೆಚ್.ಡಿ.ಬಸವರಾಜು:– ಮಾನ್ಯ ಅಧ್ಯಕ್ಷರೇ, ಇವರ ಉದ್ದೇಶ ನಮಗೆ ಅರ್ಥವಾಗುತ್ತಿಲ್ಲ. ರೈತರಿಗೆ ಇದು ಸಿಗಬೇಕೆಂಬ ಉದ್ದೇಶ ಇದೆಯೇ ಅಥವಾ ಬೇಡವೆಂದು ಇದೆಯೇ ಎಂಬುದನ್ನು ಹೇಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:– ಈ ದೇಶದಲ್ಲಿ 11% ಬಡ್ಡಿ ಇದ್ದಾಗ ಅದನ್ನು 6%ಗೆ ಮಾಡಿದ್ದೇವೆ. ಆದರೆ, ನೀವೇನು ಮಾಡಿದ್ದೀರಿ, ಕೇಂದ್ರದಲ್ಲಿ 6% ಇದ್ದಾಗ ನೀವು 4%ಗೆ ತಂದಿರಿ. ಆದ್ದರಿಂದ ಯಾವುದು ಹೆಚ್ಚು? ಯಾರನ್ನು ಮೆಚ್ಚುಸುವುದಕ್ಕೆ ಮಾಡಿದ್ದೀರಿ? ನೀವು ಸುಮ್ಮನೆ ಜಂಬಕೊಚ್ಚಿಕೊಳ್ಳಬೇಡಿ. ಹಿಂದಿನದಕ್ಕೆ ಕಂಪೇರ್ ಮಾಡಿ. ಅದನ್ನು ಬಿಟ್ಟು ಪ್ರತಿಯೊಂದಕ್ಕೂ ನೀವೇನು ಮಾಡಿದ್ದೀರಿ ಎಂದು ಹೇಳುತ್ತಿದ್ದೀರಷ್ಟೆ. 11% ಇದ್ದಾಗ 6% ಮಾಡಿದ್ದೆವು ಮತ್ತೆ 6% ಇದ್ದಾಗ 4% ಮಾಡಿ ಸರಾಸರಿ ತೋರಿಸಿದ್ದೀರಿ. ಮತ್ತೆ ಕೇಂದ್ರ ಸರ್ಕಾರದಿಂದ ಏನೂ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಹಣದಲ್ಲಿ ಅರ್ಧದಷ್ಟೂ ಖರ್ಚು ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಒಂದು ಸಲ ಅಲ್ಲ ನೂರು ಸಲ ನಾನು ಒಬ್ಬನೇ ಹೇಳುವುದಲ್ಲ, ಇವತ್ತಿನ ದಿವಸ ರೈತರು ಮತ್ತು ಪ್ಲಾನಿಂಗ್ ಕಮಿಷನ್ ಮೆಂಬರ್ ಆಗಿರುವ ಜೈನ್‌ರವರೂ ಸಹ ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ಜೈನ್‌ರವರ ಹತ್ತಿರ ಹೋಗೋಣ ಬನ್ನಿ. ನೀವು 6% ಬಡ್ಡಿ ಮನ್ನಾ ಮಾಡಿದಂಥ ಹಣವನ್ನು ನನ್ನ ಸರ್ಕಾರ ತುಂಬಿಕೊಟ್ಟಿದೆ. 6% ಬಡ್ಡಿ ಮನ್ನಾ ಮಾಡಿದಾಗ ಕೊಡಬೇಕಾಗಿರತಕ್ಕಂಥ ಹಣವನ್ನು ನಾನು ಹಣಕಾಸಿನ ಸಚಿವನಾದ ಮೇಲೆ ತುಂಬಿದ್ದೇವೆ. ಈ ಹಣವನ್ನು ಆಗ ನೀವು ತುಂಬಲಿಲ್ಲ. ಬೇಕಾದರೆ, ಅಂಕಿ–ಅಂಶಗಳನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ ನನ್ನ ಮಾತನ್ನು ಕೇಳಿ. ನಿಮ್ಮ ನಿಮ್ಮ ರಾಜಕೀಯ ಪಕ್ಷದ ಹೆಗ್ಗಳಿಕೆಯನ್ನು ತೋರಿಸುವುದಕ್ಕೆ ನಮ್ಮ ಸಮಯ ಹಾಳಾಗುವುದು ಬೇಡ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್:- ಹೆಗ್ಗಳಿಕೆ ಎಂಬ ಮಾತನ್ನು ಅವರು ಒಪ್ಪಬೇಕಾಗುತ್ತದೆ. ಏಕೆಂದರೆ, ಸಾರಾಯಿ ಮತ್ತು ಲಾಟರಿ ನಿಷೇಧ ಮಾಡಿದ್ದೇವೆ. ಅದೆಲ್ಲದರ ಜೊತೆಗೆ ಈಗ ರೈತರ ಸಾಲವನ್ನೂ ಕೂಡ ಮನ್ನಾ ಮಾಡುತ್ತಿದ್ದೇವೆ. ಇದು ನಮ್ಮ ಸರ್ಕಾರದ ಹೆಗ್ಗಳಿಕೆ ವಿಚಾರವಲ್ಲವೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೇಂದ್ರ ಸರ್ಕಾರದಿಂದ ಬಂದಂಥ 869 ಕೋಟಿ ರೂಪಾಯಿಯ ಪ್ಯಾಕೇಜ್‌ನ ಹಣಕ್ಕೆ ಸಂಬಂಧಪಟ್ಟಂತೆ ಏನೇನು ಕೆಲಸ ಮಾಡಬೇಕೆಂದು ಇತ್ತು ಅದನ್ನು ಮಾಡಿದ್ದೀರಾ? ಮತ್ತು ಡೆಲ್ಲಿಗೆ ಹೋಗಿ ದುಡ್ಡು ತಂದಿದ್ದೀರಾ? ಆರು ತಿಂಗಳೊಳಗೆ ಅಲ್ಲಿಂದ ಹಣ ತಂದು ಖರ್ಚು ಮಾಡಿದ್ದೀರಾ? ಅದು ರೈತರಿಗೆ ಸಿಗುತ್ತಿರಲಿಲ್ಲವೇ? ಅದೇ ರೀತಿಯಾಗಿ ಸ್ಕೇರ್‌ಸಿಟಿ ಅಥವಾ ಫುಡ್‌ಗ್ರೈನ್ಸ್ ಮತ್ತು ಇತರೆಗೆ ಎಷ್ಟು ಹಣ ತಂದು ಇಲ್ಲಿ ಖರ್ಚು ಮಾಡಿದ್ದೀರಿ? ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಸಭೆಗಳನ್ನು ಮಾಡಿದ್ದೀರಿ? ಕುಡಿಯುವ ನೀರಿಗಾಗಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಜೋರು ಬಾಯಿ ಇದೆ ಎಂದು ಹೇಳಿದರೆ ಆಗುತ್ತದೆಯೇ? ಈಗ ಸ್ಟೇಟ್‌ಮೆಂಟ್ ಮಾಡುತ್ತೀರಿ. ಇದರ ಬಗ್ಗೆ ಸುಮ್ಮನೆ ವಾದವಿವಾದ ಮಾಡುವುದಿಲ್ಲ. These are the facts. No body can deny simply because he is shouting. ಹೋದ ವರ್ಷ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಣಕಾಸಿನ ಸಚಿವರಾಗಿದ್ದಂಥ ಮಾನ್ಯ ಸಿದ್ದರಾಮಯ್ಯನವರು 1200 ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡಲಿಲ್ಲವೇ? ಆದರೆ, ನೀವು ಈಗ ಸಾಲದ ಹಣವನ್ನೆಲ್ಲಾ ಹಿಡಿದುಕೊಂಡು 1900 ಕೋಟಿ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಆ ಸಾಲದ ಮೇಲಿನ ಬಡ್ಡಿ ಹಣವನ್ನು ಹಣಕಾಸಿನ ಸಚಿವನಾದ ಮೇಲೆ ನಾನು ಕೊಟ್ಟಿದ್ದೇನೆ. ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆ ಹಣವನ್ನು ಕೊಟ್ಟಿಲ್ಲ. ಬಡ್ಡಿ ಮನ್ನಾ ಮಾಡಿದ್ದೇವೆಂದು ತಾವು ಕೇವಲ ಪ್ರಚಾರ ತೆಗೆದುಕೊಂಡು ನೀವು ಹೋದರಿ ಅಷ್ಟೆ. ಆ ಹಣವನ್ನು ನಾವು ತುಂಬಿದ್ದೇವೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ರೈತರ ಬಗ್ಗೆ ಇಷ್ಟೆಲ್ಲಾ ಬಾಯಿ ಬಡಿದುಕೊಳ್ಳತಕ್ಕಂಥ ಇವರು 4,100 ಕೋಟಿ ರೂಪಾಯಿ ಇರಿಗೇಷನ್‌ಗೆ ಇದ್ದಂಥದನ್ನು 3000 ಕೋಟಿ ರೂಪಾಯಿಗೆ ಇವರು ತಂದಿಟ್ಟಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀರಾವರಿಗೋಸ್ಕರ ಎಷ್ಟು ಕೊಟ್ಟಿದ್ದೇನೆಂಬುದರ ಬಗ್ಗೆ ನಾನು ಅಂಕಿ-ಅಂಶ ಕೊಡುತ್ತೇನೆ. ನೀರಾವರಿಗೆ ನಾನೇನಾದರೂ ಕಡಿಮೆ ಕೊಟ್ಟಿರತಕ್ಕಂಥಾದನ್ನು ಇವರು ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಬಜೆಟ್ ಮೇಲೆ ಸದರಿ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇದೆ. ಆ ಸಮಯದಲ್ಲಿ ಈ ಎಲ್ಲಾ ವಿಷಯಗಳನ್ನು ಮಾತನಾಡಿ. ಈಗ ಅವರು ಏನೊಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ. ನಾನು ಹೇಳತಕ್ಕಂಥ ಮಾತನ್ನು ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀರಾವರಿಗೆ ಹೋದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಕೊಟ್ಟಿದ್ದೇನೆ. ಆದ್ದರಿಂದ ಕಡಿಮೆ ಕೊಟ್ಟಿದ್ದೇವೆಂದು ಇವರು ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅವರು ರಾಜೀನಾಮೆ ಕೊಡುವುದು ಬೇಡ. ಅವರ್ಯಾರೂ ರಾಜೀನಾಮೆ ಕೊಡತಕ್ಕಂಥ ಅಗತ್ಯತೆ ಇಲ್ಲ. ಮಾನ್ಯ ಖರ್ಗೆಯವರು ಬಜೆಟ್ ಪುಸ್ತಕವನ್ನು ನೋಡಿಕೊಂಡು ಹೇಳಿದ್ದಾರೆಯೇ ಹೊರತು ಬೇರೆ ಅಂಕಿ-ಅಂಶಗಳನ್ನು ಹೇಳಿಲ್ಲ. ರಾಜೀನಾಮೆ ಕೊಟ್ಟು ಹೋಗುತ್ತೇವೆಂದು ನೀವು ಹೇಳುತ್ತಿದ್ದೀರಿ. ಆದರೆ, ಅವರೇನು ಬೇರೆ ಸ್ಟೇಟ್‌ಮೆಂಟ್ ಮಾಡಿದ್ದಾರೆಯೇ? ಬಜೆಟ್ ಬಗ್ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಇದಕ್ಕೆ ಎಲ್ಲಿ ಹಣ ಇಟ್ಟಿದ್ದೇನೆಂದು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಹೇಳುತ್ತೇನೆ. ತಾವು ಪ್ರೂವ್ ಮಾಡಿ.

ಶ್ರೀ ಸಿದ್ದರಾಮಯ್ಯ:- ಪ್ಲಾನ್‌ನಲ್ಲಿ ಎಲ್ಲಿಲ್ಲಿಗೆ ಎಷ್ಟೆಷ್ಟು ಪರ್ಸೆಂಟ್ ಹಣವನ್ನು ಇಟ್ಟಿದ್ದೇವೆಂಬುದನ್ನು ಈ ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಿದ್ದರಾಮಯ್ಯನವರೆ, ಬಜೆಟ್ ಮೇಲೆ ಮಾತನಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ತಾವು ದಯಮಾಡಿ ಕೇಳಿ, ಅವರು ಈಗ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಸ್ಟೇಟ್‌ಮೆಂಟ್ ಮಾಡುವುದಕ್ಕೆ ಈಗ ಅವಕಾಶ ಇಲ್ಲ. There is no provision to make a statement in respect of budget.

ಅಧ್ಯಕ್ಷರು:- ನಾನು ಹೇಳುವುದನ್ನು ಸ್ವಲ್ಪ ಕೇಳಿ. ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ನೀಡಲಾಗಿದೆ. ಇದಾದ ಮೇಲೆ ನೀವೆಲ್ಲರೂ ಆ ವಿಷಯದ ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಅದಕ್ಕೆ ಅವರು ರಿಪ್ಲೈ ಕೊಡುತ್ತಿದ್ದರು, ಆಗ ಇದದನ್ನು ತಾವು ಪ್ರಾರಂಭ ಮಾಡಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಚಾಪ್ಟರ್ 23 ಅನ್ನು ನಾನು ಓದಿದ್ದೇನೆ. ಇದರಲ್ಲಿ ಎಲ್ಲಿ ಇದೇ ಎಂಬುದನ್ನು ತೋರಿಸಿ? Cut motions, demands and appropriation bills ಬರುವುದು ಯಾವಾಗ? ಮತ್ತೆ ಇವೆಲ್ಲಕ್ಕೂ ಉತ್ತರ ಕೊಡುವುದು ಯಾವಾಗ? ಇದಕ್ಕೆಲ್ಲಾ ಚರ್ಚೆಯಾದ ಮೇಲೆ ಉತ್ತರ ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ತಾವು ಮತ್ತು ಮಾನ್ಯ ಮಾಧುಸ್ವಾಮಿಯವರು.. 345 ಕೆಳಗಡೆ..

(ಗೊಂದಲ)

ಶ್ರೀ ಕೆ.ಆರ್.ರಮೇಶ್‌ಕುಮಾರ್:- 345 ಕೆಳಗಡೆ ಎಂದು ತಾವು ಹೇಳಿದ್ದೀರಿ. ತಾವು ದಯಮಾಡಿ ಕೇಳಿ. ಈಗ ಉದಾಹರಣೆಗೆ ಹೇಳುವುದೇನೆಂದರೆ, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇರುತ್ತಾರೆ. ಎಲ್ಲೋ ಒಂದು ಕಡೆ ಒಂದು ಬಸ್ ತೀವ್ರ ಅಪಘಾತಕ್ಕೆ ಒಳಗಾಗಿರುತ್ತದೆ. ಇದು ಬಹಳ ಗಂಭೀರವಾದಂಥ ವಿಚಾರವಾಗಿರುತ್ತದೆ. ಅಥವಾ ಎಲ್ಲಿಯೊ ಒಂದು ಕಡೆ ಫೈರ್ ಆಕ್ಸಿಡೆಂಟ್ ಆಗಿರುತ್ತದೆ ಅಥವಾ ಇನ್ಯಾವುದೋ ಒಂದು ವಿಚಾರವಿರುತ್ತದೆ ಅಥವಾ ಎಲ್ಲಿಯೊ ಒಂದು ಕಡೆ ಕಾಲರಾ epidemics ಆಗಿ ಡೆತ್ ಆಗಿರುತ್ತದೆ. ಅದರ ಬಗ್ಗೆ ಹೌಸ್‌ನಲ್ಲಿ ಸ್ಟೇಟ್‌ಮೆಂಟ್ ಅನ್ನು ಕೇಳಿರುತ್ತೀರಿ. ಅಂಥ ಸಂದರ್ಭದಲ್ಲಿ ಮಂತ್ರಿಗಳು ಇರತಕ್ಕಂಥ ಕಾರ್ಯಕ್ರಮವನ್ನು ಬಿಟ್ಟು 345ರ ಕೆಳಗೆ ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಸ್ಟೇಟ್‌ಮೆಂಟ್ ಮಾಡುತ್ತಾರೆ. Budget is an annual event which is the privilege conferred on the Finance Minister. ಅವರು ಬಜೆಟ್ ಸ್ಪೀಚ್ ಓದುತ್ತಾರೆ. He leaves the entire House, the freedom of participating in the discussion. ನಾನು

ಆಗಿನಿಂದಲೂ ಅದನ್ನೆ ಹೇಳುತ್ತಿದ್ದೇನೆ. ಇದಾದ ಮೇಲೆ ತಮ್ಮ ವಿವೇಚನೆಗೆ ಅನುಗುಣವಾಗಿ ಮಾನ್ಯ ಸದಸ್ಯರುಗಳು ಎಲ್ಲೆಲ್ಲಿ ಏನೇನು ಅಭಿಪ್ರಾಯಗಳನ್ನು ಹೇಳಿರುತ್ತಾರೆಯೋ ಅವೆಲ್ಲವನ್ನು ಗಣನೆಗೆ ತೆಗೆದುಕೊಂಡು ಸುಧಾರಣೆ ಮಾಡತಕ್ಕಂಥದರ ಬಗ್ಗೆ ಅನೌನ್ಸ್ ಮಾಡತಕ್ಕಂಥ ಅಧಿಕಾರ ಅವರಲ್ಲಿ ಅಂತರ್ಗತವಾಗಿರುತ್ತದೆ. ಅದನ್ನು ಕಿತ್ತುಕೊಂಡು ನಾವ್ಯಾರೂ ಮಾಡುವುದಕ್ಕೆ ಬರುವುದಿಲ್ಲ. ಒಳ್ಳೆಯ ಬಜೆಟ್ ಮಾಡಿದ್ದೀರಿ, ಕೆಲಸ ಚೆನ್ನಾಗಿ ಮಾಡಿದ್ದೀರಿ, ಇದರಿಂದ ನಮಗೆ ಕಷ್ಟವಾಗುತ್ತದೆ. ಮುಂದಕ್ಕೆ ನಾವ್ಯಾರೂ ಅಸೆಂಬ್ಲಿಗೆ ಬಾರದೆ ಇದ್ದರೂ ಚಿಂತೆ ಇಲ್ಲ. ಏಕೆಂದರೆ, ರಾಜ್ಯದ ಜನತೆಗೆ ಒಳ್ಳೆಯದಾಗುವುದಾದರೆ.. ನಾನು ಏನು ಹೇಳುತ್ತೇನೆಂದರೆ, ನಿಮ್ಮ ಕೆಲಸದ ಬಗ್ಗೆ ಜನರು ಮನೆ ಮನೆಯಲ್ಲಿ ಮಾತನಾಡಿ ಜನರು ಸಂತೋಷಪಡಲಿ. ರಾಜ್ಯದ ಬಡ ಜನತೆ ತೃಪ್ತಿಯಾದರೆ ಒಳ್ಳೆಯದು. ನಾವು ಇಲ್ಲಿ ಬರುವುದು ಮುಖ್ಯವಲ್ಲ, ಜನ ಖುಷಿಯಾಗಿರತಕ್ಕಂಥದು ನಮಗೆ ಮುಖ್ಯ. ಅದ್ದರಿಂದ ನಾವು concede ಆಗುತ್ತೇವೆ. ಮತ್ತೆ ಸಂತೋಷ ಕೂಡ ಆಗುತ್ತದೆ. ಆದರೆ, ನಾವು ಈ ಚರ್ಚೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಕೆಲವು ನೀತಿ ನಿಯಮಗಳನ್ನು ಇಟ್ಟುಕೊಂಡಿದ್ದೇವೆ. ಅದನ್ನು ಬಿಟ್ಟು ಮನಸ್ಸಿಗೆ ಬಂದಂತೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಆದರೆ, ಈಗ ನಿಯಮಾವಳಿ ಎಂದು ಈಗ ಅಡ್ಡಿಪಡಿಸುತ್ತಿದ್ದಾರೆ. ಅನಾವಶ್ಯಕವಾಗಿ ಅಂದರೆ, ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎನ್ನುವ ರೀತಿಯಲ್ಲಿ ಇವರು ಮಾಡುತ್ತಿದ್ದಾರೆ. ರೈತರಿಗೆ ಅನುಕೂಲವಾಗುವಂತಹ ಒಂದು ಕಾರ್ಯಕ್ರಮವನ್ನು ಪ್ರಕಟ ಮಾಡಿದರೆ ಅದರ ವಿರುದ್ಧ ತೀವ್ರವಾದಂಥ ಆಕ್ರೋಶ ಅವರಿಗೆ ಆಗುತ್ತದೆಂದರೆ, ರಾಜಕೀಯ ಲಾಭ ಆಗುವುದಿಲ್ಲವೆಂಬ ಅಸಂತೋಷ ಇದರಿಂದ ವ್ಯಕ್ತವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮಾತನಾಡಲಿ ನಾವು ಕೇಳುವುದಕ್ಕೆ ತಯಾರಾಗಿದ್ದೇವೆ. ಎಲ್ಲರೂ ಎದ್ದುನಿಂತು ಮಾತನಾಡಿದರೆ ನಮಗೆ ಹೇಗೆ ತಿಳಿಯುತ್ತದೆ. ಮಾನ್ಯ ರಮೇಶ್‌ಕುಮಾರ್‌ವರೆ, ತಾವು ಹೇಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, 31ನೇ ತಾರೀಖಿನೊಳಗಾಗಿ ಬಜೆಟ್ discussion conclude ಆಗುವುದಿಲ್ಲ. ಹಣಕಾಸಿನ ಮಂತ್ರಿಗಳಿಗೆ 31ನೇ ತಾರೀಖಿನೊಳಗೆ ಇದನ್ನು announce ಮಾಡಿ ಯಾವ ಜನರಿಗೆ ಇದರ ಸಹಾಯಧನ ಮುಟ್ಟಬೇಕು ಅದನ್ನು ತಿಳಿಸುವುದಕ್ಕೆ ಆಗುವುದಿಲ್ಲ, ಆ ಆತಂಕ

ನಿಮ್ಮ ಮನಸ್ಸಿನಲ್ಲಿದೆ. ಆ ಜನ delegation ರೀತಿಯಲ್ಲಿ ಬಂದು ನಿಮ್ಮಲ್ಲಿ ನಿವೇದಿಸಿಕೊಂಡಿದ್ದಾರೆ. ನಾವೇನೂ ಬೇಡವೆಂದು ಹೇಳಿರಲಿಲ್ಲ, ಹೇಳುವುದಿಲ್ಲ. ಅದೇ ಕಾರಣವನ್ನು ಹೇಳಿ ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಹೇಳಿದ್ದರೆ ಯಾರೂ ಆಬ್ಜೆಕ್ಟ್ ಮಾಡುತ್ತಿರಲಿಲ್ಲ. ನೀವೇ ಹೇಳಿದ್ದು 345 ರೂಲ್ಸ್ ಇದಕ್ಕೆ ಅನ್ವಯಿಸುವುದಿಲ್ಲ. ಎಂದು ಜ್ಞಾನೇಂದ್ರರವರು ಹೇಳಿದಂತೆ ನಾವು ಅಷ್ಟು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಈಶ್ವರಪ್ಪನವರು ಹೇಳಿದಂತೆ ನಮ್ಮ ಯೋಗ್ಯತೆ ಇಷ್ಟೆ. ನಾವು ಬಜೆಟ್ ಮೇಲೆ ಚರ್ಚೆ ಮಾಡುವುದಿಲ್ಲ. ನಾವು ನಿಮ್ಮಷ್ಟು ಸಕ್ರಿಯವಾಗಿ, ಸಕಾರಾತ್ಮಕವಾಗಿ ರಚನಾತ್ಮಕವಾಗಿ ಕೆಲಸ ಮಾಡುವುದಕ್ಕೆ ಗೊತ್ತಿಲ್ಲ. ನಾವು ಮಾಡಿರುವ ಎಲ್ಲ ತಪ್ಪುಗಳಿಗೆ ನಾವು ಶಿಕ್ಷೆ ಅನುಭವಿಸುವುದಕ್ಕೆ ತಯಾರಾಗಿದ್ದೇವೆ. ಮಾಲೀಕರು ಹೊರಗಡೆ ಇದ್ದಾರೆ. ಶಿಕ್ಷೆ ನೀವು ಕೊಡಬೇಡಿ. ನಮ್ಮ ಅಪೀಲು ಏನೆಂದರೆ, ನೀವು ವಾದ ಮಾಡಿ ಶಿಕ್ಷೆಯನ್ನು ಕೊಡುವುದಕ್ಕೆ ಬರಬೇಡಿ. ಶಿಕ್ಷೆ ಅವರು ಕೊಡುತ್ತಾರೆ, ಶಿಕ್ಷೆ ತೆಗೆದುಕೊಳ್ಳುವುದಕ್ಕೆ ಕಾಂಗ್ರೆಸ್ ಪಕ್ಷ ತಯಾರಾಗಿದೆ. ಶಿಕ್ಷೆ ಆಗಿದ್ದರಿಂದಲೇ ಅಲ್ಲಿ ಇದ್ದವರು ಇಲ್ಲಿಗೆ ಬಂದಿದ್ದೇವೆ, ಇಲ್ಲಿಂದ ನಾವು ಹೊರಗಡೆ ಹೋಗಬೇಕೆಂದರೆ ನಾವು ತಯಾರಾಗಿದ್ದೇವೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡು ಮೇಲೆ ಅವರ ತೀರ್ಪನ್ನು ಪ್ರಶ್ನೆ ಮಾಡುವುದಕ್ಕಾಗುತ್ತದೆಯೇ? ನಾವು ಅದಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದೇವೆ. ನಿಯಮ 345 ಈ ಸನ್ನಿವೇಶಕ್ಕೆ ಅನ್ವಯಿಸುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರು ಈಗ ಏನು ಅಭಿವ್ಯಕ್ತಪಡಿಸಿದ್ದಾರೆ, ನಿಜವಾಗಿ ಕೂಡ ಆ ವಿಚಾರ ಏನು ಇದೆ, ಅದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು, ಹೊರಗಡೆ ಇರುವಂಥದ್ದು ಮತ್ತು ಒಳಗಡೆ ಇರತಕ್ಕಂಥಾದ್ದು, ಪ್ರಭುಗಳು ನಿರ್ಧಾರ ಮಾಡುತ್ತಾರೆ. ಎಷ್ಟೋ ಸಲ ನಾವು ನೀವು ಹೊರಗಡೆ ಇದ್ದೇವೆ. ಒಳಗಡೆ ಬರದಂತೆ ಇಟ್ಟಿದ್ದಾರೆ. ಕೆಲವೊಬ್ಬರು ಒಳಗಡೆಯೇ ಇರಬೇಕೆಂದು ಅವರನ್ನು 8–8 ಸಲ ಗೆಲ್ಲಿಸಿದ್ದಾರೆ. ನಮ್ಮನ್ನು ಒಂದು ಸಲ ಆ ಕಡೆಗೆ, ಒಂದು ಸಲ ಈ ಕಡೆಗೆ ಹಾಕಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪ್ರಕಾಶ್‌ರವರೆ, ನಾವು ಆ ಕಡೆ ಬಂದಿಲ್ಲ. permanent ಆಗಿ ಈ ಕಡೆಗೆ ಇದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ವಾಟಾಳ್ ನಾಗರಾಜ್‌ರವರು ಮಾತ್ರ, ತಮ್ಮ ಏಕಪಕ್ಷವನ್ನು ಇಟ್ಟುಕೊಂಡು ಯಾವುದೇ ಪ್ರಲೋಭಕ್ಕೆ ಒಳಗಾಗದಂತೆ ಇದ್ದಾರೆ. ನೀವೇನಾದರೂ ಯಾವುದೇ ಪಕ್ಷದೊಂದಿಗೆ ಗುರ್ತಿಸಿಕೊಂಡಿದ್ದರೆ ಖಂಡಿತವಾಗಿ ಮಂತ್ರಿ ಆಗುತ್ತಿದ್ದಿ, ತಪ್ಪಿದರೆ ಮುಖ್ಯಮಂತ್ರಿ ಖಂಡಿತವಾಗಿ ಆಗುತ್ತಿದ್ದಿ. ಆದರೆ ತಾವು

ಏಕಪಕ್ಷವನ್ನು ಇಟ್ಟುಕೊಂಡಿದ್ದೀರಿ. ಆದ್ದರಿಂದ ಒಂದು ದಿವಸ ನಿಮ್ಮ ವಾಟಾಳ್ ಪಕ್ಷಕ್ಕೆ 113 ರ ಬಹುಮತ ಬರಲಿ ಎಂದು ನಾನು ಹಾರೈಸುತ್ತೇನೆ. ಅದು ಆದರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರದು ಏಕಪಕ್ಷೀಯ; ನಮ್ಮದು ಎರಡು ಪಕ್ಷವೆ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ವಿಷಯವನ್ನು ಬಿಟ್ಟುಬಿಟ್ಟು ಎಲ್ಲಿಗೆ ಹೋಗುತ್ತಿದ್ದೀರಿ.?

ಶ್ರೀ ಎಂ.ಪಿ.ಪ್ರಕಾಶ್: ಈ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಎಷ್ಟೋ ಹೋಳುಗಳು ಆದವು. ಅದೇ ರೀತಿ ನಮ್ಮ ಪಕ್ಷ 13 ಸಲ ಹೋಳಾಗಿದೆ. ಇಲ್ಲಿ ಬಹಳ ಜನ ಮುಂದೆ ಕುಳಿತಿರತಕ್ಕಂಥವರೆಲ್ಲರೂ ನಮ್ಮ ಸ್ನೇಹಿತರಾಗಿಯೇ ಒಂದೇ ಪಕ್ಷದಲ್ಲಿದ್ದೆವು. ಈಗ ನಿಮ್ಮದು ಮೂರನೇ ಪಕ್ಷವೋ ನಾಲ್ಕನೇ ಪಕ್ಷವೋ ಗೊತ್ತಿಲ್ಲ. ಈಗ ನಿಮ್ಮ ಸಿಪಿಎಂ ಪಕ್ಷ ಏನಾಗಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಮೇಲೆ ಉದ್ವೇಗಗೊಳ್ಳುವಂಥ ಪರಿಸ್ಥಿತಿ ಇರಲಿಲ್ಲ. ನಾನು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾವು ರೂಲ್ಸ್‌ನ್ನು ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ರೇಸ್ ಮಾಡಲಿಲ್ಲ. ರಾಜ್ಯದ ಜನತೆಗೆ ಒಳ್ಳೆಯದು ಮಾಡುತ್ತಾರೆ ಎನ್ನುವಾಗ ನಿಯಮ ತೆಗೆದುಕೊಂಡು ಕುಳಿತುಕೊಳ್ಳಬೇಕೆಂದು ನಮಗೆ ಯಾರಿಗೂ ಇರಲಿಲ್ಲ. ನಿಯಮ 345 ರ ಕೆಳಗಡೆ ಈ ಹೇಳಿಕೆ ಕೊಡುವುದಕ್ಕೆ ಬರುವುದಿಲ್ಲ. ತಾವು ಅಲೌ ಮಾಡಿದಿರಿ ನಾವು ಕ್ವೆಶ್ಚನ್ ಮಾಡಲಿಲ್ಲ. ಸನ್ಮಾನ್ಯ ಲಾ ಮಿನಿಸ್ಟರು record ಮೇಲೆ ಹೋದರು. ನಿಯಮ 345 ರ ಕೆಳಗಡೆ ನಿರ್ಬಂಧ ಇದೆ, ನೀವು ಇದರಲ್ಲಿ discussion ಮಾಡುವಂತಿಲ್ಲ clarification ಮಾತ್ರ insist ಮಾಡಬಹುದೆಂದು ಹೇಳಿದರು. ಸರ್ ಈ ನಿಮ್ಮ ನಿಯಮದಲ್ಲಿ ಬಜೆಟ್‌ಗೆ ಸೆಪರೇಟ್ ನಿಯಮ ಇದೆ. Governor address ಬಿಟ್ಟರೆ ಎರಡನೇ ಪ್ರಾಶಸ್ತ್ಯವನ್ನು ಬಜೆಟ್‌ಗೆ ಕೊಟ್ಟಿದ್ದೇವೆ. Special feature ಇಟ್ಟುಕೊಂಡು ತಾವು ನಿಯಮ ಮಾಡಿದ್ದೀರಿ. ನಾನು ಯಡಿಯೂರಪ್ಪನವರ ಹೇಳಿಕೆಯನ್ನು ಸ್ವಾಗತಿಸಿದ್ದೇನೆ. ನಾನು ತಕರಾರು ಮಾಡಲಿಲ್ಲ, ನೀವು ಏಕೆ ಅಲೌ ಮಾಡಿದಿರಿ ಎಂದು, ನಾನು ಆಕ್ಸೆಪ್ಟ್ ಮಾಡುತ್ತೇನೆ. ಅವರು ಹೇಳಿದ ಮೇಲೆ record ಮೇಲೆ ಅದು ಹೋಗಬಾರದೆಂದು ಹೇಳಿ ನಾನು ಎದ್ದು ನಿಂತುಕೊಂಡು ಮಾತಾಡುವುದಕ್ಕೆ ಹೋದಾಗ ತಾವು ಏಕೋ ಉದ್ವೇಗಕ್ಕೆ ಹೋದಿರಿ, ನಮಗೂ ಸ್ವಾಭಾವಿಕ ಆಗುತ್ತದೆ. ನಾನು ನಿಮಗೆ ಹೇಳುವುದು ಒಂದು ಸಲ ಬಜೆಟ್ ಇಟ್ಟಮೇಲೆ ನಿಯಮದ ಪ್ರಕಾರ the Finance Minister shall have a general right of

reply at the end of the discussion. ಒಂದು ನಿಮಿಷ 117 ಓದಿ, "the Finance Minister shall have a general right of reply at the end of the discussion." ಒಂದು provision ಅವರು ಬಹಳವಾಗಿ ಮಾಡಲೇಬೇಕೆಂದರೆ 185 ರ ಕೆಳಗಡೆ supplementary, additional, excess and exceptional grant and votes of credit ಎಂದು ಹೇಳಿ supplementaರಿಯಲ್ಲಿ ತಾವು 185ರ ಕೆಳಗಡೆ supplementary, additional, excess and exceptional grant and votes of creditನ್ನು ತಾವು supplementaryಯಲ್ಲಿ ತರಬೇಕು. ಒಂದು ಸಲ ನೀವು ಬಜೆಟ್‌ನ್ನು ಇಟ್ಟರೆ that is the property of the House and this House is the soverrign House of the Stae. ತಾವು ಏನು ಹೇಳಿಕೆ ಕೊಟ್ಟಿರಿ, ಜನ ಹೀಗೆ ಮಾತನಾಡುತ್ತಾರೆ, ನನ್ನ ಗಮನಕ್ಕೆ ಬಂತು, ಅದನ್ನು ಶಾಸನಸಭೆಗೆ ತಾವು ಮಾಡುವಂಥ ಅಗೌರವ ಎಂದು ನಾವು ಭಾವಿಸಬೇಕಾಗುತ್ತದೆ, ಅದನ್ನು ನಾವು ಅನ್ನಲಿಲ್ಲ. ತಾವು ಈ ಮನೆಯ ವಿವೇಚನೆಯನ್ನು ಈ ಮನೆಯ ಸದಸ್ಯರ ಅನುಭವವನ್ನು ಈ ಮನೆಯ ತೀರ್ಮಾನವನ್ನು ಮೊದಲು ತೆಗೆದುಕೊಳ್ಳಬೇಕು because it is the property of the House. ಇಲ್ಲಿ ಇಟ್ಟಿದ್ದೀರಿ. ಇದಕ್ಕೆ ತಮಗೆ ಎರಡು ತಿಂಗಳು ಅವಕಾಶ ಇತ್ತು. ಮೂರು ತಿಂಗಳ ಕೆಳಗಡೆ ತಾವು ಚರ್ಚೆಯನ್ನು ಮಾಡಿದ್ದೀರಿ. ನಾವು ಕೇಳಿಲ್ಲ ಯಾವ ಯಾವ sector ದಿಂದ ತರಿಸಿ ಕೇಳಿದ್ದೀರಿ. ಯಾರ್ಯಾರನ್ನು consult ಮಾಡಿದ್ದೀರಿ. ಏಕೆ ಮಾಡಿದಿರಿ ಎಂದು ನಾವು ಕೇಳಲಿಲ್ಲ. That is your wisdom. ನೀವು ಯಾರ್ಯಾರ ಜೊತೆಯಲ್ಲಿ ಚರ್ಚೆಯನ್ನು ಮಾಡಬೇಕು, ಯಾರನ್ನು ಕೇಳಬೇಕು, ಯಾರ್ಯಾರಿಗೆ ಎಲ್ಲಿ ಸಹಾಯವನ್ನು ಮಾಡಬೇಕು ಎಂಬುದಕ್ಕೆ you are empowered. ತಾವು ಅಧಿಕಾರಿದಲ್ಲಿ ಇರುವುದರಿಂದ ಅದನ್ನು ತಾವು ಮಾಡಬೇಕಾಗುತ್ತದೆ. When once the budget is presented here, till the voting of the budget, it is the property of the House. You cannot quote somebody else. You can never quote. ಹಾಗೆ ನೀವು ಏನಾದರೂ ಕೋಟ್ ಮಾಡಿದರೆ, ಈ ಮನೆಗೆ ತಾವು ಮಾಡುವ ಅಗೌರವ, that will be a breach of privilege of the House. Contempt ಆಗುತ್ತದೆ. ನಾನು ನಿಮಗೆ ಚಾರ್ಜ್ ಮಾಡುವುದಕ್ಕೆ ಹೇಳುತ್ತಿಲ್ಲ. ನೀವು ಏಕೆ ಮಾಡಿದಿರಿ? ನೀವು ಒಳ್ಳೆಯ ಉದ್ದೇಶದಿಂದ ಮಾಡಿರಬಹುದು. 31 ರೊಳಗೆ ಸಾಲ ಮಾಡಿರುವಂಥ ರೈತರಿಗೆ ಒಳ್ಳೆಯದು ಆಗಬಹುದು ಎಂದು ಮಾಡಿರಬಹುದು, ಇದರ ಬಗ್ಗೆ ನಾವು ತಕರಾರು ಮಾಡಲಿಲ್ಲ. Under rule 345 "a Minister may make a statement on a matter of public importance, not financial importance, not the

grants." ಏನೋ ತಲೆ ಬಿದ್ದು ಹೋಗುವಂಥ ಒಂದು ಕೆಲಸ ನಡೆಯುತ್ತಿರುತ್ತದೆ, ಕನ್ನಂಬಾಡಿ ಅಥವಾ K.R.S. ನಲ್ಲಿ ತೂಬು ತೆಗೆದು ನೀರು ಬಿಟ್ಟುಕೊಂಡು ಹೋಗುತ್ತಾರೆ ಇದನ್ನು ಅಸೆಂಬ್ಲಿ ನಡೆಯುವುದರಿಂದ ಗಮನಕ್ಕೆ ತರಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ 345 ರೂಲ್ಸ್‌ನ್ನು ಇಟ್ಟುಕೊಂಡಿರುವುದನ್ನು ಬಿಟ್ಟರೆ we cannot interfer at this stage of the budget making concessions or exceptions. ನೀವು ಇದನ್ನು ಡಿಬೇಟ್‌ಗೆ ಬಿಡಬೇಕಾಗಿತ್ತು. ಡಿಬೇಟ್‌ನಲ್ಲಿ ಯಾರಾದರೂ ಸದಸ್ಯರಿಗೆ ಉತ್ತರವನ್ನು ಕೊಡುವಾಗ ಅವರಿಗೆ ಹೇಳಬೇಕಾಗಿತ್ತು. No, I concede, ಹೀಗೆ ಮಾಡಿದ್ದೇನೆ, ಇದು ನನ್ನ ಗಮನಕ್ಕೆ ಬಂದಿತ್ತು. ನೀವು ಹೇಳಿರುವುದಕ್ಕೆ ನಾನು ರಾಜಿಯಾಗಿದ್ದೇನೆಂದು ಹೇಳುವುದನ್ನು ಬಿಟ್ಟರೆ once it is property of the House, ಈ ಮನೆಯಲ್ಲಿ ಅದರ ಬಗ್ಗೆ ಓಟು ಆಗುವವರೆಗೆ ತಾವು ಮತ್ತೆ ಮತ್ತೆ interfere ಆಗುವ ಅಧಿಕಾರ ತಮಗೆ ಇಲ್ಲ. ನಾನು ತಮಗೆ ಗೌರಯುತವಾಗಿ ಮನವಿಯನ್ನು ಮಾಡುತ್ತೇನೆ. ಈ ತರಹ ಮಾಡಬಾರದಾಗಿತ್ತು, ಮಾಡಲೇಬೇಕು ಎಂದರೆ, supplementary demandsನಲ್ಲಿಯೇ ತಾವು ಹೋಗಬೇಕು. ಅದಕ್ಕಾಗಿಯೆ supplementary demands under Rule 185ರ ಕೆಳಗಡೆ ಇಟ್ಟಿರುವುದು. ಮಧ್ಯೆ ಏನಾದರೂ ತರಬೇಕು, ಇಲ್ಲಿ ಹೇಳಬೇಕು, ಮಧ್ಯೆದಲ್ಲಿ concession declare ಮಾಡಬೇಕು. ಮಧ್ಯೆದಲ್ಲಿ ಯಾವುದಾದರೂ demandsನ್ನು ನೀವು ಪಾಸ್ ಮಾಡಿಕೊಳ್ಳಬೇಕೆಂದರೆ, you are empowered under Rule 185, not under Rule 345. No Finance Minister can interene under Rule 345 at this stage regarding financial matters. ಬೇರೆ ಏನೋ ರಾಜ್ಯಕ್ಕೆ ಆಗಬಾರದ್ದು ಆಗಿರುತ್ತದೆ, ರಾಜ್ಯಕ್ಕೆ ಮಂತ್ರಿಗಳು ಶಾಸನಸಭೆಯಲ್ಲಿ ಹೇಳಬಾರದೆಂದು ನಮ್ಮ ಅಭಿಪ್ರಾಯವಿಲ್ಲ. ಆ ಹೇಳಿಕೆಯನ್ನು ಮಾಡುವುದಕ್ಕೆ ಇಟ್ಟುಕೊಂಡಿರುವ provision ನ್ನು ತಾವು exemption ಕೊಡಲಿಕ್ಕೆ, ಬಜೆಟ್‌ನಲ್ಲಿ vary ಮಾಡಲಿಕ್ಕೆ, the scope of the budgetನ್ನು ಹೆಚ್ಚು ಕಡಿಮೆ ಮಾಡಲಿಕ್ಕೆ, ತಾವು ಬಳಸಬಾರದಾಗಿತ್ತು, ಸತ್ಯ; ನಾವು ತಕರಾರು ಮಾಡಲಿಲ್ಲ. ನಮಗೆ ಗೊತ್ತಿದ್ದೂ ನಾವು ಮಾಡಲಿಲ್ಲ. ಸಿದ್ದರಾಮಯ್ಯನವರು Finance Minister ಆಗಿದ್ದವರು, ಸಂಪ್ರದಾಯ ಅಲ್ಲ ಅದು, ಬರಬಾರದಾಗಿತ್ತು ಎಂದು ಮೌಖಿಕವಾಗಿ ಒಂದು ಮಾತು ಹೇಳಿದಾಗ ತಾವು ಬಿಡಬಹುದಾಗಿತ್ತು. ಮಾನ್ಯ ಪ್ರಕಾಶ್‌ರವರು Rule 345ರ ಕೆಳಗೆ Speakerರವರು permit ಮಾಡಿದ್ದಾರೆ ಎಂದಾಗ this can never be conceied or construed in future. ಇದನ್ನೇನಾದರೂ ಅವರು ಈ ಶಾಸನ ಸಭೆಯಲ್ಲಿ announce ಮಾಡಿಬಿಟ್ಟರೆ every day finance minister can present one month budget. ಇವತ್ತೊಂದು

ಬಜೆಟ್ ಇಡುತ್ತಾರೆ, ನಾಳೆ ಒಂದು ಇಡುತ್ತಾರೆ, ನಾನು ಯಡಿಯೂರಪ್ಪನವರ ಸುದ್ದಿಯನ್ನು ಮಾತನಾಡುತ್ತಿಲ್ಲ. ಈ ಶಾಸನ ಸಭೆ ಇನ್ನೂ ಬಹಳ ದಿವಸ ಬದುಕಬೇಕಾಗಿದೆ. ನಾಳೆ ಒಂದು ಇಡುತ್ತಾರೆ, ನಾಳಿದ್ದು ಒಂದು ಇಡುತ್ತಾರೆ, then what is the sanctity of presenting the budget before the House? ಇಲ್ಲಿಡುವ ಬಜೆಟ್‌ನ ಗೌರವ, ಅದರ sanctity ಏನಾಗುತ್ತದೆ ಎಂದು ನಾವು ಕೇಳುತ್ತೇವೆ. ನಾವು ಯಾರಾದರೂ ಕಟ್ಟಿಹಾಕಿಕೊಂಡಿದ್ದೆವಾ? ಹಿಡಿದುಕೊಂಡಿದ್ದೆವಾ? ನೀವು 50 ಸಾವಿರದವರೆಗೆ ಮಾಡಬೇಡಿ ಎಂದು ನಾವು ಹೇಳಿದ್ದೇವಾ? What are those constraints? ಹೇಳಬೇಕಲ್ಲ. You are at every liberty. ನೀವೇ ಕುಳಿತುಕೊಂಡು ಬಜೆಟ್‌ನ್ನು ಮಾಡಿದ್ದೀರಿ, ಎರಡು ತಿಂಗಳಿನಿಂದ ಯಡಿಯೂರಪ್ಪನವರು ಎಲ್ಲಿದ್ದಾರೆ ಎಂದು ಕೇಳಿದರೆ, ಬಜೆಟ್ ಮಾಡುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ ನಾವೆಲ್ಲರೂ ಸಂತೋಷ ಪಟ್ಟೆವು. ಬಹಳಷ್ಟು scope ಅನ್ನು, ಬಹಳಷ್ಟು ವ್ಯಾಪಕವಾದ ವಿಚಾರಗಳನ್ನು ಬಜೆಟ್‌ನಲ್ಲಿ ಅಡಕ ಮಾಡಿಕೊಂಡಿದ್ದೀರಿ. ಅದರ ಬಗ್ಗೆ ನಾನೇನೂ ಟೀಕೆ ಮಾಡಿಲ್ಲ. ಇನ್ನೂ ಮಾಡುವುದಕ್ಕೆ ಪ್ರಾರಂಭ ಮಾಡಿಲ್ಲ. ಆದರೆ, in between ತಾವು intervene ಆಗಿದ್ದು ಸಂಪ್ರದಾಯವೂ ಅಲ್ಲ, ನಿಯಮವೂ ಅಲ್ಲ. ಆದರೂ ನಾವು ಇವತ್ತು ಸ್ವಾಗತಿಸಿದ್ದೇವೆ. ಏಕೆಂದರೆ ತಾವು 50 ಸಾವಿರದವರೆಗೆ concession allow ಮಾಡಿರಿ ಎಂದು ನಾವು ಕೇಳಿಕೊಂಡಿದ್ದೇವೆ. ಎಲ್ಲಾ ರೈತರಿಗೆ 25 ಸಾವಿರ ರೂಪಾಯಿಗಳವರೆಗೆ ಕೊಡಿ ಎಂದು. ಆದರೆ ಅವರು ಹೇಳಬೇಕಾಗಿತ್ತು. As a former Finance Minister, it is discipline. ನಾಳೆ ಈ ಸಭೆಯ ಗೌರವ ಉಳಿಯಬೇಕು. ಹೀಗೆ ಆಗಬಾರದು, ಇದು ಸಂಪ್ರದಾಯವಲ್ಲ ಅವರು ಲೇಟಾಗಿ ಬಂದು ಹೇಳಿರುವುದನ್ನು ತಾವು ಅಷ್ಟೊಂದು emotional ಆಗಿ ತೆಗೆದುಕೊಳ್ಳಬಾರದು ಸನ್ಮಾನ್ಯ ಯಡಿಯೂರಪ್ಪನವರೆ; ಇದನ್ನು ಟೀಕೆ ಮಾಡುವುದಕ್ಕೋಸ್ಕರ ಟೀಕೆ ಮಾಡಲಿಲ್ಲ. ಆದರೆ, I have an objection with law minister. ತಾವು ಈ ತರಹ ರೂಲ್ಸ್‌ಗಳನ್ನು conveniencesake ಗೋಸ್ಕರ, Assembly ಯನ್ನು misguide ಮಾಡುವಂಥ ಸ್ಥಿತಿಯನ್ನು future ನಲ್ಲಿ ನಿರ್ಮಾಣ ಮಾಡಬಾರದು. ನಿಮ್ಮ ಬಗ್ಗೆ ನಾವೆಲ್ಲಾ ಬಹಳ ಗೌರವವನ್ನು ಇಟ್ಟುಕೊಂಡಿದ್ದೇವೆ. ಈ ಸಭೆಯನ್ನು ನಮ್ಮ ಹಾಗೂ ನಿಮ್ಮದಕ್ಕೆ ಅಥವಾ ಹೇಗೋ ಒಂದು convenience sake ಗೋಸ್ಕರ ಸಭೆಯನ್ನು ನಡೆಸುವುದಕ್ಕೆ ತಮ್ಮಂಥವರು ಬರಬಾರದೆಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ರಮೇಶ್‌ಕುಮಾರ್‌ರವರು,

ಮಾನ್ಯ ಸಿದ್ದರಾಮಯ್ಯನವರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ತಾವು ಯಾವ ನಿಯಮಾವಳಿ ಅಡಿಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೀರಿ. 345ರ ಕೆಳಗಡೆ ತಾವು ಇದರ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ನಿಯಮ 345 ಇಂತಹ ಒಂದು ಸಾರ್ವತ್ರಿಕ ಮಹತ್ವವಾದಂತಹ ಘಟನೆಗಳು ಆದಾಗ ಒಬ್ಬ ಮಂತ್ರಿಗಳು ಇದರ ಹೇಳಿಕೆಯನ್ನು ಕೊಡಬಹುದು, ಚರ್ಚೆ ಮಾಡಬಹುದು 173ರ ಕೆಳಗಡೆ finance ವಿಚಾರಗಳು ಬಂದಾಗ ಇದನ್ನು ಹೇಳಬಾರದು ಎಂಬ ಮಾತನ್ನು ತಾವು ಬಜೆಟ್‌ನ ವಿಷಯದಲ್ಲಿ ಹೇಳಿದ್ದೀರಿ. ಇದನ್ನು ನಾವು ಅರ್ಥೈಸಿಕೊಳ್ಳುವ ರೀತಿಯಲ್ಲಿ ಇದ್ದರೂ ಕೂಡ ನಾನು ಎಲ್ಲಾ ವಿಚಾರಗಳಲ್ಲಿ ಬಹಳ ದೊಡ್ಡ ಬೃಹಸ್ಪತಿ. ನಾನು ಹೇಳಿದ್ದೆಲ್ಲ ನಿಜವೆನ್ನುವ ಹಠಕ್ಕೆ ಬೀಳುವುದಿಲ್ಲ. ನಾವು ಈಗ ಪ್ರಸ್ತಾಪ ಮಾಡಿದ್ದು ಇಷ್ಟೆ. ನಾವು ಎಲ್ಲರಿಂದಲೂ ಪಾಠವನ್ನು ಕಲಿಯಬೇಕಾಗುತ್ತದೆ. ನಿಯಮ 345 ಅನ್ನು ಮೇಲ್ನೋಟಕ್ಕೆ ನೋಡಿದಾಗ ಒಮ್ಮೆ speaker ರವರು ಅಂಥ ಹೇಳಿಕೆಯನ್ನು ಕೊಡಬೇಕೆನ್ನುವ ರೀತಿಯಲ್ಲಿ ತಾವು ಕೂಡ ಗ್ರಹಿಸಿದ್ದೀರಿ. ಅದರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. 31ನೇ ತಾರೀಖಿನ ದಿವಸ ಇವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ತರಹದ ಒಂದು ಅನುಕೂಲವನ್ನು 50 ಸಾವಿರ ರೂ.ಗಳವರೆಗೆ ಸಾಲವಿವರ ರೈತರಿಗೆ ಮಾಡಿದ್ದೇನೆ ಎಂದರೆ ಅವರು 31ನೇ ತಾರೀಖಿನ ಒಳಗಾಗಿ ಹಣವನ್ನು ಕಟ್ಟುವುದಕ್ಕಾಗುವುದಿಲ್ಲ. ಇದರ ಫಾಯಿದೆಯನ್ನು ಅವರು ಪಡೆದುಕೊಳ್ಳುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕಾಗಿ, ಮಹತ್ವದ ವಿಚಾರವೆಂದು ಹೇಳಿ ಮಧ್ಯದಲ್ಲಿ ಅವರು ಬಂದು ಪ್ರವೇಶ ಮಾಡಿ ನನಗೆ ಹೇಳಿದ್ದಾರೆ. ಅದಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಇದಕ್ಕೆ ನಿಯಮ 345 ಅನ್ವಯವಾಗುವುದಿಲ್ಲವೆಂದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಸದನವನ್ನು ದಾರಿ ತಪ್ಪಿಸುವುದಕ್ಕಾಗಿ 345 ಎಂದು ಹೇಳಿರುವುದಿಲ್ಲ. ನನ್ನ perception, ನನ್ನ ಗ್ರಹಿಕೆಯ ಇತಿಮಿತಿಯೆಂದು ತಾವು ಭಾವಿಸಿಕೊಳ್ಳಬಹುದು. ದಾರಿತಪ್ಪಿಸಿ ಯಾರೂ ಇದರಿಂದ ಪ್ರಯೋಜನ ಪಡೆಯಬೇಕಾದುದು ಇಲ್ಲ. ನಿಯಮಾವಳಿಗಳನ್ನು ಕಾಲಕಾಲಕ್ಕೆ ಅನೇಕ ಸಂದರ್ಭದಲ್ಲಿ ಬದಲಾವಣೆಯನ್ನು ಮಾಡಿದ್ದೇವೆ. ಆದರೆ ಇವತ್ತೇ ಬದಲಾವಣೆಯನ್ನು ಮಾಡಬೇಕೆಂದು ಏನೂ ಇಲ್ಲ. ಅದಕ್ಕಾಗಿಯೆ panel ಕೂಡ ಇದೆ. ಇಂತಹ ಸಂದರ್ಭಗಳು ಬಂದಾಗ 173ರಲ್ಲಿಯೂ ಕೂಡ ಇಂತಹ ನಿಯಮಾವಳಿಗಳನ್ನು ಸೇರಿಸಬಹುದೇ? ಹಾಗೆ ಅನ್ನುವಂತಹ ವಿಚಾರದಲ್ಲಿ ತಾವು ಕೂಡ ಇರುತ್ತೀರಿ, ಚರ್ಚೆಮಾಡಿ ಸೇರಿಸೋಣ. ಈಗ ನಾನು ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಿ ನಾನು ಹೇಳಿದ್ದೇ ಸರಿ ಎಂದು ಹೇಳುವುದಿಲ್ಲ. ನಿಯಮ 173ರ ಕೆಳಗಡೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಅದನ್ನು ನಾನು

ಒಪ್ಪಿಕೊಳ್ಳುತ್ತೇನೆ. ಆದರೆ ದಾರಿ ತಪ್ಪಿಸುವುದಕ್ಕಾಗಿ ಹೇಳಿರುವುದಿಲ್ಲ. ಯಾವ ನಿಯಮಾವಳಿಗಳ ಪ್ರಕಾರ ನೀವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ ಎಂದಾಗ 345 ರ ಕೆಳಗಡೆ ಕೊಟ್ಟಿದ್ದೇವೆಂದು Speakerರವರು ಹೇಳಿದ್ದಾರೆ. ಆ ಕಾರಣಕ್ಕಾಗಿಯೆ ನಿಮ್ಮ ವಾದ ನಿಜವಾದರೂ ಕೂಡ ಈ ಹೇಳಿಕೆಯೆನ್ನುವುದು, ಸಾರ್ವಜನಿಕ ಮಹತ್ವವಾದ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ಮಾನ್ಯ Speakerರವರು ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ ನಿಯಮಾವಳಿಗಳ ಪ್ರಕಾರ ಆಗಿರುವಂತಹ ಚರ್ಚೆಯ ಲಾಭವನ್ನು ರೈತ ಪಡೆಯಬೇಕು. ನೀವು ಹೇಳಿದ ಮಾತನ್ನು ನಾವು ಒಪ್ಪಿಕೊಳ್ಳುತ್ತೇನೆ. ಮುಂದೆ ಇದನ್ನು ಮಾರ್ಗದರ್ಶಿ ಸೂತ್ರವೆಂದು ನಾವು ಭಾವಿಸಿಕೊಳ್ಳುತ್ತೇನೆ. ಸಾಧ್ಯವಾದರೆ ನಿಯಮ 173ರ ಕೆಳಗಡೆ ನಿಯಮವನ್ನು ಬದಲಿ ಮಾಡುವುದನ್ನು ನಾವು panelನಲ್ಲಿ ಚರ್ಚೆ ಮಾಡುವಂತಹ ಸಂದರ್ಭ ಬಂದಾಗ ಅದನ್ನು ಯೋಚನೆ ಮಾಡುತ್ತೇನೆ. ಆದರೆ ಈಗ ಅಲ್ಲ.

ಶ್ರೀ ಸಿದ್ದರಾಮಯ್ಯ: ಅಸೆಂಬ್ಲಿಯಲ್ಲಿ ತಿದ್ದುಪಡಿ ಮಾಡಬೇಕೆನ್ನುವ ಅಗತ್ಯವಿಲ್ಲ. ನಿಮಗೆ ಬದಲಾವಣೆ ಮಾಡಿಕೊಳ್ಳುವುದಕ್ಕೆ ಬಜೆಟ್‌ನಲ್ಲಿ ಬದಲಾವಣೆ ಮಾಡಿಕೊಳ್ಳುವುದಕ್ಕೆ ಇಲ್ಲಿ ಅವಕಾಶವಿದೆ.

ಶ್ರೀ ಎಂ.ಪಿ.ಪ್ರಕಾಶ್: ನಾನು ಹೇಳಿದ್ದು ಆ ಮಾತಲ್ಲ. ಆ ದೃಷ್ಟಿಯಿಂದ ಅಲ್ಲ. ನಾನು ಹೇಳಿದ್ದು ಏನೆಂದರೆ, ಮುಂದೆಯೂ ಕೂಡ ಈ ರೀತಿಯಾದ ಸನ್ನಿವೇಶ ಬರಬಹುದು. ಮುಂದಿನ ಹಣಕಾಸಿನ ಮಂತ್ರಿಗೆ, ಅಂತಹ ಸಂದರ್ಭಗಳು ಬಂದಾಗ ಇದನ್ನು ಸೇರಿಸಿಕೊಳ್ಳುವುದಕ್ಕೆ ನಮ್ಮ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಬರುತ್ತದೆ ಎಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ನಾನು ಮೊದಲೇ ಹೇಳುವಾಗಲೆ ಏತಕ್ಕಾಗಿ ಹೇಳಿದೆ ಎಂದರೆ, ಮಾನ್ಯ ಯಡಿಯೂರಪ್ಪನವರೆ, ಇದು ಹೊಸ ಸಂಪ್ರದಾಯವಾಗುತ್ತದೆಂದು ಹೇಳಿ ಅಷ್ಟಕ್ಕೆ ನಾನು ಬಿಟ್ಟುಬಿಟ್ಟೆ, ಏಕೆಂದರೆ ಯಾವ ರೂಲ್‌ನಲ್ಲಿ ಮಂಡಿಸಿದ್ದೀರಿ, ಬಜೆಟ್‌ನಲ್ಲಿ ಅಪಚಾರವಾಗುತ್ತದೆಂದು ಹೇಳಿದ್ದೇನೆ. ಏಕೆಂದರೆ, ರೈತರದು.....

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಧರ್ಮಸಿಂಗ್‌ರವರು ಯಾವ ನಿಯಮಾವಳಿಗಳ ಪ್ರಕಾರ ಕೊಟ್ಟಿದ್ದೀರಿ ಎಂದು ಪ್ರಶ್ನೆ ಮಾಡಿದರು.

ಶ್ರೀ ಸಿದ್ದರಾಮಯ್ಯ: Exactly. ನಿಯಮ ಇಲ್ಲವೆಂದು ನಮ್ಮ ವಾದ. There is no provision as such.

ಶ್ರೀ ಎನ್.ಧರ್ಮಸಿಂಗ್: ಅಧ್ಯಕ್ಷರಿಗೆ ಅವಕಾಶವನ್ನು ಕೊಡುವುದಕ್ಕೆ ಬರುವುದಿಲ್ಲ. ಈಗಾಗಲೆ ಬಜೆಟ್‌ನ್ನು ಮಂಡನೆ ಮಾಡಿ. ಬಜೆಟ್ ವಿಷಯವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅದೇ ನಮ್ಮ ವಾದ ಇದ್ದದ್ದು. ಅದನ್ನು ಬಿಟ್ಟು ನೀವು ಏತಕ್ಕಾಗಿ ಹೇಳಿದ್ದೀರಿ? ನೀವು ಏತಕ್ಕಾಗಿ announce ಮಾಡಿದ್ದೀರಿ? ಎಂದು ನಾವು ಕೇಳುವುದಕ್ಕೆ ಹೋಗಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನಾನು ನಿಮ್ಮ ವಾದವನ್ನು ಒಪ್ಪದಿದ್ದರೂ ಕೂಡ ಮುಂದುವರೆಸುವ ಅಗತ್ಯವಿಲ್ಲ. ನೀವು ಹೇಳಿರುವುದು ಸರಿ. ಆದರೆ ದಾರಿ ತಪ್ಪಿಸುವುದಕ್ಕಾಗಿ ಹೇಳಿರುವುದಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 1 ಲಕ್ಷ ಸಾಲ ಮಾಡಿರುವಂತಹ ರೈತರಿಗೂ ಕೂಡ ಇದು ಅನ್ವಯಿಸಬೇಕು. 1ಲಕ್ಷಕ್ಕಿಂತ ಮೇಲೆ ಸಾಲ ಮಾಡಿರುವ ರೈತರಿಗೂ ಕೂಡ 25 ಸಾವಿರ ರೂಪಾಯಿಗಳ ಮನ್ನಾ ಅನ್ವಯಿಸಬೇಕೆಂದು ನಾವು ಒತ್ತಾಯ ಮಾಡಿ ತಮ್ಮನ್ನು ಕೇಳಿದ್ದೇವೆ. ಅದಕ್ಕೆ ತಾವು ದಯವಿಟ್ಟು ಉತ್ತರವನ್ನು ಕೊಡಿ. 31ರ ನಂತರ date & timeನ್ನು ತಾವು extend ಮಾಡಬೇಕು. 8 ದಿವಸಗಳಲ್ಲಿ ಹಣವನ್ನು ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇವೆ. ಈ ಎರಡು ವಿಚಾರಗಳಿಗೆ ದಯವಿಟ್ಟು ತಾವು ಸ್ಪಷ್ಟನೆಯನ್ನು ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಟ್ಟಂತೆ ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಿದೆ. ನಾನು ಅತ್ಯಂತ ವಿನಯದಿಂದ ಈ ಮನೆಯಲ್ಲಿ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ನಾನು ಮತ್ತು ಮುಖ್ಯಮಂತ್ರಿಗಳು ಮಧ್ಯಾಹ್ನ ಸಮಾಲೋಚನೆ ಮಾಡಿದ ಮೇಲೆ 31.3.2007ರ ಈ ಅವಧಿಯ ಒಳಗಾಗಿ ಯಾರು ಅಸಲನ್ನು ಕಟ್ಟಿದರೆ, 25 ಸಾವಿರ ರೂಗಳಿಗಿಂತ ಜಾಸ್ತಿ ಇದ್ದವರು ಬಡ್ಡಿ ಮನ್ನಾ ಅಗುತ್ತದೆಂದು ಹೇಳಿದ್ದೇವೆ. ಈ ಅವಕಾಶ 50 ಸಾವಿರದವರೆಗೂ ಕೂಡ ಇರುವವರಿಗೂ 25 ಸಾವಿರದವರಿಗೆ ಮನ್ನಾ ಮಾಡಿ ವ್ಯತ್ಯಾಸ ಇರುವುದನ್ನು ಕಟ್ಟುವುದಕ್ಕೆ ಅವಕಾಶ ಸಿಗುತ್ತದೆನ್ನುವಂತಹ ತರಾತುರಿಯಲ್ಲಿ ಇವತ್ತು ಈ ಹೇಳಿಕೆಯನ್ನು ನಾನು ಕೊಡಬೇಕಾಯಿತು. ತಾವು ಏನು ಹೇಳುತ್ತಿದ್ದೀರಿ, ಈ concessionನ್ನು ಒಂದು ಲಕ್ಷದವರೆಗೆ ಅಥವಾ ಇನ್ನೂ ಹೆಚ್ಚು ಕೊಟ್ಟು ಎಲ್ಲರಿಗೂ ಅವಕಾಶವನ್ನು ಮಾಡಿಕೊಡಿ ಎಂದು ಹೇಳಿದಾಗ ಈಗಾಗಲೇ ಹಣಕಾಸಿನ ಭಾರ 1,950 ಕೋಟಿ ರೂಪಾಯಿಗಳು ಬರುತ್ತಿರುವುದರಿಂದ ಇದನ್ನು ಪರಿಶೀಲನೆ ಮಾಡುವಂತಹ ಸ್ಥಿತಿಯಲ್ಲೂ ಕೂಡ ನಾನು ಇಲ್ಲ. ತಾವು ಸಹಕಾರವನ್ನು ಕೊಡಿ ಎಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಹಣವನ್ನು ಇವತ್ತು ಬಡ್ಡಿಯನ್ನು.......

(ಗೊಂದಲ)

(ಈ ಹಂತದಲ್ಲಿ ಶ್ರೀ ಜೆ.ಸಿ.ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಜಯಪ್ರಕಾಶ್ ಹೆಗ್ಡೆ, ಶ್ರೀ ಜಿ.ವಿ.ಶ್ರೀರಾಮರೆಡ್ಡಿ, ಶ್ರೀ ಎಸ್.ರಾಜೇಂದ್ರನ್, ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಎನ್.ಧರ್ಮಸಿಂಗ್(ವಿರೋಧಪಕ್ಷದ ನಾಯಕರು): ತಾವು ಈ ಬಗ್ಗೆ ಯೋಚನೆ ಮಾಡಬೇಕು. ತಾವು ಸಾಲ ಮನ್ನಾ ಮಾಡುವ ಬಗ್ಗೆ ಘೋಷಣೆಯನ್ನು ಮಾಡಬೇಕು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ವಾತಂತ್ರ ಬಂದ ಮೇಲೆ ಈ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಈ ಸಾಹಸವನ್ನು ಯಾರು ಮಾಡಿರಲಿಲ್ಲ. (ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.)

ಅಧ್ಯಕ್ಷರು: ಮಾನ್ಯ ನಾಗರಾಜ್‌ರವರೆ, ಈಗ ತಾವು ಮಾತನಾಡಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ವಾತಂತ್ರ ಬಂದ ನಂತರ ಯಾವ ಸರ್ಕಾರವೂ ಈ ತರಹ ದೊಡ್ಡ ಪ್ರಮಾಣದಲ್ಲಿ ಮನ್ನಾ ಮಾಡಿರಲಿಲ್ಲ. ತಾವು ವೆಲ್‌ಗೆ ಬರುತ್ತಿರುವುದು ಪ್ರಚಾರ ಮಾಡುವುದಕ್ಕೇ ಹೊರತು, ತಾವು ಈ ರೀತಿ ಪ್ರಚಾರ ಮಾಡುವುದರಿಂದ ಏನು ಲಾಭವಾಗುವುದಿಲ್ಲ.

ಅಧ್ಯಕ್ಷರು: ಸದನದ ಬಾವಿಯಲ್ಲಿ ಏತಕ್ಕೆ ನಿಂತುಕೊಂಡು ಮಾತನಾಡುತ್ತಿದ್ದೀರಿ.?

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ಸರ್ಕಾರವನ್ನು ಹೀಗೇ ಮಾಡಬೇಕೆಂದು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ತಾವು ಸಲಹೆಯನ್ನು ಕೊಡಬಹುದು. ಮಾನ್ಯ ಯಡಿಯೂರಪ್ಪನವರೇ, ಇಂತಹ ದೊಡ್ಡ concession ಕೊಟ್ಟಿದ್ದೀರೆಂದು ತಾವು ಸ್ವಾಗತ ಮಾಡುವುದನ್ನು ಬಿಟ್ಟು ವೆಲ್‌ಗೆ ಬಂದಿದ್ದೀರೆಂದರೆ ನಾನು ಉತ್ತರವನ್ನು ಕೊಡುವುದು ಹೇಗೇ?

ಅಧ್ಯಕ್ಷರು: ವೆಲ್‌ಗೆ ಬಂದಿರುವವರು ಮಾತನಾಡಬೇಡಿ. ತಾವುಗಳು ತಮ್ಮ ಜಾಗದಲ್ಲಿ ಹೋಗಿ ಮಾತನಾಡಿ.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಇದರ ಬಗ್ಗೆ ಕಳಕಳಿ ಇದ್ದರೆ ಎಲ್ಲರೂ ಸ್ವಾಗತವನ್ನು ಮಾಡುತ್ತೇವೆ. ನಾವು ಇದಕ್ಕೆ ಒಪ್ಪುತ್ತೇವೆ. ಈ ತರಹದ ಪೀಠಿಕೆಯನ್ನು ಮಾಡಿ ಜನರಿಗೆ ವಂಚನೆ ಮಾಡುವಂತಹ ರೀತಿಯಲ್ಲಿ ಅಲ್ಲ. ಇವತ್ತು ಸ್ಪಷ್ಟತೆ ಇಲ್ಲ,

ಬದ್ಧತೆ ಇಲ್ಲ, ಅದಕ್ಕೆ ನಾವು ಏನು, ಇವತ್ತು ಕರ್ನಾಟಕದ ರೈತರಿಗೆ ವಂಚನೆ ಮಾಡುತ್ತಿದ್ದೀರಿ, ಮೋಸ ಮಾಡುತ್ತಿದ್ದೀರಿ, ಆದ್ದರಿಂದ ನಾವು ಸಭಾತ್ಯಾಗ ಮಾಡುತ್ತೇವೆ.(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರಿ ಎಂ.ಪಿ.ಪ್ರಕಾಶ್: ಸರ್ಕಾರದ ಸಾಧಕಬಾಧಕವೇನು? ತಾವು ಸ್ವಲ್ಪ ದಯಮಾಡಿ ಕೇಳಿ, ಸರ್ಕಾರವು ಇದೇ ರೀತಿಯಾಗಿ ನಡೆದುಕೊಳ್ಳಬೇಕೆಂದು ಹೇಳಿ ಒತ್ತಾಯಮಾಡುವುದು, ಆದರೆ ಒತ್ತಾಯ ಮಾಡಿ, ಈ ರೀತಿಯ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವುದಲ್ಲ, ತಾವೆಲ್ಲರೂ ಹಿರಿಯರಿದ್ದೀರಿ, ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಬೇಕು. ತಾವು ಹಿರಿಯರಿದ್ದೀರಿ, ನಾವು ಯಡಿಯೂರಪ್ಪನವರನ್ನು ಕೇಳಿಕೊಂಡಾಗ ಅವರು ಎದ್ದೆದ್ದು ಹೋಗುತ್ತಿದ್ದರು. ತಾವು ಹೋಗಿ ದಯವಿಟ್ಟು ಹೋಗಿ ಅಲ್ಲಿ ಕುಳಿತುಕೊಳ್ಳಿ. ಮುಂದಿನ ಕಾರ್ಯಕಲಾಪ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಈಗ ನೋಡಿ, ತಾವು ದಯವಿಟ್ಟು ಹಿರಿಯರಿದ್ದೀರಿ, ತಮ್ಮ ಸ್ಥಾನಗಳಿಗೆ ಹೋಗಿ ತಾವು ಕುಳಿತುಕೊಳ್ಳಿ.

(ಗೊಂದಲ)

(ಸದನದಲ್ಲಿ ವಿರೋಧಪಕ್ಷಗಳಾಗಿರುವ ಮುಖಂಡರಾದ ಜೆ.ಸಿ.ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ.ಜಯಪ್ರಕಾಶ್‌ಹೆಗ್ಡೆ, ಎಸ್.ರಾಜೇಂದ್ರನ್, ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಅವರು ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಬಾವಿಯೊಳಗೆ ನಿಂತು ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ, ಅವರಿಗೆ ದಯವಿಟ್ಟು ಅವರ ಸ್ಥಾನಗಳಿಗೆ ಬಂದು ಚರ್ಚೆ ಮಾಡಲಿಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

ಶ್ರೀ ಕೆ.ರಘುಪತಿ ಭಟ್:– ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕಿಲ್ಲ, ನಿಯಮದ ಪ್ರಕಾರ ಬಾವಿಯಲ್ಲಿ ನಿಂತು ಮಾತನಾಡಲಿಕ್ಕೆ ಅವಕಾಶವಿದೆಯೇ? ನಿಯಮ ಹೇಳಿಕೊಡುವವರು ಅದನ್ನಾದರೂ ಹೇಳಲಿ ನಮಗೆ. ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ ಅವಕಾಶವಿದೆಯೆನ್ನುವುದಕ್ಕೆ ಸ್ಪಷ್ಟೀಕರಣ ಕೊಡಲಿ, ಅವರೆಲ್ಲಾ ಹಿರಿಯ ಸದಸ್ಯರಿದ್ದಾರೆ. ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ

ನಿಯಮವಿದೆಯೇ? ಎಲ್ಲದಕ್ಕೂ ನಿಯಮವಿದೆಯೆಂದು ಹೇಳುವವರು ಬಾವಿಯಲ್ಲಿ ನಿಂತುಕೊಂಡು ಮಾತನಾಡಲಿಕ್ಕೆ ನಿಯಮವಿದೆಯೇ ಎಂಬುದನ್ನು ಹೇಳಲಿ.

ಅಧ್ಯಕ್ಷರು:– ದಯವಿಟ್ಟು ತಾವುಗಳೆಲ್ಲಾ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ.

ಮಾನ್ಯ ಸದಸ್ಯರೊಬ್ಬರು:– ಅವರಿಗೆ ರೈತರ ಬಗ್ಗೆ ಕಾಳಜಿಯೇ ಇಲ್ಲವಲ್ಲ, ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಯಿತು, ಯಾವುದೂ ತೀರ್ಮಾನ ಕೈಗೊಂಡಿಲ್ಲ.

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಅಧ್ಯಕ್ಷರೇ ಸದನ ಸ್ಥಗಿತವಾಗಿದೆಯೋ, ನಡೆಯುತ್ತಿದೆಯೋ ಗೊತ್ತಾಗುತ್ತಿಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮಾನ್ಯ ಹಿರಿಯ ಸದಸ್ಯರುಗಳಿಗೆ ಅವರ ಸ್ಥಾನಗಳಿಗೆ ಹೋಗಲಿಕ್ಕೆ ಹೇಳಿ,

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಅಧ್ಯಕ್ಷರೇ ಸಭೆಯನ್ನು ಮುಂದೂಡಿ. ಸಮಾಲೋಚನೆ ಮಾಡಿಕೊಂಡು ಬರಲಿ.

ಅಧ್ಯಕ್ಷರು:– ಈಗ ಅವರು ವೆಲ್‌ನಲ್ಲಿದ್ದಾರೆ. ಸರ್ಕಾರದವರು ಇದರ ಬಗ್ಗೆ ಏನಾದರೂ ಹೇಳುವುದಿದೆಯೇ? ಇಲ್ಲದಿದ್ದರೆ ನಿಯಮ 69 ರಡಿ ಇರುವ ಕಲಾಪವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಒಂದು ವೇಳೆ ಒತ್ತಾಯ ಆಗಿಯೇ ತೀರಬೇಕೆಂದರೆ ಘೋಷಣೆಗಳನ್ನು ಕೂಗದೆ ನಮ್ಮ ಸದನದ ಕಲಾಪಗಳಿಗೆ ತಾವು ಸಹಕಾರ ಕೊಡಬೇಕು, ಮುಂದಿನ ಕಲಾಪದ ಭಾಗವೇನಿದೆ, ಅದನ್ನು ಮುಂದುವರೆಸಬಹುದು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್:– ಅದು House in order ಎಂದು ಹಿಂದೆ ಎಷ್ಟೋ ಸಾರಿ ತೀರ್ಮಾನವಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ದಯಮಾಡಿ ಹಿರಿಯ ಸದಸ್ಯರೆಲ್ಲ ಬಂದು ಸ್ಥಾನಗಳಲ್ಲಿ ಕುಳಿತು ಸರ್ಕಾರ ಏನು ಹೇಳುತ್ತದೆಂದು ಕೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಇದು ಸಂಪ್ರದಾಯವಲ್ಲ, House in order ಎಂದು decision ಆಗಿದೆ. ಈಗ ನಾವೇನು ಮಾಡೋಣ, ನೀವು ನಿಮ್ಮ ಸ್ಥಳಗಳಿಗೆ ಹೋಗುವುದಿಲ್ಲವೆನ್ನುತ್ತೀರಿ, ತಾವು ಅಲ್ಲಿ ಕುಳಿತುಕೊಳ್ಳುವುದಿಲ್ಲವೆನ್ನುತ್ತೀರಿ.

ಅಧ್ಯಕ್ಷರು:- ಈಗ ನಿಯಮ 69 ರ ಕೆಳಗೆ ಕಲಾಪ ತೆಗೆದುಕೊಳ್ಳಬೇಕಾಗುತ್ತದೆ, that main Opposition party is not here. ಆದ್ದರಿಂದ 10 ನಿಮಿಷ ಸದನವನ್ನು ಮುಂದೂಡುತ್ತೇನೆ, ಅಷ್ಟರಲ್ಲಿ ಅವರು ಬರುತ್ತಾರೆ. ಪುನಃ ಸದನ ಸೇರಿ ಅಜೆಂಡಾ ಪ್ರಕಾರ ನಿಯಮ 69ಅನ್ನು ತೆಗೆದುಕೊಳ್ಳುತ್ತೇನೆ, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವನ್ನು ಸಂಜೆ 5 ಗಂಟೆ 4 ನಿಮಿಷಕ್ಕೆ ಮುಂದೂಡಿ ಪುನಃ ಹತ್ತು ನಿಮಿಷಗಳ ನಂತರ ಸೇರುವುದಾಗಿ ಸಭೆಯ ನಿರ್ಣಯಿಸಿತು.)

(ಸಭೆಯು ಮತ್ತೆ 5.30 ಗಂಟೆಗೆ ಸಮಾವೇಶಗೊಂಡಿತು. ಉಪಾಧ್ಯಾಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್, ಮಾಧುಸ್ವಾಮಿ, ಜಿ.ವಿ.ಶ್ರೀರಾಮರೆಡ್ಡಿ, ಮತ್ತು ಎಸ್.ರಾಜೇಂದ್ರನ್ ಅವರುಗಳು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು-)

ಉಪಾಧ್ಯಕ್ಷರು: ಈಗ ನಿಯಮ 69 ರ ಮೇರೆಗೆ ಚರ್ಚೆ. ಮಾನ್ಯ ರಮೇಶ್ ಕುಮಾರ್ ಅವರು ತಾವೇನಾದರೂ ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಮ್ಮ ಸಹೋದ್ಯೋಗಿಗಳೆಲ್ಲ ಬಾವಿಯಲ್ಲಿದ್ದಾರೆ. ನಾವು ಇಲ್ಲಿ ಮಾತನಾಡುವುದು ಚೆನ್ನಾಗಿ ಕಾಣಿಸುವುದಿಲ್ಲ. ಅವರನ್ನು ವೆಲ್ ನಲ್ಲಿಟ್ಟು ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಆಗಲೇ ನಾನು ವಿನಂತಿಯನ್ನು ಮಾಡಿಕೊಂಡೆ. ಎಲ್ಲರೂ ತಾವುಗಳು ಹಿರಿಯರಿದ್ದೀರಿ. ಆದರೆ ಹಣಕಾಸಿನ ಪರಿಣಾಮಗಳೇನಾಗುತ್ತೆ ಎಂದು ನೋಡಬೇಕಾಗುತ್ತದೆ. ಆದ್ದರಿಂದ ತಾವುಗಳು ತಮ್ಮ ಸ್ಥಾನಗಳಿಗೆ ಹೋಗಿ. ನಿಯಮ 69ರ ಕೆಳಗೆ ಚರ್ಚೆಯನ್ನು ಮಾಡೋಣ.

ಶ್ರೀ ಕೆ.ಎನ್.ರಾಜಣ್ಣ: ನಾಳೆ ಮಧ್ಯಾಹ್ನದ ಒಳಗೆ ಇದರ ಬಗ್ಗೆ ತೀರ್ಮಾನ ಮಾಡದಿದ್ದರೆ ನಾನೂ ನಿಮ್ಮ ಜೊತೆಗೆ ಬರುತ್ತೇನೆ. ನಾಳೆ ನಮ್ಮ ಪಾರ್ಟಿ ಮೀಟಿಂಗ್ ಇದೆ. ಅಲ್ಲಿ ಇದರ ಬಗ್ಗೆ ಪ್ರಸ್ತಾಪವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ತಮ್ಮ ಸ್ಟೇಟ್‌ಮೆಂಟ್ ರೆಕಾರ್ಡ್‌ನಲ್ಲಿದೆ. ತಮ್ಮ ಸ್ಟೇಟ್ ಮೆಂಟ್ ಪ್ರೆಸ್ ನವರ ಮುಂದೆ ರೆಕಾರ್ಡ್‌ಗೆ ಬರಲಿ. ಇದು ನಿಮ್ಮ ಪಾರ್ಟಿಯ ತೀರ್ಮಾನ ಎಂದು ಬರಲಿ.

ಶ್ರೀ ಕೆ.ಎನ್.ರಾಜಣ್ಣ: ಅದು ರೆಕಾರ್ಡ್‌ಗೆ ಬರಲಿ ಎಂದೇ ನಾನು ನಿಂತುಕೊಂಡು ಹೇಳಿರುವುದು.

ಶ್ರೀ ಕೆ.ಆರ್.ರಮೇಶ್ ಕುಮಾರ್: ನಮ್ಮ ರಾಜಣ್ಣನವರು ಬಹಳ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳಿದ್ದಾರೆ. ನಮ್ಮೆಲ್ಲರಿಗೂ ಕೂಡ ಇದು common interest. ನಮ್ಮ ಸ್ನೇಹಿತರಿಗೆ ನಾನೇನು ಹೇಳುತ್ತೇನೆಂದರೆ ಅವರು ಎದ್ದು ನಿಂತು ಅದು ರೆಕಾರ್ಡ್‌ಗೆ ಹೋಗಲಿ ಎಂದು ಸ್ಪಷ್ಟವಾದ ನಿಲುವು ತಾಳಿರುವಾಗ ಅದಕ್ಕೆ ನೀವುಗಳು ಸ್ವಲ್ಪ considerate ಆಗಿದ್ದರೆ ಒಳ್ಳೆಯದೆಂದು ಕಾಣುತ್ತದೆ. ದಯಮಾಡಿ ತಾವುಗಳು ಸಹಕರಿಸಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಇದು ಆಗಲಿಲ್ಲವೆಂದರೆ ಎಲ್ಲ ಶಾಸಕರುಗಳು ಧರಣಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ನಾಳೆ ಒಳಗಾಗಿ ನಮ್ಮ ಪಾರ್ಟಿ ತೀರ್ಮಾನ ಮಾಡಲಿಲ್ಲವೆಂದರೆ ನಾವು ನಿಮ್ಮ ಜೊತೆಗೆ ವೆಲ್‌ಗೆ ಬರುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಎನ್.ರಾಜಣ್ಣ: ವೆಲ್‌ಗೆ ನಾನು ಬರುತ್ತೇನೆಂದು ಹೇಳಿರುವುದು.

ಶ್ರೀ ಸಿದ್ದರಾಮಯ್ಯ: ಎಲ್ಲ ಎಂಎಲ್‌ಎಗಳು ಬರುತ್ತಾರಾ?

ಶ್ರೀ ಕೆ.ಎನ್.ರಾಜಣ್ಣ: ಎಲ್ಲರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಜವಾಬ್ದಾರಿಯಿಂದ ನಾನು ಹೇಳಿದ್ದೇನೆ.

ಶ್ರೀ ಎಂ.ಪಿ.ವೆಂಕಟೇಶ್: ರೈತರ ಪರ ನಾವಿದ್ದೇವೆ. ದಯವಿಟ್ಟು ನೀವೆಲ್ಲ ಒಳಗೆ ಬನ್ನಿ. ನಾವು ಚರ್ಚೆ ಮಾಡುತ್ತೇವೆ. ನಾವು ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ಮಾಡಿ ರೈತರ ಪರ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಂಥ ದೊಡ್ಡ announcement ಮುಖ್ಯಮಂತ್ರಿಯವರಿಗೂ ಗೊತ್ತಿಲ್ಲ. ಗೃಹ ಸಚಿವರಿಗೂ ಕೂಡ ಗೊತ್ತಿಲ್ಲ. ಎಲ್ಲರಿಗೂ ದಂಗುಬಡಿದ ಹಾಗೆ ಆಗಿಬಿಟ್ಟಿದೆ. ಏಕೆಂದರೆ ಇಂಥ important announcement.....

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಈಗಾಗಲೇ ಚರ್ಚೆಯಾಗಿದೆ. ಮಾನ್ಯ ರಾಜಣ್ಣನವರು ಆನುಷಂಗಿಕವಾಗಿ ಕೂಡ ಹೇಳಿದ್ದಾರೆ, ನಾಳೆ ನಮ್ಮ ಶಾಸಕಾಂಗದ ಸಭೆ ಇದೆ ಎಂದು. ತಾವು ಅನೇಕ ವಿಷಯಗಳನ್ನು ಹೇಳಿದ್ದೀರಿ. ಯಾವುದೇ ಸರ್ಕಾರವಾದರೂ ಕೂಡ ಈ ವಿಚಾರದ ಬಗ್ಗೆ ಹಣಕಾಸಿನ ಸಾಧಕ ಬಾಧಕಗಳನ್ನು ಯೋಚನೆ ಮಾಡಬೇಕಾಗುತ್ತದೆ. ಅಷ್ಟು ಸುಲಭವಾಗಿ ಹಣಕಾಸಿನ ವಿಚಾರದಲ್ಲಿ ಒಪ್ಪಿಗೆ

ಕೊಡತಕ್ಕಂಥಾದ್ದು ಆಗುವುದಿಲ್ಲ. ಆ ಕಾರಣಕ್ಕಾಗಿ ಸಧ್ಯಕ್ಕೆ ಈ ವಿಚಾರ ಪ್ರಸ್ತಾಪ ಮಾಡುವುದನ್ನು ಕೈಬಿಟ್ಟು ನಾನು ಎಲ್ಲ ಹಿರಿಯರು ಯಾರು ಬಾವಿಯೊಳಗೆ ಇದ್ದೀರಿ, ನಿಮಗೆಲ್ಲರಿಗೂ ಅತ್ಯಂತ ವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಈಗ ನಿಯಮ 69ರ ಕೆಳಗೆ ಕಾರ್ಯಕಲಾಪ ಇದೆ. ಅದಕ್ಕೆ ಅನುವು ಮಾಡಿಕೊಡಿ ಮತ್ತು ಇದರ ಬಗ್ಗೆ ಚರ್ಚೆಗೆ ನಾವು ಬಜೆಟ್‌ನಲ್ಲಿ ಉತ್ತರ ಕೊಡುವುದಕ್ಕೆ ಕೂಡ ಸಾಧ್ಯವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ಸುಮ್ಮನೆ ಬಾವಿಯಲ್ಲಿ ನಿಲ್ಲುವ ಬದಲು ಅಲ್ಲಿಗೆ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಧರ್ಮಸಿಂಗ್: ಮಾನ್ಯ ಪ್ರಕಾಶ್ ಅವರು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ಗೊಂದಲ ಇದೆ. ನಿಮ್ಮ ಪಕ್ಷದಲ್ಲೂ ಗೊಂದಲ ಇದೆ. Cabinet meeting ಕೂಡ ಇದೆ. ಅಲ್ಲಿ ಚರ್ಚೆ ಮಾಡಿ. ಸಮಾಲೋಚನೆ ಮಾಡಿ. ನಾಳೆ ಹತ್ತುವರೆ ಗಂಟೆಗೂ ಹನ್ನೊಂದು ಗಂಟೆಗೊ meet ಆಗೋಣ. ಮತ್ತೆ ನಾಳೆ ಇದನ್ನು ಚರ್ಚೆ ಮಾಡೋಣ. ಯಾರೇ ವೆಲ್ ನಲ್ಲಿದ್ದಾಗ ಚರ್ಚೆ ಪ್ರಾರಂಭ ಮಾಡಿದ್ದಿಲ್ಲ. ಈಗ ಮಾತನಾಡಲು ಎಲ್ಲ ಹಿರಿಯರು ಬಂದಿದ್ದಾರೆ. ಅದರ ಬಗ್ಗೆ ಏನೂ ಇಲ್ಲ. ಈಗ ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಿ. ನಾಳೆ ಹತ್ತುವರೆ ಗಂಟೆಗೆ ಸೇರೋಣ.

(ಗೊಂದಲ)

ಶ್ರೀ ಡಿ.ಆರ್.ಪಾಟೀಲ್: ತಾವು ಬಜೆಟ್ present ಆದಮೇಲೆ ಟಿವಿ interview ನಲ್ಲಿ ಪ್ರತಿಯೊಬ್ಬ ಸಾಲಗಾರನಿಗೂ 25 ಸಾವಿರ ಸಾಲ ಮನ್ನಾ ಆಗುತ್ತೆ ಎಂದು ತಾವು ಒಂದು ಹೇಳಿಕೆ ಕೊಟ್ಟಿದ್ದಿರಿ. ಪತ್ರಿಕೆಯಲ್ಲಿ ಬೇರೆ ಬಂದಿದೆ. ಅದರ ಬಗ್ಗೆ ಸರ್ಕಾರದ stand ಏನು?

ಶ್ರೀ ಎಂ.ಪಿ.ಪ್ರಕಾಶ್: ಅವರು ಹೇಳಿದಂತೆ ಧ್ವನಿ ಮತ್ತು ಪ್ರತಿಧ್ವನಿ ಕಾರ್ಯಕ್ರಮದಲ್ಲಿ ಈ ವಿಚಾರದಲ್ಲಿ ಚರ್ಚೆ ಮಾಡಿದಾಗ ಕೆಲವರು ಪ್ರಶ್ನೆಯನ್ನು ಕೇಳಿದರು. ಇದು ಪತ್ರಿಕೆಗಳಲ್ಲೂ ಬಂದಿದೆ. 25 ಸಾವಿರದವರೆಗೆ ಮಾತ್ರ ಸಾಲ ಮನ್ನಾ ಮಾಡುತ್ತೇವೆ, ಉಳಿದವರಿಗೆ ಇಲ್ಲ ಎಂದು ಹೇಳಿದೆವು. ಆ ಸಂದರ್ಭದಲ್ಲಿ ಅಸ್ಪಷ್ಟತೆ ಉಂಟಾಗಿದೆ. ಆದ್ದರಿಂದ, ಇನ್ನೂ consequential legislations ಮತ್ತು ಅದಕ್ಕೆ ಬೇಕಾದ ಆಜ್ಞೆಗಳನ್ನು ಮಾಡತಕ್ಕದ್ದು ಇದೆ. ಆ ಸಂದರ್ಭದಲ್ಲಿ ನಿಮ್ಮ ಆತಂಕಗಳನ್ನು ನಿವಾರಿಸುತ್ತೇವೆಂದು ನಾನು ಉತ್ತರವನ್ನು ಕೊಟ್ಟೆ, ನಾವು ಮೊದಲು ಗ್ರಹಿಸಿದ್ದು ಕೂಡ ಹಾಗೇನೆ. ಆದರೆ ಅದರ ನಂತರ ಮಾನ್ಯ ಉಪ ಮುಖ್ಯಮಂತ್ರಿಗಳು

ಈ ವಿಚಾರವನ್ನು 50 ಸಾವಿರ ರೂ.ವರೆಗೆ ತಂದಿದ್ದೇನೆಂದು ಹೇಳಿದ್ದಾರೆ. 50 ಸಾವಿರ ಇದ್ದುದು 25 ಸಾವಿರ ರದ್ದಾಗುತ್ತದೆಂದು ಹೇಳಿ. ಆದರೆ ನಮ್ಮ ಮೊದಲಿನ ಗ್ರಹಿಕೆ ಬೇರೆ ಇತ್ತು. ಅದೇನೆ ಇರಲಿ. ಸರ್ಕಾರವಾಗಿ ಆ ವಿಚಾರವನ್ನು ನಾನು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ನಾನು ಧ್ವನಿ ಮತ್ತು ಪ್ರತಿಧ್ವನಿ ಯಲ್ಲಿ ಕೂಡ ಆ ಮಾತನ್ನು ಹೇಳಿದ್ದೇನೆ. ಏನು ಹೇಳಿದ್ದೇನೆಂದರೆ, ಇದರ ಬಗ್ಗೆ ನಮ್ಮ ನಿಯಮಾವಳಿಗಳು ಬರುತ್ತವೆ, ಆಗ ಸ್ಪಷ್ಟೀಕರಣ ಬರುತ್ತದೆ. ನಿಮ್ಮ ಆತಂಕಕ್ಕೆ ನಿವಾರಣೆಯನ್ನು ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ತಾವು ಕ್ಯಾಬಿನೆಟ್‌ನಲ್ಲಿದ್ದಿರಿ. ಒಂದೇ ಒಂದು ವಿಚಾರ ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಅವನು ಸಾಲ ಕಟ್ಟಿದ್ದಾನೋ, ಬಿಟ್ಟಿದ್ದಾನೋ, ಅವನು ಸಾಲವನ್ನು ತೆಗೆದುಕೊಂಡಿದ್ದರೆ, ಅದು ವಜಾ ಆಗುತ್ತದೆಯೇ? ಇಲ್ಲದಿದ್ದರೆ, ಸಾಲ ಕಟ್ಟಿದವನಿಗೂ ವಜಾ ಆಗುವುದಿಲ್ಲ, ಕಟ್ಟದಿದ್ದವನಿಗೂ ವಜಾ ಆಗುವುದಿಲ್ಲ. ರೈತ ಸಾಲ ತೆಗೆದುಕೊಂಡು ಇಷ್ಟರೊಳಗೆ complete ಆಗಿ ಕಟ್ಟುಬಿಟ್ಟಿದ್ದರೆ, ಅವನ ಪರಿಸ್ಥಿತಿ ಏನು?

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಆರಗಜ್ಞಾನೇಂದ್ರ: ವಾಪಸ್ ಬರುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: 'ಕೊಟ್ಟವನು ಕೋಡಂಗಿ, ಪಡೆದುಕೊಂಡವನು ಈರಭದ್ರ' ಎಂಬ ಗಾದೆ ಮಾತಿದೆ. ಪಾಪ! ಕಟ್ಟಿದವನಿಗೆ ಏನೂ ಸಿಗುತ್ತಿರಲಿಲ್ಲ. ಆದರೆ, ಈ ಸಲ ಅವರಿಗೆ 6 ಪರ್ಸೆಂಟ್ ಬಡ್ಡಿಯಂತೆ ಎರಡು ವರ್ಷಗಳ ನಂತರ ವಾಪಸ್ ಕೊಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. We are going to reimburse.

ಉಪಾಧ್ಯಕ್ಷರು: ಮಲ್ಲಿಕಾರ್ಜುನ ಖರ್ಗೆಯವರೆ, ನಿಯಮ 69ರಲ್ಲಿ ಮಾತನಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ನಾನು ಮಾತನಾಡಲು ready ಯಾಗಿದ್ದೇನೆ. ಫೆಬ್ರವರಿ 3ರಿಂದ 22ರವರೆಗೆ ಚನ್ನಿಗಪ್ಪನವರು ಅಲ್ಲಿಗೆ ಹೋಗಿ inspection ಮಾಡಿಕೊಂಡು ಬಂದಿರುವವರೆಗೆ ಎಲ್ಲಾ ready ಇದೆ. ಆದರೆ, ಇವರುಗಳನ್ನು ಬಾವಿಯಲ್ಲಿ ನಿಲ್ಲಿಸಿ, ಅವರಲ್ಲಿ ನಾವೂ ಭಾಗಿಗಳಾಗುವ ಮೂಲಕ ರೈತರ ಸಾಲ ಮನ್ನಾ ಆಗುತ್ತದೆಂದು ಕಾದು ಕುಳಿತಿದ್ದೇವೆ. ಆ ವಿಚಾರ ಬಿಟ್ಟು ಇದರ ಬಗ್ಗೆ ಮಾತನಾಡಿದರೆ, ಜನರು ನನ್ನನ್ನು ಬಿಡುತ್ತಾರೆಯೇ? ಇಲ್ಲವೇ, ಇವರನ್ನಾದರೂ

ನನ್ನ ಜೊತೆ ಕಳುಹಿಸಿ ಅಥವಾ ನನ್ನನ್ನಾದರೂ ಅವರ ಜೊತೆಗೆ ಕಳುಹಿಸಿ. ಎರಡರಲ್ಲಿ ಒಂದು ಮಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಎರಡನೆಯ ವಿಚಾರ ನಿಮಗೆ ಬಿಟ್ಟದ್ದು!

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ: ನಿಲುವಳಿ ಸೂಚನೆಯನ್ನು ತಂದವರೂ ಅವರೇ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಪ್ರಕಾಶ್‌ರವರೆ, ಅವರಿಗೆ ಮನವರಿಕೆ ಮಾಡಿಕೊಟ್ಟು ನಾಳೆ announce ಮಾಡುತ್ತೇವೆಂದು ತೀರ್ಮಾನ ತೆಗೆದುಕೊಂಡರೆ, ಖಂಡಿತವಾಗಿಯೂ ನಾವು ಬರುತ್ತೇವೆ. ಇದರ ಬಗ್ಗೆ ಪ್ರಕಾಶ್‌ರವರಿಗೆ ಅನ್ನಿಸಿದೆ. ಆದರೆ, ಏನು ಮಾಡುವುದು? common decision ತೆಗೆದುಕೊಳ್ಳುವರಿಲ್ಲ. ಒಬ್ಬರ ಮಾತನ್ನು ಒಬ್ಬರು ಕೇಳುವುದಿಲ್ಲ. ಮಧ್ಯಾಹ್ನ ಊಟ ಇತ್ತು. ಯಡಿಯೂರಪ್ಪನವರು consult ಮಾಡಿಲ್ಲ. ಏಕೆಂದರೆ, ಮುಖ್ಯಮಂತ್ರಿಯವರು ನನ್ನ ಪಕ್ಕದಲ್ಲೇ ಊಟ ಮಾಡುತ್ತಿದ್ದರು. ಅವರು ಊಟ ಮಾಡಿ ಮೇಲೆ ಹೋದರು. ಯಡಿಯೂರಪ್ಪನವರು ಎಲ್ಲರನ್ನೂ receive ಮಾಡುವುದು, ಕಳುಹಿಸಿಕೊಡುವುದನ್ನೇ ಮಾಡುತ್ತಿದ್ದರು. ಅನಂತರ, council members ಬಂದರು. ಅವರು ನಮಗಿಂತಲೂ late ಆಗಿ ಬಂದರು. ಅವರೆಲ್ಲರಿಗೂ ಊಟ ಮಾಡಿಸಿ ಇಲ್ಲಿಗೇ ಬಂದರು. Telephoneನಲ್ಲಿ consult ಮಾಡಿದ್ದರೋ ಅಥವಾ ಮೊದಲೇ ಕರೆದಿದ್ದರೋ ಗೊತ್ತಿಲ್ಲ. ಆದರೆ, ಖಂಡಿತವಾಗಿಯೂ ಅದರ ಬಗ್ಗೆ ಚರ್ಚೆಯಾಗಿಲ್ಲ, ಏನೂ ಆಗಿಲ್ಲ. ಅದೇನಾದರೂ ಇರಲಿ. ನಮಗೆ ಸಂತೋಷವೇನೆಂದರೆ, ಪಾಪ! ಯಡಿಯೂರಪ್ಪನವರು ಅಷ್ಟು ಧೈರ್ಯ ಮಾಡಿ ಜೆ.ಡಿ(ಎಸ್) ಅನ್ನು ಬಿಟ್ಟು ನಿರ್ಣಯ ತೆಗೆದುಕೊಳ್ಳುವ ಕೆಲಸ ಮಾಡಿದ್ದಾರೆ. ಅದನ್ನು ನಾವು appreciate ಮಾಡುತ್ತೇವೆ. ಆದರೆ, ಅವರನ್ನು ಬಿಟ್ಟು ಇವರಿಗೆ ಹೇಳಲು ಧೈರ್ಯವಿಲ್ಲ. ಆದ್ದರಿಂದ, ಇಂತಹ ಗೊಂದಲದಲ್ಲಿ ಚರ್ಚೆ ಬೇಡ.

ಉಪಾಧ್ಯಾಕ್ಷರು: ಅವರು ಹೇಳಿದ್ದಕ್ಕೆ ಏನಾದರೂ Parliamentary Affairs Ministerರವರು convince ಆಗಿದ್ದಾರೆಯೇ?

ಶ್ರೀ ಆರ್.ವಿ.ದೇಶಪಾಂಡೆ: ನಾನು ಗೃಹ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ನಮ್ಮ ನಾಯಕರಾದ ಖರ್ಗೆಯವರು ಹೇಳಿದಂತೆ ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮನ್ನೂ, ಮಾನ್ಯ ಮುಖ್ಯಮಂತ್ರಿಯವರನ್ನೂ consult ಮಾಡಿಲ್ಲ. 50 ಸಾವಿರದವರೆಗೆ ಸಾಲ ಮನ್ನಾ ಎಂದು ಇಲ್ಲಿ ಹೇಳಿಕೆ ಕೊಟ್ಟು ಹೋದರು. ಅವರು ಎಲ್ಲಿಗೆ ಹೋಗಿದ್ದಾರೋ, ನಮಗೆ ಗೊತ್ತಿಲ್ಲ. ನಮ್ಮ ಸ್ನೇಹಿತರು ಬಾವಿಯಲ್ಲಿದ್ದಾರೆ. ಮುಖ್ಯಮಂತ್ರಿಯವರು ಎಲ್ಲಾ ರೈತರ ಸಾಲ ಮನ್ನಾ

ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ, ತಕ್ಷಣ ಮುಖ್ಯಮಂತ್ರಿಯವರನ್ನು ಕರೆಸಿ, ಅವರಿಗೆ ಒಳ್ಳೆಯ ಅವಕಾಶವಿದೆ, ಅವರಿಂದ ಎಲ್ಲಾ ರೈತರಿಗೂ 25 ಸಾವಿರವೆಂದು declare ಮಾಡಿಸಿಬಿಡಿ. ಇದರಿಂದ ಜೆ.ಡಿ(ಎಸ್)ಗೆ credit ಬರುತ್ತದೆ. JD(S) partyಗೆ credit ಬರುತ್ತದೆ. ಬಿ.ಜೆ.ಪಿ.ಗೇಕೆ credit ಹೋಗಬೇಕು? ಜೆ.ಡಿ(ಎಸ್)ನವರೇ ಅದನ್ನು ತೆಗೆದುಕೊಳ್ಳಲಿ. ಮತ್ತೆ ತಾವು Secular party ಎಂದು ಹೇಳುತ್ತೀರಲ್ಲಾ? B.J.P. has over taken you. You over take them.

ಶ್ರೀ ಎಂ.ಪಿ.ಪ್ರಕಾಶ್: ಆ ಹೇಳಿಕೆ ನಮ್ಮ ಸರ್ಕಾರದ ಹೇಳಿಕೆ. ಆದ್ದರಿಂದ, ಅವರನ್ನು consult ಮಾಡಿಲ್ಲ, ಇವರನ್ನು consult ಮಾಡಿಲ್ಲವೆಂಬ ಪ್ರಶ್ನೆ ಉದ್ಭವವಾಗುವುದಿಲ್ಲ.

(ಗೊಂದಲ)

ಶ್ರೀ ಎಮ್.ಪಿ.ಪ್ರಕಾಶ್: Record ಸರಿ ಹೋಗಲಿ ಎಂಬುದಕ್ಕಾಗಿ ಮಾನ್ಯ ಉಪಮುಖ್ಯಮಂತ್ರಿಯವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದು ಸರ್ಕಾರದ ಹೇಳಿಕೆ. ನಾವೆಲ್ಲರೂ ಅದಕ್ಕೆ ಬಂಧನವಾಗುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾವು ಬಜೆಟ್ present ಮಾಡುವುದಕ್ಕಿಂತ ಮುಂಚಿತವಾಗಿ ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ, ಕ್ಯಾಬಿನೆಟ್‌ನ formal approval ತೆಗೆದುಕೊಂಡು ಬಂದು ತಯಾರು ಮಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್: No. No. approval ಕೊಡುವುದಿಲ್ಲ. Salient features ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ: ಹೌದೌದು! ಹಾಗಾದರೆ, ಬಜೆಟ್ ಏಕೆ ಕ್ಯಾಬಿನೆಟ್‌ಗೆ ಹೋಗುತ್ತದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವರು ಐದು ಕೋಟಿಗಿಂತಲೂ ಹೆಚ್ಚು ಹಣವನ್ನು ಕ್ಯಾಬಿನೆಟ್ ಮುಂದೆ ತರದೇ ಇಲ್ಲಿಯೇ ಹೇಳಿಬಿಟ್ಟರೆ, ಎಲ್ಲವನ್ನೂ ಒಪ್ಪಬಹುದೆಂದರೆ, ಅದು legal ಆಗುವುದು ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ನಮಗೂ ಗೊತ್ತಿದೆ. ಎಷ್ಟು ಸಲ ಘಟನೋತ್ತರ ಒಪ್ಪಿಗೆಯನ್ನು ಕೊಟ್ಟಿಲ್ಲ? ಆದ್ದರಿಂದ, ಅದರ ಬಗ್ಗೆ ಏನೂ ಯೋಚನೆ ಮಾಡಬೇಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: Hats off to Mr.M.P.Prakash. ಏಕೆಂದರೆ, ಅವರು ಇದ್ದುದ್ದನ್ನು ಇದ್ದಂತೆಯೇ ಒಪ್ಪಿಕೊಂಡರು. ಘಟನೋತ್ತರ

ಒಪ್ಪಿಗೆಯನ್ನು ಎಷ್ಟೋ ಸಲ ನಾವು ಮಾಡಿಕೊಳ್ಳುತ್ತೇವೆ ಎಂದರೆ, ಇದರ ಅರ್ಥ ಯಾರನ್ನೂ consult ಮಾಡಿಲ್ಲ. ಅದನ್ನು ಯಡಿಯೂರಪ್ಪನವರು suo moto credit ತೆಗೆದುಕೊಂಡು ಮಾಡುತ್ತಿದ್ದರು. ಆದ್ದರಿಂದ, ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ, for his courage.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದಂತಹ ಮಾತು ಇಡೀ ಸರ್ಕಾರದ ಮಾತು. ಇದರಲ್ಲಿ ಹಿಂದೆ ನೋಡುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಈ ಸದನ ಯಾವ ನಿಯಮದಡಿಯಲ್ಲಿ ನಡೆಯುತ್ತಿದೆ ಎಂಬುದನ್ನು ಹೇಳಬೇಕು. ಏಕೆಂದರೆ, ನಿಲುವಳಿ ಸೂಚನೆಯನ್ನು ಮಂಡಿಸಿ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಅವರು ಮಾತನಾಡಲೂ ತಯಾರಿಲ್ಲ.

ಉಪಾಧ್ಯಕ್ಷರು: ಯಾವ ನಿಯಮವನ್ನೂ ಇಟ್ಟುಕೊಂಡು ಇಲ್ಲಿ ಚರ್ಚೆ ನಡೆಯುತ್ತಿಲ್ಲ. ಅವರನ್ನು convince ಮಾಡಿ, ಅವರನ್ನು ಅವರವರ ಜಾಗಕ್ಕೆ ಕಳುಹಿಸುವ ಕೆಲಸ ಮಾತ್ರ ನಡೆಯುತ್ತಿದೆ. ನಾವು ಯಾವ ನಿಯಮವನ್ನೂ ಇಟ್ಟುಕೊಂಡಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಅವರನ್ನು ನಾವು convince ಮಾಡುತ್ತೇವೆ.

ಉಪಾಧ್ಯಕ್ಷರು: ಅದಕ್ಕೆ ಅವಕಾಶವನ್ನೂ ಕೊಟ್ಟಿದ್ದೇವಲ್ಲ.

ಶ್ರೀ ಆರಗ ಜ್ಞಾನೇಂದ್ರ: ಅವರು ಚರ್ಚೆಗೆ ತಯಾರಿಲ್ಲ. ಅವರು ಮೊನ್ನೆ ಏನೋ ಮಹಾ ತೇಜೋವಧೆ ಮಾಡುವುದಕ್ಕಾಗಿ ನಿಲುವಳಿ ಸೂಚನೆಯಲ್ಲಿ ತಂದರು. ಅದರಲ್ಲಿ ಏನೂ ಇಲ್ಲ. ಆದ್ದರಿಂದ, ಅವರು ಇವತ್ತು ಸುಮ್ಮನೆ ಕುಳಿತುಕೊಂಡು ಬಿಟ್ಟಿದ್ದಾರೆ. ಚರ್ಚೆಗೆ ತಯಾರೇ ಇಲ್ಲ. ಏನೇನೋ ಮಾಡಲು, ನಮ್ಮ ನಮ್ಮಲ್ಲೇ ಹಚ್ಚಿಡಲು ಇನ್ನೇನನ್ನೋ ಮಾಡಲು ಹೊರಟಿದ್ದಾರೆ! ಆದರೆ, ಅದು ಫಲಪ್ರದವಾಗುವುದಿಲ್ಲ.

ಉಪಾಧ್ಯಕ್ಷರು: ಮಾಧುಸ್ವಾಮಿಯವರು, ವಾಟಾಳ್‌ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ಈಗ ನಿಯಮ 69ರ ಅಡಿಯಲ್ಲಿ . ಚರ್ಚೆ ಪ್ರಾರಂಭವಾಗುತ್ತಿದೆ.

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ಎ.ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ: ಅಲ್ಲಿ ನಿಂತು ಮಾತನಾಡುವಂತಿಲ್ಲ. ದಯವಿಟ್ಟು ಮಾನ್ಯ ಹಿರಿಯ ಸದಸ್ಯರು ಅವರ chairಗೆ ಬರಬೇಕು. ಇಲ್ಲದಿದ್ದರೆ, ಸಭೆ orderನಲ್ಲಿರುವುದಿಲ್ಲ. ಆದ್ದರಿಂದ, ಅವರನ್ನು ನಿಯಮ 69ರಡಿ ಮಾತನಾಡಲು ಹೇಳಿ.

ಉಪಾಧ್ಯಕ್ಷರು: ಸಭೆ orderನಲ್ಲಿದೆ.

ಶ್ರೀ ಆರಗ ಜ್ಞಾನೇಂದ್ರ: ಅವರ ಹತ್ತಿರ ಏನಾದರು ಇದ್ದರೆ ಹೇಳಲಿ. ಇಲ್ಲದಿದ್ದರೆ, ಇಲ್ಲವೆಂದು ಒಪ್ಪಿಕೊಳ್ಳಲಿ. ಇಲ್ಲದಿದ್ದರೆ, ಅದನ್ನು ಅಜೆಂಡಾದಿಂದ ಕೈ ಬಿಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: ಮಾನ್ಯ ಜ್ಞಾನೇಂದ್ರರವರೆ, life long ಅವರ ಪರವಾಗಿ ಚರ್ಚೆ ಮಾಡಿ, ಮಾಡಿ, ಸೋತು ಹೊಗಿದ್ದೀರಿ. ಇನ್ನೂ ಏಕೆ ಸುಮ್ಮನೆ ಅವರ ಪರವಾಗಿ ಮಾತನಾಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ: ಆ ಕಡೆಯಿಂದ ಚರ್ಚೆ ಶುರುವಾಗಬೇಕು. ಅವರಿಂದ ಚರ್ಚೆ ಶುರುವಾಗಲಿ. ಅವರೇನು prepare ಆಗಿ ಬಂದಿದ್ದಾರೆ, ದಯವಿಟ್ಟು ವಿಷಯದ ಮೇಲೆ ಬೆಳಕು ಚೆಲ್ಲಬೇಕು. ಅವರ ಭಾಷಣವನ್ನು ನಾವೂ ಕೇಳಬೇಕೆಂದಿದ್ದೇವೆ.

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ: ಅದರಲ್ಲಿ ಏನೂ ಇಲ್ಲ. ಅದನ್ನೇಕೆ ಎತ್ತೆತ್ತಿ ತೋರಿಸುತ್ತೀರಿ?

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಆರಗ ಜ್ಞಾನೇಂದ್ರ: ಅದನ್ನು ಅವರು ಹೇಳಲಿ ಎಂದು ಹೇಳುತ್ತಿದ್ದೇನೆ. Sir, ನಿಯಮ 69ರ ಪ್ರಕಾರ ಅದನ್ನು ಅಜೆಂಡಾದಿಂದ ಕೈ ಬಿಡಬೇಕು. ಇಲ್ಲದಿದ್ದರೆ, ಅವರು ಮಾತನಾಡಬೇಕು. ಎರಡರಲ್ಲಿ ಒಂದು ಆಗಬೇಕು. ಅನವಶ್ಯಕವಾಗಿ ಕಾಲಹರಣವಾಗುತ್ತಿದೆ. ಬಜೆಟ್ ಬಗ್ಗೆ ಚರ್ಚೆಯಾಗಬೇಕಾಗಿದೆ. ಇಷ್ಟು ದೊಡ್ಡ ಬಜೆಟನ್ನು ಮಂಡನೆ ಮಾಡಿದ್ದಾರೆ, ಇಡೀ ಕರ್ನಾಟಕ ರಾಜ್ಯದ ಜನರು ಇದರ ಬಗ್ಗೆ ಟೀಕೆ–ಟಿಪ್ಪಣಿಗಳು ಏನು ಬರುತ್ತದೆಂದು ನಿರೀಕ್ಷೆ ಮಾಡುತ್ತಿದ್ದಾರೆ. ವಿರೋಧ ಪಕ್ಷದವರು ಇದ್ಯಾವುದಕ್ಕೂ ತಯಾರಿಲ್ಲವೆಂದರೆ, ಹೇಗೆ? ನಮ್ಮಲ್ಲಿ ಊಟಿ ಎತ್ತುಗಳು ಅಲ್ಲಲ್ಲೇ ಬಿದ್ದುಬಿಡುತ್ತವೆ. ಎಷ್ಟೇ ಹೊಡೆದರೂ, ಬಾಲ ತಿರುಚಿದರೂ, ಎದ್ದೇಳುವುದೇ ಇಲ್ಲ. ಇಲ್ಲಿ ಆ ರೀತಿಯಾಗಿದೆ. ನಮ್ಮ ವಿರೋಧ ಪಕ್ಷದವರ ಗತಿ ಏನಾಗಿದೆಯೆಂದರೆ,

ಅವರಿಗೆ ಎಷ್ಟೇ ಬಾಲ ತಿರುಚಿದರೂ, ಏಳುವಂತಿಲ್ಲ. ಅವರು ಎಲ್ಲಿಯೋ ಒಂದು ಕಡೆ ಚಟುವಟಿಕೆಯಿಂದ ಎದ್ದೇಳುತ್ತಾರೆಂದರೆ, ನಮ್ಮನ್ನೂ ಕೂಡ ಎಚ್ಚರಿಸುತ್ತಾರೆ. ರಾಜ್ಯದ ಜನರ ಕಣ್ಣು ತೆರೆಸುತ್ತಾರೆಂದರೆ, ಹೀಗೆ ಮಾಡುತ್ತಿದ್ದಾರೆ. ವಿಚಿತ್ರವೆಂದರೆ, ಅವರ ಗೊಂದಲಗಳೇನಿವೆ, ಈಗ ಸಿದ್ಧರಾಮಯ್ಯನವರು elect ಆದ ಮೇಲಂತೂ ಭಾರೀ ಗೊಂದಲ ಶುರುವಾಗಿ ಬಿಟ್ಟಿದೆ. ಆದ್ದರಿಂದ, ಯಾರೂ ಅಧ್ಯಯನ ಮಾಡಿಕೊಂಡು ಬರುವ ಸ್ಥಿತಿಯಲ್ಲಿಲ್ಲ.

ಉಪಾಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ಕೊನೆಯದಾಗಿ ಕೇಳಿಕೊಳ್ಳುತ್ತಿದ್ದೇನೆ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಚರ್ಚೆಯನ್ನು ಪ್ರಾರಂಭ ಮಾಡುತ್ತೀರೋ? ಹೇಗೆ?

(ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಿದ್ದರು)

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: ಅವರುಗಳು ಅಲ್ಲಿ ಇದ್ದು, ನಾವು ಇಲ್ಲಿ ನಿಂತುಕೊಂಡು ಮಾತನಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಅವರ issue ಏನೆಂದರೆ, pertaining to ರೈತರ ಸಾಲ ಮನ್ನಾ. ನಾವು ಮಾತನಾಡುವುದನ್ನೂ ಅದೇ ಕಾರಣಕ್ಕೆ ನಿಲ್ಲಿಸಿ, walk out ಮಾಡಿದ್ದೇವೆ. ಆ ರೀತಿ walk out ಮಾಡಿ, ಅದೇ ವಿಷಯದ ಮೇಲೆ ಮಾತನಾಡಬೇಕೆಂದರೆ, ಹೇಗಾಗುತ್ತದೆ?

ಉಪಾಧ್ಯಕ್ಷರು: ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10-30 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಮಾರ್ಚ್ ಮಾಹೆ 2007ರ ಶುಕ್ರವಾರದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು)